ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 13 ಮಂಗಳವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 119 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಶ್ರೀ ರಾಘವೇಂದ್ರ ಗುರುಸಾರ್ವಭೌಮರ 353ನೇ ಆರಾಧನಾ ಮಹೋತ್ಸವ



ಮೈಸೂರು, ಆ.12– ನಗರದ ಜಯ ಲಕ್ಷ್ಮೀಪುರಂನಲ್ಲಿರುವ ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ ವತಿಯಿಂದ ಆ.20ರಿಂದ 22ರವರೆಗೆ ಶ್ರೀ ರಾಘವೇಂದ್ರ ಗುರುಸಾರ್ವಭೌಮರ 353ನೇ ಆರಾಧನಾ ಮಹೋತ್ಸವವನ್ನು ಆಯೋಜಿಸಲಾಗಿದೆ.

ಪ್ರತಿದಿನ ಬೆಳಗ್ಗೆ 5.30ಕ್ಕೆ ಸುಪ್ರಭಾತ, 7ರಿಂದ 7.45ರವರೆಗೆ ಮಹಾ ಪಂಚಾಮೃತ ಅಭಿಷೇಕ, 8ರಿಂದ 10ರವರೆಗೆ ಕನಕಾಭಿಷೇಕ, ಸರ್ವಸೇವೆ, ಇತ್ಯಾದಿ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, 12.30ರಿಂದ 2ರವರೆಗೆ ಪ್ರಸಾದ ವಿನಿಯೋಗ ವಿರುತ್ತದೆ. ಸಂಜೆ 7ಕ್ಕೆ ಸ್ವಸ್ತಿವಾಚನ, ಶ್ರೇಯ ಪ್ರಾರ್ಥನೆ, ಮಹಾಮಂಗಳಾರತಿ ಇರುತ್ತದೆ. ಸಂಜೆ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಆ.20ರಂದು ಸಂಜೆ 6.30ರಿಂದ 9ರವರೆಗೆ ವಿದ್ವಾನ್ ಸಮೀರಾಚಾರ್ಯ ಇವರಿಂದ ಗಾಯನವಿದೆ. ಇವರಿಗೆ ಪಕ್ಕವಾದ್ಯದಲ್ಲಿ ಕೀಬೋರ್ಡ್–ವಿದ್ವಾನ್ ಗಣೇಶ್ ಭಟ್, ತಬಲಾ–ವಿದ್ವಾನ್ ಆತ್ಮಾರಾಮ್, ರಿದಮ್ ಪ್ಯಾಡ್ಸ್–ವಿದ್ವಾನ್ ವಿನಯ್ ರಂಗಧೊಳ್ ಸಹಕಾರ ನೀಡಲಿದ್ದಾರೆ. ಆ.21ರಂದು ಸಂಜೆ 5ರಿಂದ 6ರವರೆಗೆ ಶ್ರೀ ಸತ್ಯಧ್ಯಾನ ಭಜನಾ ಮಂಡಳಿಯವರಿಂದ ಭಜನೆ, ಸಂಜೆ 6.30ರಿಂದ 9ರವರೆಗೆ ವಿದ್ವಾನ್ ಎಸ್.ಶಂಕರ್ ಇವರಿಂದ ಗಾಯನ. ಇವರಿಗೆ ಪಕ್ಕವಾದ್ಯದಲ್ಲಿ, ವಯೋಲಿನ್–ವಿದುಷಿ ಪೃಥ್ವಿ ಭಾಸ್ಕರ್, ಮೃದಂಗ–ವಿದ್ವಾನ್ ಹೆಚ್.ಎಲ್.ಶಿವಶಂಕರಸ್ವಾಮಿ, ಘಟಂ–ವಿದ್ವಾನ್ ಶರತ್ ಕೌಶಿಕ್ ಸಹಕಾರ ನೀಡಲಿದ್ದಾರೆ.

ಆ.22ರಂದು ಸಂಜೆ 6,30ರಿಂದ 9ರವರೆಗೆ ವಿದ್ವಾನ್ ಹೆಚ್.ಎಲ್.ಶಿವಶಂಕರಸ್ವಾಮಿ ಮತ್ತು ವೃಂದದವರಿಂದ ತಾಳ ವಾದ್ಯ ಕಛೇರಿ ಏರ್ಪಡಿಸಲಾಗಿದೆ. ಆ.22ರಂದು ಬೆಳಗ್ಗೆ 10 ಗಂಟೆಗೆ ಜಯಲಕ್ಷ್ಮೀಪುರಂನ ಪ್ರಮುಖ ಬೀದಿಗಳಲ್ಲಿ ಶ್ರೀ ಗುರುರಾಯರ ಮಹಾರಥೋತ್ಸವ ನಡೆಯಲಿದೆ ಎಂದು ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಬೃಹತ್ ಯೋಗ ಜಾಗೃತಿ ಅಭಿಯಾನ



ಲೇಡಿಸ್ ಸರ್ಕಲ್ ಇಂಡಿಯಾ ಪದಾಧಿಕಾರಿಗಳಾದ ಕೋಮಲ, ಪ್ರಿಯಾಂಕ ರವಿ ಕುಮಾರ್, ಸವಿನಯ ಸ್ವರೂಪ್, ರೌಂಡ್ ಟೇಬಲ್ ಇಂಡಿಯಾ ಪದಾಧಿಕಾರಿಗಳಾದ ಸುನಿಲ್, ಕುಮಾರ್ ಪಾಲ್, ಕಾಂಚನಾ ಗಂಗಾ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಆ.12–ಲೇಡಿಸ್ ಸರ್ಕಲ್ ಇಂಡಿಯಾ ವಲಯ–13 ವತಿಯಿಂದ ರೌಂಡ್ ಟೇಬಲ್ ಇಂಡಿಯಾ ಮತ್ತು ಭಾರತದ 41 ಕ್ಲಬ್‌ಗಳ ಸಹಯೋಗದೊಂದಿಗೆ ಮೈಸೂರಿನ ನೆಕ್ಸಸ್ ಮಾಲ್‌ನಲ್ಲಿ ಬೃಹತ್ ಯೋಗ ಜಾಗೃತಿ ಅಭಿಯಾನವನ್ನು ಆಯೋಜಿಸಲಾಗಿತ್ತು.

ಮೈಸೂರಿನ ಯೋಗ ಗುರುಗಳು ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ನಮ್ಮೊಂದಿಗೆ ಸಹಕರಿಸಿದರು. ಅಷ್ಟಾಂಗ ಯೋಗ, ಕಲಾತ್ಮಕ ಯೋಗ, ನೃತ್ಯ ಯೋಗ, ಸಮಕಾಲೀನ ಯೋಗ, ಲಯಬದ್ಧ ಯೋಗವನ್ನು ಪ್ರಸ್ತುತಪಡಿಸಿದರು.

ಮೆಡಿವೇವ್ ಗರ್ಭಧಾರಣಾ ಮತ್ತು ಸಂಶೋಧನಾ ಆಸ್ಪತ್ರೆ ನಿರ್ದೇಶಕ ಡಾ.ಸಿ.ಶರತ್‌ಕುಮಾರ್ ಆರೋಗ್ಯ ಮತ್ತು ಯೋಗ ಕುರಿತು ಮಾತನಾಡಿದರು. ಕಾಂಚನಾಗಂಗಾ ಅವರ ಬೈಕ್ ಯೋಗ ಪ್ರದರ್ಶನ ಆಕರ್ಷಣೀಯವಾಗಿತ್ತು. ಈ ವೇಳೆ 5 ವಿದ್ಯಾರ್ಥಿಗಳಿಗೆ ಶಾಲಾ ಶುಲ್ಕವನ್ನು ಮತ್ತು ಕಬಡ್ಡಿ ಆಟಗಾರ ರಾಕೇಶ್‌ಗೌಡ ಅವರಿಗೆ ತರಬೇತಿ ಶುಲ್ಕ ಒದಗಿಸಲಾಯಿತು.

ಮುಡಾ, ವಾಲ್ಮೀಕಿ ನಿಗಮದ ಹಗರಣದಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಒತ್ತಾಯ

ಮೈಸೂರು, ಆ.12(ಜಿಎ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಮತ್ತು ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಹಗರಣಗಳ ಪ್ರಮುಖ ಪಾತ್ರದಾರರು ಅಲ್ಲಿನ ಅಧಿಕಾರಿಗಳಾಗಿದ್ದು, ಅವರ ವಿರುದ್ಧ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಮೈಸೂರು ರಕ್ಷಣಾ ವೇದಿಕೆ ಅಧ್ಯಕ್ಷ ಮೈಕಾ. ಪ್ರೇಮ್ ಕುಮಾರ್ ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಗರಣಗಳನ್ನು ರಾಜಕೀಯಗೊಳಿಸಲಾಗುತ್ತಿದೆ. ಅಲ್ಲಿನ ಭ್ರಷ್ಟ ಅಧಿಕಾರಿಗಳನ್ನು ರಕ್ಷಿಸುವುದು ಮತ್ತು ಮುಖ್ಯಮಂತ್ರಿಯ ರಾಜೀನಾಮೆ ಪಡೆಯುವುದೇ ವಿರೋಧ ಪಕ್ಷಗಳ ಮುಖ್ಯ ಉದ್ದೇಶವಾಗಿದೆ. ಸದನದಲ್ಲಿ ರಚನಾತ್ಮಕವಾಗಿರದೇ ಪಾದಯಾತ್ರೆ ಮಾಡಿದರೆ ಯಾವುದೇ ಪ್ರಯೋಜನವಿಲ್ಲ ಎಂದರು.

ಸಿದ್ದರಾಮಯ್ಯ ಅವರನ್ನು ಬದಲಾಯಿಸಿದರೆ, ಹಿಂದುಳಿದ ವರ್ಗ ಮತ್ತು ದಲಿತರಿಗೆ ಮುಂದಿನ 25 ವರ್ಷಗಳ ಕಾಲ ಯಾವುದೇ ಅಧಿಕಾರ ಸಿಗದಂತೆ ಆಗುತ್ತದೆ. ಅದಕ್ಕೆ ಯಾರೂ ಸಹಕರಿಸಬಾರದು. ಮುಡಾದಲ್ಲಿ ಕಾರ್ಯ ನಿರ್ವಹಿಸಿರುವ ಎಲ್ಲ ನೌಕರರನ್ನು ಕೂಡಲೇ ವರ್ಗ ಮಾಡಬೇಕು. ಹಗರಣದ ಅವಧಿಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಆಯುಕ್ತರಾದ ನಟೇಶ್ ಮತ್ತು ಜಿ.ಟಿ.ದಿನೇಶ್‌ಕುಮಾರ್ ಅವರನ್ನು ಅಮಾನತ್ತು ಮಾಡಬೇಕು. ತನಿಖೆ ಮುಗಿಯುವವರೆಗೂ ಅವರಿಗೆ ಯಾವುದೇ ಹುದ್ದೆ, ವೇತನ ನೀಡಬಾರದು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ವೇದಿಕೆ ಉಪಾಧ್ಯಕ್ಷ ಕುಮಾರ್‌ಗೌಡ ಉಪಸ್ಥಿತರಿದ್ದರು.

ಕೌಟಿಲ್ಯ ವಿದ್ಯಾಲಯದ ವಿದ್ಯಾರ್ಥಿಗಳಿಂದ ಸ್ವಚ್ಛತಾ ಕಾರ್ಯಕ್ರಮ



ಮೈಸೂರಿನ ಕೌಟಿಲ್ಯ ವಿದ್ಯಾಲಯದ ವಿದ್ಯಾರ್ಥಿಗಳಿಂದ ಸ್ಥಾಪಿಸಲ್ಪಟ್ಟಿರುವ ರೋಟರಿ ಇಂಟರಾಕ್ಟ್ ಕ್ಲಬ್‌ನ ಸಹಯೋಗದೊಂದಿಗೆ ಪ್ಲಾಸ್ಟಿಕ್ ನಿರ್ಮೂಲನೆ ಕುರಿತು ಜಾಗೃತಿ ಕಾರ್ಯಕ್ರಮ, ಚಾಮುಂಡಿಬೆಟ್ಟದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಅಲ್ಲದೆ, ಬೆಟ್ಟದಲ್ಲಿ ಜಾಥಾ ನಡೆಸಿ, ಸಾರ್ವಜನಿಕರಿಗೆ ಪ್ಲಾಸ್ಟಿಕ್ ನಿರ್ಮೂಲನೆಯ ಬಗ್ಗೆ ಪ್ಲಾಸ್ಟಿಕ್‌ನಿಂದ ಸ್ವಾತಂತ್ರ್ಯ ಪಡೆಯೋಣ ಬೀದಿನಾಟಕವನ್ನೂ ಪ್ರದರ್ಶಿಸಿದರು.

ಬಾಂಗ್ಲಾದಲ್ಲಿ ಹಿಂದೂಗಳ ನರಮೇಧ: ಅಮೆರಿಕದಲ್ಲಿ ಪ್ರತಿಭಟನೆ



ಹ್ಯೂಸ್ಟನ್ (ಅಮೆರಿಕ): ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ ಹಾಗೂ ಹಿಂಸಾಚಾರ ಖಂಡಿಸಿ ಅಮೆರಿಕದಲ್ಲೂ ಪ್ರತಿಭಟನೆಯ ಕಹಳೆ ಮೊಳಗಿದೆ. ಅಮೆರಿಕದ ಹ್ಯೂಸ್ಟನ್ ನಗರದ ಶುಗರ್ ಲ್ಯಾಂಡ್ ಸಿಟಿ ಹಾಲ್‌ನಲ್ಲಿ ನೂರಾರು ಜನರು ಪ್ರತಿಭಟನೆ ನಡೆಸಿದರು. ಭಾರತೀಯ ಮೂಲದ ಅಮೆರಿಕನ್ನರು ಹಾಗೂ ಬಾಂಗ್ಲಾದೇಶ ಮೂಲದ ಹಿಂದೂಗಳು ಈ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರ ಸರ್ಕಾರ ಈ ಕೂಡಲೇ ಬಾಂಗ್ಲಾದೇಶದಲ್ಲಿ ಇರುವ ಹಿಂದೂಗಳ ರಕ್ಷಣೆಗೆ ಸೂಕ್ತ ಕ್ರಮ ವಹಿಸಬೇಕು ಎಂದು ಆಗ್ರಹಿಸಿದ ಪ್ರತಿಭಟನಾಕಾರರು, ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರಾಗಿರುವ ಹಿಂದೂಗಳ ರಕ್ಷಣೆಗೆ ಕ್ರಮ ವಹಿಸದೇ ಇದ್ದರೆ ಈ ಪ್ರಾಂತ್ಯದಲ್ಲಿ ಶಾಂತಿ ಹಾಗೂ ಸುವ್ಯವಸ್ಥೆ ನೆಲೆಸೋದಿಲ್ಲ ಎಂದು ಆತಂಕ ಹೊರ ಹಾಕಿದ್ದಾರೆ. ಪ್ರತಿಭಟನೆಯಲ್ಲಿ ಹ್ಯೂಸ್ಟನ್ ಹಿಂದೂ ಸಂಘಟನೆಗಳಾದ ಮೈತ್ರಿ, ಅಮೆರಿಕ ವಿಶ್ವ ಹಿಂದೂ ಪರಿಷತ್, ಹಿಂದೂ ಆಕ್ಷನ್, ಹಿಂದೂ ಪ್ಯಾಕ್ಟ್, ಹ್ಯೂಸ್ಟನ್ ದುರ್ಗಾಬರಿ ಸೊಸೈಟಿ, ಇಸ್ಕಾನ್, ಗ್ಲೋಬಲ್ ಕಾಶ್ಮೀರಿ ಪಂಡಿತ್ ಡಯಾಸ್ಪೋರಾ ಸೇರಿದಂತೆ ಹಲವು ಸಂಘಟನೆಗಳು ಭಾಗಿಯಾಗಿದ್ದವು.

ಬೆಟ್ಟಗಳು ಕುಸಿದ ವಯನಾಡಲ್ಲಿ ಈಗ ನೀರವ ಮೌನ; ಸಂತ್ರಸ್ತರ ಆಕ್ರಂದನ



ಕೇರಳದ ಮುಂಡಕ್ಕೈ ಗ್ರಾಮದ ಭೀಕರ ದೃಶ್ಯ



■ ಎಂ.ಟಿ.ಯೋಗೇಶ್ ಕುಮಾರ್

ವಯನಾಡು, ಆ.12– ಪ್ರಕೃತಿ ಸೌಂದರ್ಯದ ಗಣಿ ದೇವರ ನಾಡು ಕೇರಳದ ವಯನಾಡಿನ ಮುಂಡಕ್ಕೈ ಗ್ರಾಮದಲ್ಲಿ ನೀರವ ಮೌನ ಆವರಿಸಿದ್ದು, ಮರಣ ಮೃದಂಗದ ಸದ್ದು ಎದೆ ನಡುಗಿಸುವಂತಿದೆ...

ಹೌದು! ಕಳೆದ ಜು.29ರ ಮುಂಜಾನೆ ಸಂಭವಿಸಿದ ಘನಘೋರ ದುರಂತ ಅದು. ದೇವರ ನಾಡು ಕೇರಳದ ಇತಿಹಾಸದಲ್ಲಿಯೇ ಕಂಡು ಕೇಳರಿಯದ ಭೂ ಕುಸಿತ ಉಂಟಾಗಿ 15 ದಿನಗಳು ಕಳೆದರು ಬದುಕುಳಿದ ಸಂತ್ರಸ್ತರ ಅಂತರಂಗದಲ್ಲಿನ ಆತಂಕ ಹೃದಯ ಕಂಪಿಸುವಂತಿದೆ.

ನೆಲಸಮವಾಗಿರುವ ವಯನಾಡಿನ ಇಡೀ ಮುಂಡಕ್ಕೈ ಗ್ರಾಮದಲ್ಲಿ ಬಂಡೆಗಳು ರಕ್ಕಸ ರೂಪತಾಳಿವೆ. ಭಯದ ವಾತಾವರಣ ಆವರಿಸಿದೆ. ಸಂತ್ರಸ್ತರ ಕಣ್ಣುಗಳು ನೀರಿಲ್ಲದೆ ಬರಿದಾಗಿವೆ. ನರಕ ಸದೃಶ್ಯ ಕಣ್ಣಿಗೆ ಕಟ್ಟಿದಂತಿದೆ. ದೇವರ ನಾಡಲ್ಲಿ ದೇವರು ಕೂಡ ಅಸಹಾಯಕತೆಯಿಂದ ಕಣ್ಣು ಮುಚ್ಚಿ ಕುಳಿತಂತಿದೆ. ಕೆಲವೇ ಕೆಲವು ಮನೆಗಳು ಪಳೆಯುಳಿಕೆಯಂತೆ ಉಳಿದಿವೆ. ಭೂ ಕುಸಿತಕ್ಕೂ ಮೊದಲು ಸುಂದರ ಬೆಟ್ಟ–ಗುಡ್ಡಗಳು, ಟೀ ಎಸ್ಟೇಟ್‌ನ ಹಚ್ಚ ಹಸಿರಿನಿಂದ ಕಂಗೊಳಿಸುತ್ತಿದ್ದ ಮುಂಡಕ್ಕೈ ಗ್ರಾಮ ಪ್ರವಾಸಿ ತಾಣವೂ ಆಗಿತ್ತು. ಪಳಪಳನೆ ಮಿಂಚುವ ನದಿಯ ನೀರು, ಕಣ್ಮನ ಸೆಳೆಯುವ ಜರಿ, ವಿಶ್ರಾಂತಿ ತಾಣಗಳಿಂದ ಕೂಡಿದ್ದ ಸ್ವರ್ಗವೇ ಆಗಿತ್ತು. ಜು.26ರವರೆಗೂ ಸಂಭ್ರಮದ ಅಲೆಯಲ್ಲಿ ತೇಲುತ್ತಿದ್ದ ಸ್ಥಳವಿಂದು ದುಃಖದ ಮಡುವಿನಲ್ಲಿ ಬಿದ್ದು ಚಿರಾಡುತ್ತಿದೆ.



ಚಿತ್ರಗಳು: ಎಂ.ಎನ್.ಲಕ್ಷ್ಮೀನಾರಾಯಣ ಯಾದವ್

ಬೇರೆ ಯಾರಿಗೂ ಬಾರದಿರಲಿ...

ಹಲವು ವರ್ಷಗಳಿಂದ ಮುಂಡಕ್ಕೈ ಗ್ರಾಮದಲ್ಲಿ ತಂದೆ–ತಾಯಿಯೊಂದಿಗೆ ಜೀವನ ನಡೆಸುತ್ತಿದ್ದೆವು. ಚಿಕ್ಕ ಮನೆಯೊಂದರಲ್ಲಿ ವಾಸ ಮಾಡುತ್ತಿದ್ದೆವು. ಆದರೆ ಭೂ ಕುಸಿತದಿಂದ ತಂದೆ–ತಾಯಿಯನ್ನು ಕಳೆದುಕೊಂಡಿದ್ದೇನೆ. ಇಬ್ಬರನ್ನು ನೋಡುವುದಕ್ಕೂ ಸಾಧ್ಯವಾಗಿಲ್ಲ. ಹುಚ್ಚನಂತಾಗಿದ್ದೇನೆ. ನಾವು ಅನುಭವಿಸಿದ ನೋವು ಬೇರೆ ಯಾರಿಗೂ ಬರಬಾರದು.

–ರಾಜೇಶ್, ಮುಂಡಕ್ಕೈ ಗ್ರಾಮದ ಸಂತ್ರಸ್ತ

ಮಡುಗಟ್ಟಿದ ದುಃಖ: ಮುಂಡಕ್ಕೈ ಗ್ರಾಮದಲ್ಲಿ ಸುಮಾರು 350ಕ್ಕೂ ಹೆಚ್ಚು ಮನೆಗಳಿದ್ದವು. ಅವುಗಳಲ್ಲಿ ಬಹುತೇಕ ಎಲ್ಲಾ ಮನೆಗಳು ನೀರು ಮಣ್ಣು ಸೇರಿವೆ. ಅದೃಷ್ಟವಶಾತ್ ಬೆರಳೆಣಿಕೆಯಷ್ಟು ಮಂದಿ ಮಾತ್ರ ಬದುಕುಳಿದಿದ್ದರೆ, ಉಳಿದವರೆಲ್ಲರೂ ಭೂ ಒಡಲು ಸೇರಿ ಪ್ರಕೃತಿಯೊಂದಿಗೆ ಲೀನವಾಗಿದ್ದಾರೆ. ಭೂ ಕುಸಿತದ ಘಟನೆ ನಡೆದು 3 ದಿನದ ನಂತರ ಭೂ ಕುಸಿತದ ಮೂಲ ಸ್ಥಳದ ಬಳಿ ಶೋಧನಾ ಕಾರ್ಯ ನಡೆಸಲಾಗಿದ್ದು, ಮುಂಡಕ್ಕೈ ಗ್ರಾಮದಲ್ಲಿ ಬೆರಳೆಣಿಕೆಯಷ್ಟು ಮೃತದೇಹಗಳು ಸಿಕ್ಕಿವೆ. ಬಹುತೇಕ ಮೃತದೇಹಗಳು ಗ್ರಾಮದಿಂದ ಸಾಕಷ್ಟು ದೂರದಲ್ಲಿ ಸಿಕ್ಕಿವೆ. ಬದುಕುಳಿದವರ ಮನದಲ್ಲಿ ದುಃಖ ಮಡುಗಟ್ಟಿದೆ. ತಮ್ಮವರಿಗಾಗಿ ಹುಡುಕಾಡುವ ವ್ಯರ್ಥ ಪ್ರಯತ್ನ ಮಾಡುತ್ತಿದ್ದಾರೆ. ಸುಂದರ ಗ್ರಾಮ ಸ್ಮಶಾನದಂತಾಗಿದೆ.

ಸುಂದರ ಆಕೃತಿ, ವಿಕೃತಿಯಾಗಿದೆ: ಮುಂಡಕ್ಕೈ ಗ್ರಾಮದ ಪಕ್ಕದ ಕಣಿವೆಯಲ್ಲಿ ಹರಿಯುತ್ತಿದ್ದ ಸಣ್ಣ ಹೊಳೆಯ ಜಾಗ ಇದೀಗ ಬೃಹತ್ ಆಕಾರದಲ್ಲಿ ಚಾಚಿಕೊಂಡಿದೆ. ಆಗಸದಿಂದ ನೋಡಿದರೆ ಸುಂದರ ಆಕೃತಿಯಂತೆ ಕಾಣುತ್ತಿದ್ದ ಜಾಗವೆಲ್ಲಾ ವಿಕೃತಿಯಾಗಿದೆ. ಹಸಿರೆಲ್ಲಾ ಮಾಯವಾಗಿ ಕೆಸರಾಗಿದೆ. ಹೊಳೆ ಹರಿಯುತ್ತಿದ್ದ ಮಾರ್ಗದಲ್ಲಿ ಬೃಹತ್ ಕೊರತವಾಗಿದೆ. ಭೂಕುಸಿತದಿಂದ ಭಾರಿ ಪ್ರಮಾಣದ ಅನಾಹುತಕ್ಕೆ ಒಳಗಾದ ಮುಂಡಕ್ಕೈ ಗ್ರಾಮದ ಚಿತ್ರಣವೇ ಊಹಿಸಲಾಗದಷ್ಟು ಬದಲಾಗಿದ್ದು, ಸ್ವಚ್ಛಂಧವಾಗಿ ಜನ ಓಡಾಡಿದ್ದ ಸ್ಥಳವೆಲ್ಲಾ ದೊಡ್ಡ ದೊಡ್ಡ ಕಂದಕವಾಗಿ ಮಾರ್ಪಟ್ಟಿದೆ. ಗ್ರಾಮದ ಪುನಶ್ಚೇತನ ಅಸಾಧ್ಯ ಎಂಬಂತೆ ಅಲ್ಲಿನ ಭೌಗೋಳಿಕ ಪ್ರದೇಶ ವಿಕಾರ ರೂಪ ತಾಳಿದೆ.

ರೈತರಿಗೆ ಮೂರು ದಿನ ತರಬೇತಿ




ಮೈಸೂರು,ಆ.12– ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಆಗಸ್ಟ್ 12 ರಿಂದ 14 ರವರೆಗೆ "ಶುಂಠಿ ಬೆಳೆಯಲ್ಲಿ ಸೂಕ್ಷ್ಮ ನೀರಾವರಿ, ರಸಾವರಿ ತಾಂತ್ರಿಕತೆಗಳು ಮತ್ತು ಆಧುನಿಕ ಬೇಸಾಯ ಪದ್ಧತಿಗಳ ಅಳವಡಿಕೆ ಮೂಲಕ ಅಧಿಕ ಲಾಭ" ಎಂಬ ವಿಷಯದ ಕುರಿತು ರೈತ, ರೈತಮಹಿಳೆಯರಿಗೆ ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ತರಬೇತಿಯಲ್ಲಿ ಭಾಗವಹಿಸುವ ರೈತ, ರೈತಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆಯನ್ನು ಒದಗಿಸಲಾಗುವುದು. ಆಸಕ್ತ ರೈತ, ರೈತಮಹಿಳೆಯರು ತಮ್ಮ ಹೆಸರನ್ನು ತರಬೇತಿ ಕೇಂದ್ರದ ಕೃಷಿ ಅಧಿಕಾರಿ ಅವರ ದೂ.ಸಂ:8277933205ಗೆ ಕರೆ ಮಾಡಿ ನೋಂದಾಯಿಸತಕ್ಕದ್ದು. ಮೈಸೂರು ಜಿಲ್ಲೆಯ 45 ರೈತ, ರೈತಮಹಿಳೆಯರಿಗೆ ಮಾತ್ರ ಅವಕಾಶವಿದ್ದು, ಮೊದಲು ನೋಂದಣಿ ಮಾಡಿದವರಿಗೆ ಆದ್ಯತೆ ನೀಡಲಾಗುವುದು ಎಂದು ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಗ್ಮಾ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಜ್ಞಾನಶಂಕರ್ ಹುಟ್ಟುಹಬ್ಬ ಆಚರಣೆ



ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಎಸ್. ಜ್ಞಾನಶಂಕರ್ ಹುಟ್ಟುಹಬ್ಬವನ್ನು ಆಸ್ಪತ್ರೆ ವೈದ್ಯರು ಮತ್ತು ಸಿಬ್ಬಂದಿಗಳೊಂದಿಗೆ ಆಚರಿಸಲಾಯಿತು. ಈ ಸಂದರ್ಭದಲ್ಲಿ ಆಸ್ಪತ್ರೆ ನಿರ್ದೇಶಕರಾದ ಡಾ. ಕೆ.ಎಂ.ಮಾದಪ್ಪ, ಡಾ. ರಾಜೇಶ್ವರಿ ಮಾದಪ್ಪ, ಶ್ರೀಮತಿ ಶೈಲಶಂಕರ್, ಬೇಬಿ ನಯನ ಚಿತ್ತಜಿತ್, ಆಸ್ಪತ್ರೆಯ ವೈದ್ಯರಾದ ಡಾ.ಅನಿಕೇತ್ ಪ್ರಭಾಕರ್, ಡಾ.ಕನ್ಯಾ ಎಂಎಸ್, ಡಾ.ನಯನ, ಡಾ.ಶ್ರೀದೇವಿ, ಶ್ರೀ ರಾಮಸ್ವಾಮಿ, ಶ್ರೀಮತಿ ಸಾವಿತ್ರಮ್ಮ, ಚಂದ್ರಶೇಖರ್, ನಟರಾಜು, ಭ್ರಮರಾಂಬ ಅರಸ್, ಸಿಬ್ಬಂದಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.08.2024 ಮಂಗಳವಾರ, ಮಳೆ ನಕ್ಷತ್ರ: ಆಶ್ಲೇಷ 03.08.2024ರಿಂದ 12.08.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ,
ತಿಥಿ: ನವಮಿ, ನಕ್ಷತ್ರ: ವಿಶಾಖ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಶ್ರೀ ಅವಧೂತ ದತ್ತ ಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** 21ನೇ ಚಾತುರ್ಮಾಸ್ಯ ವ್ರತ, ಕಿರಿಯ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರಿಂದ ಶ್ರೀ ಚಕ್ರ ಪೂಜೆ, ಮಹಾ ಗಣಪತಿ ಹೋಮ, ಕುಂಕುಮಾರ್ಚನೆ, ಬೆಳಗ್ಗೆ 9 ಗಂಟೆಗೆ. ಚಾತುರ್ಮಾಸ್ಯ ಪ್ರವಚನ, ಶ್ರೀ ಬ್ರಹ್ಮಾನಂದ ಪುರಾಣ ಪ್ರಾರ್ಥನಾ ಹಾಲ್, ಆಶ್ರಮ ಆವರಣ, ಸಂಜೆ 6.30ಕ್ಕೆ.

■ **ವಿದ್ಯಾವರ್ಧಕ ಕಾನೂನು ಕಾಲೇಜು:** ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭ, ಸಮಾರೋಪ ಭಾಷಣ: ನಿವೃತ್ತ ಪ್ರೊ. ಎಂ.ಕೆ.ರಮೇಶ್, ಮುಖ್ಯ ಅತಿಥಿಗಳು: ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್, ಯುಸಿಓ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಸಿ.ವೆಂಕಟೇಶ್ ಪ್ರಸಾದ್, ವಿದ್ಯಾವರ್ಧಕ ಲಾ ಕಾಲೇಜು ಛೇರ್ಮನ್ ಎಸ್.ಶಿವಲಿಂಗಯ್ಯ, ಸ್ಥಳ: ವಿದ್ಯಾವರ್ಧಕ ಕಾನೂನು ಕಾಲೇಜು ಪಿ.ಎಂ.ಚಿಕ್ಕಬೋರಯ್ಯ ಹಾಲ್, ಬೆಳಗ್ಗೆ 10 ಗಂಟೆಗೆ.

■ **ಸೇಂಟ್ ಫಿಲೋಮಿನಾ ಕಾಲೇಜು:** ಐಸಿಐಸಿಐ ಫೌಂಡೇಷನ್ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಸತ್ಯಶ್ರೀ ಅವರಿಂದ ಆರ್ಥಿಕ ಸಾಕ್ಷರತೆ ವಿಶೇಷ ಉಪನ್ಯಾಸ, ಉಪಸ್ಥಿತರು: ಕಾಲೇಜಿನ ರೆಕ್ಟರ್ ಫಾ. ಡಾ.ಲೂರ್ದ್ ಪ್ರಸಾದ್ ಜೋಸೆಫ್, ಪ್ರಾಂಶುಪಾಲ ಡಾ.ರವಿ ಜೆಡಿ ಸಲ್ಡಾನ್ಹಾ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಪ್ರೊ. ಬಿ.ಸುಜಾತಾದೇವಿ, ಉಪನ್ಯಾಸದಲ್ಲಿ ಭಾಗವಹಿಸುವವರು: ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಪ್ರಕಾಶ್ ಅರುಳಪ್ಪ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಪಿ.ಸೌಮ್ಯ, ಸಂಯೋಜಕರು ಡಾ.ಬಿ.ಎ.ಪ್ರಶಾಂತ್, ಶ್ರೀಮತಿ ಎಂ.ಸೌಮ್ಯಶ್ರೀ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ:** ಜಿಲ್ಲಾ ಮಟ್ಟದ ಸಮಾವೇಶ, ಉದ್ಘಾಟನೆ: ಸವಿತಾ ಪ.ಮಲ್ಲೇಶ್, ರಾಮಸ್ವಾಮಿ ವೃತ್ತದಿಂದ ಮೆರವಣಿಗೆ ಆರಂಭ, ಬೆಳಗ್ಗೆ 10ಕ್ಕೆ ನಂತರ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಸಮ್ಮೇಳನ.

■ **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯರ ಮೂಲ ಸಂಸ್ಥಾನ, ಶ್ರೀ ರಾಜೇಂದ್ರ ತೀರ್ಥರ ಪೂರ್ವಾದಿ ಮಠ, ಶ್ರೀ ಮುನಿತ್ರಯ ಪೀಠ, ಶ್ರೀ ವ್ಯಾಸರಾಜ ಮಠ (ಸೋಸಲೆ):** ಶ್ರೀ ವಿದ್ಯಾ ಕರ್ಣಾಟಕ ಸಿಂಹಾಸನಾಧೀಶ್ವರರಾದ ಶ್ರೀ ಶ್ರೀ 1008 ಶ್ರೀ ವಿದ್ಯಾಶ್ರೀಶ ತೀರ್ಥ ಶ್ರೀಪಾದಂಗಳವರ 8ನೇ ಚಾತುರ್ಮಾಸ್ಯ, ಸ್ಥಳ: ಶ್ರೀ ವ್ಯಾಸರಾಜ ಮಠ, ಸೋಸಲೆ ಕ್ಷೇತ್ರ, ಸಂಜೆ 4.30 ಗಂಟೆಯಿಂದ.

■ **ಬಸವ ಭಾರತ ಪ್ರತಿಷ್ಠಾನ, ಸಮಸ್ತ ಬಸವಪರ ಸಂಘಟನೆಗಳ ಸಹಭಾಗಿತ್ವ :** ಬಸವ ಧರ್ಮ ಜಾಗೃತಿ, ಅಭಿಯಾನ, ಇಷ್ಟಲಿಂಗ ಧಾರಣೆ ಶಿವಯೋಗ, ವಚನ ಪಠಣ, ಶ್ರಾವಣ ಮಾಸದ ಪ್ರವಚನ, ಬಸವ ತತ್ವ ಪ್ರಚಾರಕ ಕಾ.ಸು.ನಂಜಪ್ಪ ಅವರಿಂದ ಜ್ಞಾನದ ಬಲದಿಂದ ಅಜ್ಞಾನದ ಕೇಡು ಕುರಿತು ಪ್ರವಚನ, ಸ್ಥಳ: ಪ್ರಕಾಶ ವಿದ್ಯಾರ್ಥಿನಿಲಯ, ಸರ್ದಾರ್ ವಲ್ಲಭಬಾಯಿ ಪಟೇಲ್‌ನಗರ, ಸಂಜೆ 5 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, 6.15–ಗೀತಾರಾಧನ, 6.35 ಮತ್ತು ಸಂಜೆ 6.10 "ಶ್ರದ್ಧೆಯ ಶಿಲ್ಪ", ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್.ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು. 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ ಗಾಯನ–ಎಂ.ಎಸ್.ಲಕ್ಷ್ಮೀಶ್, ವ್ಯಾಖ್ಯಾನ–ಪ್ರೊ.ಮಾ. ವರದರಾಜು, 6.50–ರೈತರಿಗೆ ಸಲಹೆ, 7.15–ಕಾದಂಬರಿ ವಿಹಾರ: ಅ.ನ.ಕೃ ಅವರ "ಉದಯರಾಗ" ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್ ಎಸ್.ಎಸ್., 8.30–ಬಾನುಲಿ ಇಂಗ್ಲಿಷ್ ಪಾಠ, ಪ್ರಸ್ತುತಿ: ಸದಾನಂದ. ಆರ್, 8.40–ಕರೆಗೊಂದು ಗೀತೆ –ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಚಿತ್ತೂರು ಸುಬ್ರಹ್ಮಣ್ಯ ಪಿಳ್ಳೈ– ಹಾಡುಗಾರಿಕೆ, 10.30–ಕಾಂಗರೂ ಕೇರ್–ಮಹಿಳೆ ಮತ್ತು ಮಕ್ಕಳ ಆಸ್ಪತ್ರೆ ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, ಮಕ್ಕಳಲ್ಲಿ ಕಂಡುಬರುವ ಕಿವಿ, ಮೂಗು ಮತ್ತು ಗಂಟಲಿಗೆ ಸಂಬಂಧಿಸಿದ ತೊಂದರೆ ಮತ್ತು ಚಿಕಿತ್ಸೆ ಕುರಿತು ತಿಳಿಸಿಕೊಡಲಿದ್ದಾರೆ ಈ.ಎನ್.ಟಿ ಹಾಗೂ ತಲೆ ಮತ್ತು ಕುತ್ತಿಗೆ ಶಸ್ತ್ರಚಿಕಿತ್ಸಾ ತಜ್ಞರಾದ ಡಾ.ರಸಿಕಾ ರವಿಕುಮಾರ್ ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್ ಈ ಕಾರ್ಯಕ್ರಮದ ಪ್ರಾಯೋಜಕರು: ಕಾಂಗರೂ ಕೇರ್–ಮಹಿಳೆ ಮತ್ತು ಮಕ್ಕಳ ಆಸ್ಪತ್ರೆ, ಮೈಸೂರು, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಚೈತ್ರಿಕಾ, 12.05–ವನಿತಾ ವಿಹಾರ, 12.30–ದೇವರನಾಮ ರಾಕೇಶ್. ಎಸ್, 12.45–ಕನ್ನಡದಲ್ಲಿ ಭಾಷಣ, 1.00–ಬಾನುಲಿ ಇಂಗ್ಲೀಷ್ ಪಾಠ, ಪ್ರಸ್ತುತಿ: ಸದಾನಂದ. ಆರ್, 1.20–ಭಾವಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಇ. ಗಾಯತ್ರಿ–ವೀಣಾವಾದನ, 4.00–ಕಥಾ ಕಾಲಕ್ಷೇಪ–ಗಜಗೌರಿ ವ್ರತ, ಪ್ರಸ್ತುತಿ– ವಿದ್ವಾನ್. ಆರ್.ಗುರುರಾಜುಲು ನಾಯ್ಡು, 6.50–ಕೃಷಿರಂಗ: ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. 1.ರೇಷ್ಮೆ ಐಸಿರಿ–ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ, ಬೆಳೆದ ರೇಷ್ಮೆ ಹುಳು ಸಾಕಾಣಿಕೆ. ಈ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ.ಕೆ.ಬಿ.ಚಂದ್ರಶೇಖರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 "ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 8.00–ಕ್ರೀಡಾಲೋಕ, 8.30–ಹಿಂದಿ ಚಿತ್ರಗೀತೆಗಳು, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಸುಧಾ ರಘುನಾಥನ್– ಹಾಡುಗಾರಿಕೆ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ. ವಾಚನ: ಹೆಚ್.ಎಲ್.ಶ್ರೀಕಂಠ, ವ್ಯಾಖ್ಯಾನ: ಹೆಚ್.ಎಸ್.ಗೋಪಾಲ್, ಪ್ರಸ್ತುತಿ: ಡಾ.ಎ.ಎಸ್. ಶಂಕರನಾರಾಯಣ

■ **ಭುವನೇಶ್ವರಿ ಸೇವಾ ಟ್ರಸ್ಟ್ :** ಹಿರಿಯ ಸಂಗೀತ ನಿರ್ದೇಶಕರ ನೆನಪಿಗಾಗಿ ಸಂಗೀತ ಸೌರಭ, ಉದ್ಘಾಟನೆ: ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಮುಖ್ಯ ಅತಿಥಿಗಳು: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕೆ.ರಘುರಾಂ ವಾಜಪೇಯಿ, ಕೆ.ಆರ್.ಸತ್ಯನಾರಾಯಣ, ಮಾನಸ ಹೊಳ್ಳ, ನಾರಾಯಣ ಗೌಡ, ಎನ್.ಎಂ.ನವೀನ್‌ಕುಮಾರ್, ಮಾ.ವಿ.ರಾಮಪ್ರಸಾದ್, ಗಿರೀಶ್, ಅಧ್ಯಕ್ಷತೆ: ಶ್ರೀಮತಿ ನಾಗಶ್ರೀ ಸುಚೀಂದ್ರ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ವೀರಭದ್ರಸ್ವಾಮಿ ಹಾಗೂ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ:** ಶ್ರಾವಣ ಮಾಸದ ಪೂಜೆ, ಸ್ಥಳ: ದೇವಸ್ಥಾನದ ಆವರಣ, ಕೆ.ಆರ್.ಮೊಹಲ್ಲಾ, ಸಂಜೆ 7ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಮತ್ತು ಕದಳಿ ಮಹಿಳಾ ವೇದಿಕೆ:** ವಚನ–ಶ್ರಾವಣ: ಮನೆ ಮನೆಗೆ ಶ್ರಾವಣ ಮಾಸದ ಶರಣ ಸಂದೇಶ, ದಕ್ಷ ಪದವಿ ಕಾಲೇಜು ಸಹ ಪ್ರಾಧ್ಯಾಪಕ ಪ್ರೊ.ಹೆಚ್.ಸಿ.ಆನಂದ್ ಅಗ್ರಹಾರ ಅವರಿಂದ ಬರ ಬರ ಭಕ್ತಿ ಅರೆಯಾಯಿತ್ತು ಕಾಣಿರಣ್ಣಾ ವಿಷಯ ಕುರಿತು ಪ್ರವಚನ, ಸ್ಥಳ: ಇ–ಬ್ಲಾಕ್, ಜೆಪಿ ನಗರ, 2ನೇ ಹಂತ, 17ನೇ ಮೇನ್, ಎಸ್.ಪರಮೇಶ್ವರಪ್ಪ ಅವರ ಮನೆ, ಸಂಜೆ 5.30ರಿಂದ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಆಗಸ್ಟ್ 13 ಮಂಗಳವಾರ 2024
45
ಸಂಪುಟ: 45 | ಸಂಚಿಕೆ: 119 | ಪುಟಗಳು: 12
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಅದ್ದೂರಿ ದಸರಾ ಆಚರಣೆ

■ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಉನ್ನತ ಸಭೆ ನಿರ್ಧಾರ ■ ಚಾಮುಂಡಿ ಸನ್ನಿಧಿಯಲ್ಲಿ ಅ.3ರಂದು ಬೆಳಗ್ಗೆ 9.10ಕ್ಕೆ ದಸರಾ ಉದ್ಘಾಟನೆ ■ ಅ.12ರ ಮಧ್ಯಾಹ್ನ 2.10ಕ್ಕೆ ಜಂಬೂಸವಾರಿಗೆ ಚಾಲನೆ ■ ಸ್ಥಳೀಯ ಕಲಾವಿದರಿಗೆ ಅವಕಾಶ ಕಲ್ಪಿಸಲು ಸಲಹೆ





ಮೈಸೂರು ದಸರಾ ಆಚರಣೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸೋಮವಾರ ಉನ್ನತ ಮಟ್ಟದ ಸಭೆ ನಡೆಯಿತು.

ಬೆಂಗಳೂರು, ಆ. 12(ಕೆಎಂಶಿ)– ರಾಜ್ಯಾದ್ಯಂತ ಉತ್ತಮ ಮಳೆಯಾಗಿ ಜಲಾಶಯಗಳೂ ಭರ್ತಿ ಆಗಿರುವ ಹಿನ್ನೆಲೆಯಲ್ಲಿ ಈ ಬಾರಿ ವಿಶ್ವವಿಖ್ಯಾತ ಮೈಸೂರು ದಸರಾವನ್ನು ಅದ್ದೂರಿಯಾಗಿ ಆಚರಿಸಲು ಸರ್ಕಾರ ತೀರ್ಮಾನಿಸಿದೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಇಂದು ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ. ಉತ್ತಮ ಮಳೆಯಿಂದಾಗಿ ರೈತರು ಹಸನ್ಮುಖರಾಗಿದ್ದು, ಕುಡಿಯುವ ನೀರಿಗೂ ಸಮಸ್ಯೆ ಎದುರಾಗದು, ಈ ಹಿನ್ನೆಲೆಯಲ್ಲಿ ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ದಸರಾ ಆಚರಿಸೋಣ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ. ಕಳೆದ ವರ್ಷ ರಾಜ್ಯದಲ್ಲಿ ಬರಗಾಲ ಇದ್ದಿದ್ದರಿಂದ ಸರಳ ದಸರಾ ಆಚರಿಸಲಾಯಿತು. ಆ ಸಮಯದಲ್ಲೂ 30 ಕೋಟಿ ರೂ. ವೆಚ್ಚ ಮಾಡಲಾಗಿದೆ, ಈ ಬಾರಿ ಅದ್ದೂರಿ ಸಂಭ್ರಮಕ್ಕೆ ಎಷ್ಟು ಹಣ ಅಗತ್ಯವಿದೆಯೋ ಅದನ್ನು ದಸರಾ ಸಮಿತಿ ತೀರ್ಮಾನಿಸಿ ವರದಿ ನೀಡಿದರೆ ಬಿಡುಗಡೆ ಮಾಡಲಾಗುವುದು ಎಂದು ಭರವಸೆ ನೀಡಿದ್ದಾರೆ. ಅಕ್ಟೋಬರ್ 3 ರಿಂದ 12 ರವರೆಗೆ ದಸರಾ ಮಹೋತ್ಸವ ನಡೆಯಲಿದ್ದು ಮೊದಲ ದಿನ ಬೆಳಗ್ಗೆ 9 ಗಂಟೆ 10 ನಿಮಿಷಕ್ಕೆ ತಾಯಿ ಚಾಮುಂಡಿದೇವಿಗೆ ಪೂಜೆ ಸಲ್ಲಿಸಿ ದಸರಾ ಮಹೋತ್ಸವಕ್ಕೆ ಚಾಲನೆ ನೀಡಲಾಗುವುದು. ಅಕ್ಟೋಬರ್ 12ರಂದು ಮಧ್ಯಾಹ್ನ 2 ಗಂಟೆ 10 ನಿಮಿಷಕ್ಕೆ ಅರಮನೆ ಆವರಣದಿಂದ ಜಂಬೂಸವಾರಿ ಹೊರಡಲಿದೆ. ಈ ಬಾರಿಯ ದಸರಾ ಉದ್ಘಾಟನೆಯನ್ನು ಯಾರಿಂದ ಮಾಡಿಸಬೇಕೆಂಬ ಬಗ್ಗೆ ಇಂದಿನ ಸಭೆಯಲ್ಲಿ ಯಾವುದೇ ತೀರ್ಮಾನವಾಗಲಿಲ್ಲ. ಮುಂದಿನ ದಿನಗಳಲ್ಲಿ ಸಮಿತಿ ನಿರ್ಧರಿಸಲಿದೆ. ಕೇವಲ ಮೈಸೂರು ಅಷ್ಟೇ ಅಲ್ಲದೆ, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನದಲ್ಲೂ ಹಬ್ಬದ ವಾತಾವರಣ ನಿರ್ಮಿಸಿ, ಪ್ರವಾಸಿಗರ ಆಕರ್ಷಿಸಲು ಹೆಚ್ಚು ಒತ್ತು ನೀಡುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ■9ನೇ ಪುಟಕ್ಕೆ

ಈ ಬಾರಿ 21 ದಿನ ದಸರಾ ದೀಪಾಲಂಕಾರ

ಬೆಂಗಳೂರು, ಆ.12(ಕೆಎಂಶಿ)–ಈ ಬಾರಿಯ ಮೈಸೂರು ದಸರಾ ದೀಪಾಲಂಕಾರ 21 ದಿನಗಳ ಕಾಲ ಇರಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ. ತಮ್ಮ ಅಧ್ಯಕ್ಷತೆಯಲ್ಲಿ ನಡೆದ ದಸರಾ ಉನ್ನತ ಮಟ್ಟದ ಸಭೆಯಲ್ಲಿ ಮಾತನಾಡಿ, ಹಿಂದೆಲ್ಲಾ ದಸರಾ ಆಚರಣೆ ಸಂದರ್ಭದಲ್ಲಿ ಮಾತ್ರ ದೀಪಾಲಂಕಾರ ಇರುತ್ತಿತ್ತು. ಆದರೆ, ಉತ್ತಮ ಮಳೆ, ಬೆಳೆ ಆಗುತ್ತಿರುವುದರಿಂದ ಮೂರು ವಾರ ಕಾಲ ದೀಪಾಲಂಕಾರ ಇರಲಿದೆ ಎಂದರು.

ಕರ್ನಾಟಕ ಸಂಭ್ರಮದ 50ನೇ ವರ್ಷಾಚರಣೆ ನವೆಂಬರ್‌ವರೆಗೂ ನಡೆಯಲಿದೆ. ಇದನ್ನು ಗಮನದಲ್ಲಿಟ್ಟುಕೊಂಡು ದಸರಾ ಕಾರ್ಯಕ್ರಮ ರೂಪಿಸಿ. ಹಳೆಯ ಪದ್ಧತಿಯನ್ನು ಬದಿಗಿರಿಸಿ ಎಲ್ಲಾ ಹಂತಗಳಲ್ಲಿ ಉನ್ನತೀಕರಣ ಮಾಡಿ. ಈ ಬಾರಿಯೂ ಏರ್ ಷೋಗೆ ಕೇಂದ್ರ ಸಚಿವ ರಾಜನಾಥ್ ಸಿಂಗ್ ಅವರಿಗೆ ಪತ್ರ ಬರೆದು ಮನವಿ ಮಾಡಲಾಗುವುದು. ಹೆಚ್ಚಿನ ಸಮಯ ಏರ್ ಷೋ ನಡೆಸಲು ವಿನಂತಿಸಲಾಗುವುದು. ಅಧಿಕಾರಿಗಳು ಕೊನೆಯ ಹಂತದಲ್ಲಿ ಸಿದ್ಧತೆ ಮಾಡಿಕೊಳ್ಳುವ ಬದಲು ಈಗಿನಿಂದಲೇ ಅಗತ್ಯವಾದ ಸಿದ್ಧತೆ ಮಾಡಿಕೊಳ್ಳಲು ಅವರು ಸೂಚಿಸಿದರು. ಆಗಸ್ಟ್ 21ರಂದು ಬೆಳಗ್ಗೆ 10.10 ಗಂಟೆಯಿಂದ ಹುಣಸೂರು ತಾಲೂಕಿನ ವೀರನಹೊಸಹಳ್ಳಿಯಲ್ಲಿ ಗಜಪೂಜೆ ಮಾಡಲಾಗುವುದು ಎಂದರು.



ರಾಜ್ಯ ಸರ್ಕಾರದ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆ ಅಸಂವಿಧಾನಿಕ

● ಕೋರ್ಟ್ ನಮ್ಮ ಈ ದಾವ ಪುರಸ್ಕರಿಸಿ ಇದರ ರಚನೆಗೆ ತಡೆ ನೀಡಿದೆ: ರಾಜವಂಶಸ್ಥರಾದ ಪ್ರಮೋದಾದೇವಿ ಸಮರ್ಥನೆ ● ಚಾಮುಂಡಿಬೆಟ್ಟ ಅಲ್ಲಿರುವ ದೇವಸ್ಥಾನಗಳು ನಮ್ಮ ಖಾಸಗಿ ಆಸ್ತಿ



ಸುದ್ದಿಗೋಷ್ಠಿಯಲ್ಲಿ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್

ಮೈಸೂರು, ಆ.12(ಎಸ್‌ಬಿಡಿ)– ದೇವಸ್ಥಾನ ಮತ್ತು ಅದರ ಆಸ್ತಿಗಳನ್ನು ಕಾನೂನು ಬಾಹಿರವಾಗಿ ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನಿಸಿದ್ದರ ಪ್ರಕರಣ ಬಾಕಿ ಇರುವಾಗಲೇ ರಾಜ್ಯ ಸರ್ಕಾರ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಿರುವುದು ಅಸಂವಿಧಾನಿಕ ಎಂಬ ನಮ್ಮ ಮನವಿಯನ್ನು ಪುರಸ್ಕರಿಸಿ ನ್ಯಾಯಾಲಯ ತಡೆಯಾಜ್ಞೆ ನೀಡಿದೆ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸ್ಪಷ್ಟಪಡಿಸಿದರು.

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆಗೆ ಹೈಕೋರ್ಟ್ ತಡೆಯಾಜ್ಞೆ ನೀಡಿರುವ ಬಗ್ಗೆ ತಮ್ಮ ನಿವಾಸದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ವಿವರಣೆ ನೀಡಿದ ■9ನೇ ಪುಟಕ್ಕೆ

ಪುತ್ರನ ಪ್ರಭಾವ ಬಳಸುವುದಿಲ್ಲ

“ನನ್ನ ಪತಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ನಾಲ್ಕು ಬಾರಿ ಸಂಸದರಾಗಿದ್ದರು. ಆಗಲೇ ಅಧಿಕಾರ ಬಳಸಿಕೊಂಡು ಒಂದಿಂಚು ಜಾಗವನ್ನು ನಮ್ಮದೆಂದು ಪಡೆದಿಲ್ಲ. ಈಗ ಸಂಸದರಾಗಿರುವ ಪುತ್ರ ಯದುವೀರ್ ಒಡೆಯರ್ ಮುಖಾಂತರ ನಾನು ಯಾವುದೇ ಕೆಲಸ ಮಾಡಿಸಿಕೊಳ್ಳುವ ಪ್ರಶ್ನೆಯೇ ಇಲ್ಲ. ಇದು ಅರಮನೆಯ ಖಾಸಗಿ ವಿಚಾರ. ನಾನು ಕಾನೂನು ಮೂಲಕ ನನ್ನ ಜವಾಬ್ದಾರಿ ನಿಭಾಯಿಸುತ್ತೇನೆ. ಪುತ್ರ ಜನರ ಆಯ್ಕೆಯಿಂದ ಸಂಸದರಾಗಿದ್ದಾರೆ. ಅವರು ತಮ್ಮ ಜವಾಬ್ದಾರಿಯನ್ನು ನಿಭಾಯಿಸುತ್ತಾರೆ. –ಪ್ರಮೋದಾ ದೇವಿ ಒಡೆಯರ್

ಬೆಟ್ಟ ಬೆಟ್ಟವಾಗಿ ಉಳಿಯಬೇಕು: ದೇವಸ್ಥಾನ ನಿರ್ವಹಣೆಗೆ ಸಿದ್ಧ

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ಚಾಮುಂಡಿ ಬೆಟ್ಟದ ನಿರ್ವಹಣೆ ಮಾಡುವಂತೆ ಸರ್ಕಾರಕ್ಕೆ ಪತ್ರ ಬರೆದಿದ್ದರು. ಅದಕ್ಕೆ ಕೆಲ ಕಾರಣಗಳಿದ್ದವು. ನಿರ್ವಹಣೆ ಮಾಡುವಂತೆ ಪತ್ರ ಬರೆದಿದ್ದರ ಆಧಾರದಲ್ಲಿ ಮಾಲೀಕತ್ವ ಪಡೆಯಲು ಸಾಧ್ಯವಿಲ್ಲ ಆಗಿದ್ದ ಕಾರಣಗಳು ಈಗಿಲ್ಲ. ನಾವು ಹೋದಾಗ ಎಲ್ಲವೂ ಸರಿಯಾಗಿ ಕಾಣಿಸುತ್ತದೆ. ಉಳಿದಂತೆ ಹೇಗಿರುತ್ತದೆ ಎಂದು ನಿಮಗೇ ಗೊತ್ತು. ಪೂರ್ವಜರು ನಡೆಸಿಕೊಂಡು ಬಂದ ರೀತಿಯಲ್ಲಿ ದೇವಸ್ಥಾನದ ನಿರ್ವಹಣೆ ಸಂಪ್ರದಾಯಬದ್ಧವಾಗಿ ನಡೆದುಕೊಂಡು ಹೋಗಬೇಕು ಎಂಬುದಷ್ಟೇ ನಮ್ಮ ಉದ್ದೇಶ. ಬೆಟ್ಟವನ್ನು ಬೆಟ್ಟವಾಗಿ ಉಳಿಸಿಕೊಳ್ಳಬೇಕು. ವಯನಾಡು, ಕೊಡಗು ದುರಂತಗಳು ಕಣ್ಮುಂದೆ ಇವೆ. ಕೋರ್ಟ್ ತೀರ್ಪು ನಮ್ಮ ಪರ ಬಂದರೆ ನಾವು ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನವನ್ನು ನಿರ್ವಹಣೆ ಮಾಡಲು ಸಿದ್ಧರಿದ್ದೇವೆ ಎಂದು ಪ್ರಮೋದಾದೇವಿ ಒಡೆಯರ್ ತಿಳಿಸಿದರು.

ಮೈಸೂರು ರಂಗಾಯಣ ನಿರ್ದೇಶಕರಾಗಿ ಸತೀಶ್ ತಿಪಟೂರು

ವಿವಿಧ ರಂಗಾಯಣಕ್ಕೂ ಸಾರಥಿಗಳ ನೇಮಕ





ಸತೀಶ್ ತಿಪಟೂರು

ಮೈಸೂರು ರಂಗಾಯಣದ ಜವಾಬ್ದಾರಿ ನಿರ್ವಹಿಸುವ ವಿಶ್ವಾಸವಿದೆ...

ಪ್ರತಿಷ್ಠಿತ ಮೈಸೂರು ರಂಗಾಯಣಕ್ಕೆ ನಿರ್ದೇಶಕನಾಗಿ ನೇಮಕವಾಗುವ ಮೂಲಕ ನನಗೆ ದೊಡ್ಡ ಸಾಮಾಜಿಕ ಜವಾಬ್ದಾರಿ ನೀಡಿದಂತಾಗಿದೆ. ಕಳೆದ 30 ವರ್ಷದಿಂದ ರಂಗಭೂಮಿಯಲ್ಲಿ ಕೆಲಸ ಮಾಡಿರುವ ಅನುಭವವಿದ್ದು, ಮೈಸೂರು ರಂಗಾಯಣದ ಎಲ್ಲಾ ಜವಾಬ್ದಾರಿಗಳನ್ನು ನಿಭಾಯಿಸುವ ವಿಶ್ವಾಸವಿದೆ ಎಂದು ಮೈಸೂರು ರಂಗಾಯಣದ ನೂತನ ನಿರ್ದೇಶಕ ಸತೀಶ್ ತಿಪಟೂರು ತಿಳಿಸಿದ್ದಾರೆ. 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ನನ್ನನ್ನು ಆಯ್ಕೆ ಮಾಡಿದ ರಂಗ ಸಮಾಜಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ. ಇವತ್ತಿನ ರಂಗಭೂಮಿ ಎದುರಿಸುತ್ತಿರುವ ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು ಪಾರದರ್ಶಕ ಹಾಗೂ ಕಲಾವಿದರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಜವಾಬ್ದಾರಿ ನಿರ್ವಹಿಸಲಾಗುವುದು ಎಂದಿದ್ದಾರೆ.

ಮೈಸೂರು, ಆ.12(ಎಂಕೆ)– ಪ್ರತಿಷ್ಠಿತ ಮೈಸೂರು ರಂಗಾಯಣ ಸೇರಿದಂತೆ ರಾಜ್ಯದ 6 ರಂಗಾಯಣಗಳಿಗೆ ನಿರ್ದೇಶಕರನ್ನು ನೇಮಕ ಮಾಡಲಾಗಿದೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ಮೈಸೂರು ರಂಗಾಯಣದ ನಿರ್ದೇಶಕರಾಗಿ ಸತೀಶ್ ತಿಪಟೂರು, ಧಾರವಾಡ ರಂಗಾಯಣಕ್ಕೆ ಡಾ. ರಾಜು ತಾಳಿಕೋಟೆ, ಶಿವಮೊಗ್ಗ ರಂಗಾಯಣಕ್ಕೆ ಪ್ರಸನ್ನ ಡಿ ಸಾಗರ, ಕಲಬುರ್ಗಿ ರಂಗಾಯಣಕ್ಕೆ ಡಾ. ಸುಜಾತ ಜಂಗಮ ಶೆಟ್ಟಿ, ದಾವಣಗೆರೆ ರಂಗಾಯಣಕ್ಕೆ ಮಲ್ಲಿಕಾರ್ಜುನ ಕಡಕೋಳ ಹಾಗೂ ಕಾರ್ಕಳದ ಯಕ್ಷ ರಂಗಾಯಣಕ್ಕೆ ವೆಂಕಟರಮಣ ಐತಾಳ ಅವರನ್ನು ನೇಮಕ ಮಾಡುವ ಮೂಲಕ ರಂಗಭೂಮಿ ಚಟುವಟಿಕೆಗಳನ್ನು ಚುರುಕುಗೊಳಿಸುವಂತೆ ತಿಳಿಸಿದ್ದಾರೆ.

ನಿರ್ದೇಶಕರು ಅಧಿಕಾರ ವಹಿಸಿಕೊಂಡ ಕೂಡಲೇ ರಂಗಾಯಣಗಳ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲು ಹಾಗೂ ರಂಗಭೂಮಿಯ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಚಿವರು ಸೂಚಿಸಿದ್ದಾರೆ.

ಇಂಜಿನಿಯರ್ ರಂಗಭೂಮಿಯತ್ತ: ಮೈಸೂರು ರಂಗಾಯಣಕ್ಕೆ ನಿರ್ದೇಶಕರಾಗಿ ನೇಮಕಗೊಂಡಿರುವ ಸತೀಶ್ ತಿಪಟೂರು, ಮೂಲತಃ ತುಮಕೂರು ■9ನೇ ಪುಟಕ್ಕೆ

ಅಕಾಡೆಮಿ ಸದಸ್ಯರ ನೇಮಕ

ವಿವಿಧ ಅಕಾಡೆಮಿಗಳಲ್ಲಿ ಖಾಲಿ ಇದ್ದ ಸದಸ್ಯರ ನೇಮಕಾತಿ ಆದೇಶವನ್ನು ಹೊರಡಿಸಲಾಗಿದೆ. ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ ಅಕ್ಷತಾ ಎಂ.ನಾಯಕ್, ಕರ್ನಾಟಕ ರಾಜ್ಯ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಸದಸ್ಯರಾಗಿ ವಿನೋದ್ ಮೂಡಗದ್ದೆ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಸದಸ್ಯರಾಗಿ ರಾಘವೇಂದ್ರ ಕಿನ್ನಾಳ ಮತ್ತು ಶಿವಪ್ರಸಾದ ಚನ್ನಪಟ್ಟಣ, ಕರ್ನಾಟಕ ಲಲಿತಕಲಾ ಅಕಾಡೆಮಿ ಸದಸ್ಯರಾಗಿ ಹಾಸನದ ಹೆಚ್.ಎಸ್.ಮಂಜುನಾಥ, ಕರ್ನಾಟಕ ಬಯಲಾಟ ಅಕಾಡೆಮಿ ಹೆಚ್ಚುವರಿ ಸದಸ್ಯರಾಗಿ ಲಕ್ಷಣ ಹಣಮಂತ ದೇಸಾರಟ್ಟಿ ಅವರನ್ನು ನೇಮಕ ಮಾಡಲಾಗಿದೆ.

ಕೆಆರ್‌ಎಸ್ ಸೇರಿದಂತೆ ರಾಜ್ಯದ ಎಲ್ಲಾ ಜಲಾಶಯಗಳ ಸುರಕ್ಷತೆ ಕುರಿತು ತಜ್ಞರಿಂದ ಪರಿಶೀಲನಾ ವರದಿ

● ಜಲ ಸಂಪನ್ಮೂಲ ಸಚಿವರೂ ಆದ ಡಿ.ಕೆ.ಶಿವಕುಮಾರ್ ವಿವರಣೆ
● ತುಂಗಭದ್ರ ಅಣೆಕಟ್ಟೆ ಗೇಟ್ ತುಂಡಾದ ಹಿನ್ನೆಲೆಯಲ್ಲಿ ಈ ಕ್ರಮ






ಬೆಂಗಳೂರು, ಆ. 12(ಕೆಎಂಶಿ)– ಕೃಷ್ಣರಾಜ ಸಾಗರ (ಕೆಆರ್‌ಎಸ್), ಆಲಮಟ್ಟಿ ಸೇರಿದಂತೆ ರಾಜ್ಯದ ಎಲ್ಲಾ ಅಣೆಕಟ್ಟೆಗಳ ಸ್ಥಿತಿಗತಿ ಬಗ್ಗೆ ತಾಂತ್ರಿಕ ತಜ್ಞರಿಂದ ಪರಿಶೀಲಿಸಿ ವರದಿ ಪಡೆಯಲಾಗುವುದು ಎಂದು ಜಲ ಸಂಪನ್ಮೂಲ ಇಲಾಖೆ ಹೊಣೆ ಹೊತ್ತಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೈತರು ಆತಂಕಪಡುವ ಅಗತ್ಯವಿಲ್ಲ. ನಮ್ಮೆಲ್ಲಾ ಅಣೆಕಟ್ಟುಗಳ ಸುರಕ್ಷತೆಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದರು. ಅಣೆಕಟ್ಟುಗಳ ಸ್ಥಿತಿಗತಿಗಳ ಪರಿಶೀಲನೆಗಾಗಿ ನೀರಾವರಿ ಮತ್ತು ತಾಂತ್ರಿಕ ತಜ್ಞರ ಸಮಿತಿ ■9ನೇ ಪುಟಕ್ಕೆ

ಮೈಸೂರು ಮಹಾರಾಜರು ಮೀಸಲು ಅರಣ್ಯಕ್ಕೆ ಅಧಿಸೂಚನೆ ಹೊರಡಿಸಿದ್ದ ಚಾಮುಂಡಿಬೆಟ್ಟದ ಜಾಗ ಖಾಸಗಿ ವ್ಯಕ್ತಿ ಹೆಸರಿಗೆ

ಒಮ್ಮೆ ಅರಣ್ಯ ಪ್ರದೇಶವೆಂದು ಘೋಷಿಸಿದರೆ ಮುಗಿಯಿತು ಇನ್ನು ಅದು ಅರಣ್ಯವೇ



ವಿಚಾರಣಾ ನ್ಯಾಯಾಲಯದ ಆದೇಶ ರದ್ದುಗೊಳಿಸಿದ ಕರ್ನಾಟಕ ಹೈಕೋರ್ಟ್

ನ್ಯಾಯಾಲಯ, ಸಂವಿಧಾನಿಕ ನ್ಯಾಯಾಲಯಗಳ ಕೆಲಸ ಕೇವಲ ನ್ಯಾಯ ದೊರಕಿಸಿಕೊಡುವುದು ಮಾತ್ರವಲ್ಲ, ನದಿಗಳು ಹಾಗೂ ಅರಣ್ಯಗಳ ವಿಚಾರದಲ್ಲಿ ಪಾಲುದಾರರಂತೆಯೂ ವರ್ತಿಸಬೇಕು



ಚಾಮುಂಡಿಬೆಟ್ಟ ಕೆಎಸ್‌ಆರ್‌ಟಿಸಿ ಬಸ್‌ಸ್ಟ್ಯಾಂಡ್

ಬೆಂಗಳೂರು, ಆ.12– 1929ರಲ್ಲಿ ಅಂದಿನ ಮೈಸೂರು ಮಹಾರಾಜರು ರಾಜ್ಯ ಮೀಸಲು ಅರಣ್ಯಕ್ಕೆ ಅಧಿಸೂಚನೆ ಹೊರಡಿಸಿದ್ದ ಜಾಗದ ಸ್ವಲ್ಪ ಭಾಗವನ್ನು ಖಾಸಗಿ ವ್ಯಕ್ತಿಗಳ ಪರ ಡಿಕ್ರಿ ಮಾಡಿಕೊಡಲು ವಿಚಾರಣಾ ನ್ಯಾಯಾಲಯ ನೀಡಿದ್ದ ಆದೇಶವನ್ನು ಕರ್ನಾಟಕ ಹೈಕೋರ್ಟ್ ರದ್ದುಪಡಿಸಿದೆ.

ಅಲ್ಲದೆ, ಒಮ್ಮೆ ಅರಣ್ಯ ಪ್ರದೇಶವೆಂದು ಘೋಷಣೆಯಾದ ಮೇಲೆ ಅದು ಸದಾ ಅರಣ್ಯವೇ ಆಗಿರುತ್ತದೆ ಎಂದು ಹೇಳಿರುವ ನ್ಯಾಯಾಲಯ, ಸಂವಿಧಾನಿಕ ನ್ಯಾಯಾಲಯಗಳ ಕೆಲಸ ಕೇವಲ ನ್ಯಾಯ ದೊರಕಿಸಿಕೊಡುವುದು ಮಾತ್ರವಲ್ಲ, ನದಿಗಳು ಹಾಗೂ ಅರಣ್ಯಗಳ ವಿಚಾರದಲ್ಲಿ ಪಾಲುದಾರರಂತೆಯೂ ವರ್ತಿಸಬೇಕು ಎಂದು ಅಭಿಪ್ರಾಯಪಟ್ಟಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ರಾಜ್ಯ ಸರಕಾರ ಸಲ್ಲಿಸಿದ್ದ ಮೇಲ್ಮನವಿಗಳನ್ನು ಮಾನ್ಯ ಮಾಡಿರುವ ನ್ಯಾ. ಕೃಷ್ಣ ಎಸ್.ದೀಕ್ಷಿತ್ ಹಾಗೂ ನ್ಯಾ. ರಾಮಚಂದ್ರ ಡಿ. ಹುದ್ದಾರ ಒಳಗೊಂಡ ವಿಭಾಗೀಯ ಪೀಠವು, ವಿಚಾರಣಾಧೀನ ನ್ಯಾಯಾಲಯವು ಮಲ್ಲಯ್ಯ ಹಾಗೂ ಮತ್ತಿತರರ ಪರವಾಗಿ 2011ರ ಆ. 29ರಂದು ನೀಡಿದ್ದ ಆದೇಶವನ್ನು ರದ್ದುಗೊಳಿಸಿದೆ. ಜತೆಗೆ ವಿವಾದಿತ ಜಾಗಕ್ಕೆ ಸಂಬಂಧಿಸಿದಂತೆ ಕಂದಾಯ ದಾಖಲೆಗಳನ್ನು ಸರಿಪಡಿಸುವಂತೆ ಆದೇಶಿಸಿರುವ ನ್ಯಾಯಾಲಯ, ಆ ಜಾಗವನ್ನು ಚಾಮುಂಡಿಬೆಟ್ಟದ ರಾಜ್ಯ ಮೀಸಲು ಅರಣ್ಯದ ಭಾಗವೆಂದು ನಮೂದಿಸುವಂತೆ ಸೂಚಿಸಿದೆ.

ವಾದ–ಪ್ರತಿವಾದ ಆಲಿಸಿದ ಬಳಿಕ ನ್ಯಾಯಾಲಯವು, ಕಂದಾಯ ದಾಖಲೆಗಳ ಪ್ರಕಾರ ವಿವಾದಿತ ಜಾಗ ರಾಜ್ಯ ಅರಣ್ಯ ಇಲಾಖೆಗೆ ಸೇರಿದ್ದಾಗಿದೆ. 1950ರಿಂದಲೂ ದಾಖಲೆಗಳು ಅರಣ್ಯ ಇಲಾಖೆಯ ಹೆಸರಿನಲ್ಲೇ ಇವೆ. ಆದರೆ 1970–71ರಿಂದ 1973–74ರ ಅವಧಿಯಲ್ಲಿ ಇದ್ದಕ್ಕಿದ್ದಂತೆ ಯಾವುದೇ ಆಧಾರವಿಲ್ಲದೆ ಅರಣ್ಯ ಇಲಾಖೆ ಹೆಸರಿನ ಜಾಗದಲ್ಲಿ ಏಕಾಏಕಿ ಮಾಯಾಗ ಎಂಬುವರ ಹೆಸರು ನಮೂದಾಗಿದೆ ಎಂದು ಹೇಳಿದೆ. ಅಲ್ಲದೆ, 1900ರ ಕಾಯಿದೆ ಸೆಕ್ಷನ್ 17ರಡಿ ಅಂದಿನ ಮೈಸೂರು ಸರಕಾರ 1929ರ ಜೂ. 6ರಂದು ಹೊರಡಿಸಿದ್ದ ಆದೇಶದಂತೆ ಮಾಯಾಗ ಅವರ ಹೆಸರನ್ನು ದಾಖಲೆಗಳಲ್ಲಿ ಸೇರಿಸಲಾಗಿದೆ ಎಂಬ ಪ್ರತಿವಾದಿಗಳ ವಾದವನ್ನು ನ್ಯಾಯಾಲಯ ತಳ್ಳಿ ಹಾಕಿದೆ. ವಿವಾದಿತ ಜಾಗದ ಸರ್ವೇ ನಂಬರ್‌ಗಳು ಮೈಸೂರು ಸರಕಾರ ಹೊರಡಿಸಿದ್ದ ಅಧಿಸೂಚನೆ ಅಥವಾ ಅರಣ್ಯ ನಕ್ಷೆಯ ಭಾಗವಲ್ಲ. ಆದರೆ ರಾಜ್ಯ ಮೀಸಲು ಅರಣ್ಯ ಅಧಿಸೂಚನೆಯನ್ವಯ ಸೃಷ್ಟಿಯಾಗಿದ್ದು, ಅದರಂತೆ ಗಡಿಗಳನ್ನು ನಿಗದಿಪಡಿಸಿದೆ ಎಂದು ನ್ಯಾಯಾಲಯ ಹೇಳಿದೆ.

ಚಾಮುಂಡಿಬೆಟ್ಟ ರಾಜ್ಯ ಮೀಸಲು ಅರಣ್ಯದಿಂದ ವಿವಾದಿತ ಜಾಗವನ್ನು ಡಿನೋಟಿಫೈ ಮಾಡಿರುವ ಯಾವುದೇ ಆದೇಶವನ್ನು ಹೊರಡಿಸಿಲ್ಲ. ಒಮ್ಮೆ ಅರಣ್ಯ ಪ್ರದೇಶವೆಂದು ಘೋಷಿಸಿದರೆ ಅದು ಎಂದೆಂದಿಗೂ ಅರಣ್ಯವೇ ಆಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಜನಸಂಖ್ಯಾ ಬೆಳವಣಿಗೆ ಮತ್ತಿತರ ಕಾರಣಗಳಿಂದಾಗಿ ಅರಣ್ಯ ಅತ್ಯಂತ ವೇಗವಾಗಿ ನಾಶವಾಗುತ್ತಿದೆ. ಇದನ್ನು ತಡೆಯುವ ಅಗತ್ಯವಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

1929ರಲ್ಲಿ ಅಂದಿನ ಮೈಸೂರು ಸರಕಾರವು ರಾಜ್ಯ ಮೀಸಲು ಅರಣ್ಯ ಸೃಷ್ಟಿಗೆ ಅಧಿಸೂಚನೆ ಹೊರಡಿಸಿತ್ತು. ಅದರಲ್ಲಿ ಈ ವಿವಾದಿತ ಜಾಗವೂ ಸೇರಿತ್ತು. 1935ರಿಂದ ಕಂದಾಯ ದಾಖಲೆಗಳಲ್ಲಿ ಅರಣ್ಯ ಇಲಾಖೆ ಭೂಮಿ ಎಂದೇ ಉಲ್ಲೇಖವಾಗಿತ್ತು. ಆದರೆ 1970–71ರಿಂದ 1973–74ರಲ್ಲಿ ಏಕಾಏಕಿ ಮಾಯಾಗ ಅವರ ಹೆಸರನ್ನು ದಾಖಲೆಗಳಲ್ಲಿ ನಮೂದಿಸಲಾಗಿತ್ತು. ಬದಲಾದ ಕಾಲಘಟ್ಟದಲ್ಲಿ ಅರಣ್ಯ ಇಲಾಖೆಗೆ ಸೇರಿದ ಜಾಗದಲ್ಲಿ ಚಾಮುಂಡಿಬೆಟ್ಟದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ನಿರ್ಮಿಸಲಾಗಿತ್ತು. ಆದರೆ ಅಧೀನ ನ್ಯಾಯಾಲಯದ ಮೊರೆ ಹೋಗಿದ್ದ ಮಾಯಾಗ ಅವರ ಪುತ್ರ ಮಲ್ಲಯ್ಯ ವಿಚಾರಣಾ ನ್ಯಾಯಾಲಯದ ಮೊರೆ ಹೋಗಿದ್ದು, ಆ ಜಾಗ ಮಾಯಾಗ ಅವರಿಗೆ ಸೇರಿದ್ದು, ಅವರ ಪುತ್ರನ ಹೆಸರಿಗೆ ಡಿಕ್ರಿ ಮಾಡಿಕೊಡಬೇಕೆಂದು ನ್ಯಾಯಾಲಯ ಆದೇಶ ನೀಡಿತ್ತು. ಅದನ್ನು ಪ್ರಶ್ನಿಸಿ ಸರಕಾರ ಮತ್ತು ಕೆಎಸ್‌ಆರ್‌ಟಿಸಿ ಮೇಲ್ಮನವಿ ಸಲ್ಲಿಸಿದ್ದವು.

ನಕ್ಕರೆ ಅದೇ ಸ್ವರ್ಗ

ಟೀಚರ್ : ಯಾಕೆ ಲೇಟ್?
ವಿದ್ಯಾರ್ಥಿ : ಕೋಳಿ ಕೂಗೋದು ಲೇಟ್ ಆಯ್ತು ಟೀಚರ್
ಟೀಚರ್ : ನಮ್ಮ ಮನೆ ಹತ್ರ ಕೋಳಿ 5 ಗಂಟೆಗೇ ಕೂಗುತ್ತೆ
ವಿದ್ಯಾರ್ಥಿ : ಆ ಕೋಳಿ ನಮ್ಮ ಮನೆ ಹತ್ರ ಬರೋಕೆ 8 ಗಂಟೆ ಆಗುತ್ತೆ!

ಮೈಸೂರು ಮಿತ್ರ

ಮಂಗಳವಾರ, 13 ಆಗಸ್ಟ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಇತರರಿಗೆ ತಿಳಿಯದಂತೆ ಅವರನ್ನು ನಿಂದಿಸುವುದು ಮಹಾ ಅಪರಾಧ ಎಂಬುದನ್ನು ತಿಳಿಯಿರಿ. ಇದನ್ನು ನೀವು ಸಂಪೂರ್ಣ ತ್ಯಜಿಸಬೇಕು.
– ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಾಲಾಹಲ ಕುಡಿದವನಿಗೆ ಹಾಗಲಕಾಯಿ ಕಹಿಯೇ?

ನಿಮ್ಮ ಪತ್ರಗಳು

■ ಜನೌಷಧ ಕೇಂದ್ರಗಳ ಸಂಖ್ಯೆ ಹೆಚ್ಚಾಗಲಿ

ಮಾನ್ಯರೆ,

ಕೇಂದ್ರ ಸರ್ಕಾರದ ಅಂಕಿ ಅಂಶಗಳ ಪ್ರಕಾರ ಜನೌಷಧ ಕೇಂದ್ರಗಳಿಂದಾಗಿ ರೋಗಿಗಳಿಗೆ 28000 ಕೋಟಿ ಉಳಿತಾಯವಾಗಿದೆ ಎಂದೂ ತಿಳಿಸಿದೆ ಮತ್ತು ಜನೌಷಧ



ಕೇಂದ್ರಗಳಲ್ಲಿ 1965 ರೀತಿಯ ಔಷಧಗಳು ಹಾಗೂ 235 ಆರೋಗ್ಯ ಉಪಕರಣಗಳನ್ನು ಕಡಿಮೆ ದರದಲ್ಲಿ ಮಾರಾಟ ಮಾಡಲಾಗುತ್ತದೆ. ಜನೌಷಧ ಕೇಂದ್ರಗಳಲ್ಲಿ ಔಷಧಗಳು ಇತರೆ ಖಾಸಗಿ ಔಷಧ ಕೇಂದ್ರಗಳ ಹೋಲಿಕೆಯಲ್ಲಿ 52% ರಿಂದ 80% ಕಡಿಮೆ ದರದಲ್ಲಿ ದೊರೆಯುತ್ತದೆ. 2015ರ ಸೆಪ್ಟೆಂಬರ್‌ನಲ್ಲಿ, ಜನೌಷಧ ಯೋಜನೆಯನ್ನು ಪ್ರಧಾನ ಮಂತ್ರಿ ಜನೌಷಧಿ ಯೋಜನೆ (PMJAY) ಎಂದು ಮರುಪ್ರಾರಂಭಿಸಲಾಯಿತು. 2016ರ ನವೆಂಬರ್‌ನಲ್ಲಿ, ಈ ಯೋಜನೆಯನ್ನು ಉತ್ತೇಜಿಸಲು ಇದನ್ನು "ಪ್ರಧಾನ ಮಂತ್ರಿ ಭಾರತೀಯ ಜನೌಷಧ ಪರಿಯೋಜನಾ" ಎಂದು ಮರುನಾಮಕರಣ ಮಾಡಲಾಯಿತು. ಸಾಮಾನ್ಯ ಜನರಿಗೆ ಕೈಗೆಟಕುವ ದರದಲ್ಲಿ ಗುಣಮಟ್ಟದ ಔಷಧಗಳನ್ನು ಒದಗಿಸಲು ಔಷಧ ಇಲಾಖೆ ಆರಂಭಿಸಿರುವ ಅಭಿಯಾನ ಇದಾಗಿದೆ. ಪ್ರಸ್ತುತ ದೇಶದ 766 ಜಿಲ್ಲೆಗಳಲ್ಲಿ 743 ಜಿಲ್ಲೆಗಳನ್ನೊಳಗೊಂಡಂತೆ 9000 ಜನೌಷಧ ಕೇಂದ್ರಗಳಿದ್ದು, ಇದರ ಸಂಖ್ಯೆಯನ್ನು 10000ಕ್ಕೆ ಏರಿಕೆ ಮಾಡುವ ಚಿಂತನೆಯನ್ನು ಸರ್ಕಾರ ಹೊಂದಿದೆ ಎಂದೂ ಮೂಲಗಳು ಹೇಳುತ್ತವೆ. ಭಾರತದಲ್ಲಿ ಆದಾಯದ ಪ್ರಮಾಣ ಬಹಳ ಕಡಿಮೆಯಿದ್ದು ಜನ ಜೀವನ ನಿರ್ವಹಣೆ ಮಾಡುವುದು ಕಷ್ಟಕರವಾದ ಸಂದರ್ಭದಲ್ಲಿ ಆರೋಗ್ಯಕ್ಕೆ ತಮ್ಮ ದುಡಿಮೆಯ ದೊಡ್ಡ ಪಾಲನ್ನು ಮೀಸಲಿಟ್ಟರೆ ಬೇರೆ ರೀತಿಯ ಖರ್ಚುಗಳನ್ನು ತೂಗಿಸುವುದು ಹೊರೆಯಾಗುತ್ತದೆ ಮತ್ತು ಭಾರತ ಸರ್ಕಾರ ಜನೌಷಧ ಕೇಂದ್ರಗಳನ್ನು ಪ್ರತಿ ತಾಲೂಕು ಮಟ್ಟದಲ್ಲಿ ತೆರೆಯುವಂತಾದರೆ ಜನಗಳಿಗೆ ಇದರಿಂದ ತುಂಬಾ ಅನುಕೂಲವಾಗುತ್ತದೆ. **–ರಾಸುಮ ಭಟ್, ಕುವೆಂಪು ವಿವಿ, ಚಿಕ್ಕಮಗಳೂರು.**

■ ಪ್ಲಾಸ್ಟಿಕ್ ಧ್ವಜ ನಿಷೇಧ ಕಟ್ಟುನಿಟ್ಟಾಗಿರಲಿ

ಮಾನ್ಯರೆ,

ಆಗಸ್ಟ್ 15ರಂದು ದೇಶಾದ್ಯಂತ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ದೆಹಲಿಯ ಕೆಂಪುಕೋಟೆಯು ಸೇರಿದಂತೆ ದೇಶಾದ್ಯಂತ ಶಾಲಾ ಕಾಲೇಜುಗಳಲ್ಲಿ, ಸರ್ಕಾರಿ ಕಚೇರಿಗಳಲ್ಲಿ ಹಾಗೂ ಸಂಘ ಸಂಸ್ಥೆಗಳಲ್ಲಿ ರಾಷ್ಟ್ರಧ್ವಜವನ್ನು ದೇಶದ ಹೆಮ್ಮೆಯ ಪ್ರತೀಕವಾಗಿ ಹಾರಿಸಿ, ಗೌರವ ಸಲ್ಲಿಸಲಾಗುತ್ತದೆ. ಆದರೆ ಈ ಧ್ವಜವನ್ನು ಪ್ಲಾಸ್ಟಿಕ್‌ನಿಂದ ಮಾಡಿರಬಾರದು. ಬದಲಾಗಿ ಬಟ್ಟೆಯ ಧ್ವಜ ಬಳಸುವುದು ಕಡ್ಡಾಯವಾಗಿದೆ. ಒಂದು ವೇಳೆ ಈ ನಿಯಮ ಮೀರಿ ಬಳಕೆ ಮಾಡಿದರೆ, ಅಂತಹವರ



ವಿರುದ್ಧ ಕೇಸ್ ಫಿಕ್ಸ್ ಎಂಬುದಾಗಿ ರಾಜ್ಯ ಸರ್ಕಾರ ಎಚ್ಚರಿಸಿದೆ. ಈ ಕುರಿತಂತೆ ಈಗಾಗಲೇ ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಮತ್ತು ಗೃಹ ಮಂತ್ರಾಲಯವು ಕೂಡ ಎಲ್ಲಾ ರಾಜ್ಯ ಸರ್ಕಾರಗಳಿಗೆ ಪ್ಲಾಸ್ಟಿಕ್‌ನಿಂದ ತಯಾರಿಸಿದ ರಾಷ್ಟ್ರೀಯ ಧ್ವಜಗಳನ್ನು ಬಳಸದಂತೆ ನಿರ್ದೇಶನ ನೀಡಿದೆ.

ರಾಷ್ಟ್ರಧ್ವಜವು ದೇಶದ ಜನರ ಭರವಸೆ ಮತ್ತು ಆಶಯ ಪ್ರತಿನಿಧಿಸುವಂಥದ್ದು. ಹಾಗಾಗಿ ಅದನ್ನು ಗೌರವಿಸಬೇಕಾದ್ದು ಮುಖ್ಯ. ಅನೇಕ ಸಂದರ್ಭಗಳಲ್ಲಿ ಬಟ್ಟೆಗಳಿಂದ ತಯಾರಾದ ಧ್ವಜಗಳನ್ನು ಬಳಸುವ ಬದಲು, ಪ್ಲಾಸ್ಟಿಕ್ ಧ್ವಜಗಳು ಬಳಕೆಯಾಗುತ್ತಿರುವುದು ಕಂಡು ಬರುತ್ತಿದೆ. ಈ ಪ್ಲಾಸ್ಟಿಕ್ ಧ್ವಜಗಳು ಸ್ಥಳೀಯ ಅಂಗಡಿಗಳಲ್ಲಿ ದೊರೆಯುವುದರಿಂದ ಕೆಲ ಮಕ್ಕಳು ಹಾಗೂ ಪೋಷಕರು ಸೇರಿದಂತೆ ಹಲವರು ಅವುಗಳನ್ನು ಕೊಂಡು, ಧ್ವಜ ಬಳಕೆ ನಂತರ ಅವುಗಳನ್ನು ಎಲ್ಲೆಂದರಲ್ಲಿ ಬಿಸಾಡುವುದರಿಂದ ಧ್ವಜದ ಪಾವಿತ್ರ್ಯತೆ ಹಾಳಾಗುತ್ತದೆ. ಇದು ತಪ್ಪು. ಈ ರೀತಿ ಮಾಡುವುದರಿಂದ ಧ್ವಜದ ಘನತೆಯನ್ನು ಅಗೌರವಿಸಿದಂತಾಗುತ್ತದೆ. ಹೀಗಾಗಿ ಪ್ರಮುಖ ರಾಷ್ಟ್ರೀಯ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಬಟ್ಟೆಯ ಧ್ವಜವನ್ನು ಬಳಸಬೇಕೇ ವಿನಾ ಪ್ಲಾಸ್ಟಿಕ್ ಧ್ವಜ ಬಳಸಬಾರದು ಎಂಬ ತಿಳುವಳಿಕೆ ಪುಟ್ಟ ಪುಟ್ಟ ಮಕ್ಕಳಿಗೂ ಸೇರಿದಂತೆ ಎಲ್ಲರಿಗೂ ಮನದಟ್ಟು ಮಾಡಿಸುವುದರ ಜೊತೆಗೆ ಪ್ಲಾಸ್ಟಿಕ್ ಧ್ವಜ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಬೇಕಿದೆ ಹಾಗೂ ಪ್ಲಾಸ್ಟಿಕ್ ಧ್ವಜ ಮಾರಾಟಗಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕಿದೆ. **– ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.**

■ ಸಿದ್ದರಾಮಯ್ಯ ತಮ್ಮ ತತ್ವ–ಸಿದ್ಧಾಂತಕ್ಕೆ ಅನುಗುಣವಾಗಿಯೇ ನಡೆಯುವರೇ...!?

ಮಾನ್ಯರೆ,

ಕಳೆದ 40 ವರ್ಷಗಳ ಸುದೀರ್ಘ ರಾಜಕಾರಣದಲ್ಲಿ ತಮ್ಮದೇ ಆದ ಛಾಪು



ಮೂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಇದೀಗ ಹಗರಣಗಳ ಕಪ್ಪುಚುಕ್ಕೆ ಮೆತ್ತಿಕೊಂಡಿದ್ದು ರಾಜಕೀಯ ಸಂಧ್ಯಾ ಸಮಯದಲ್ಲಿರುವ ಅವರಿಗೆ ಇದೊಂದು ದೊಡ್ಡ ವಿಪರ್ಯಾಸ ಎನ್ನಬಹುದು.

ಮುಡಾ ಹಾಗೂ ವಾಲ್ಮೀಕಿ ನಿಗಮದ ಹಗರಣಗಳಲ್ಲಿ ಮುಖ್ಯಮಂತ್ರಿಗಳ ಹೆಸರೇ ಥಳಕು ಹಾಕಿಕೊಂಡಿರುವುದರಿಂದ ರಾಜಕೀಯವಾಗಿ ಕುಗ್ಗುವಂತೆ ಮಾಡಿರುವುದಲ್ಲದೇ ಅವರ ರಾಜಕೀಯ ಪಯಣದ ಕೊನೆ ದಿನಗಳಲ್ಲಿ ಈ ಹಗರಣಗಳು ಮಗ್ಗಲಮುಳ್ಳಾಗಿ ಕಾಡುತ್ತಿರುವುದು ಸುಳ್ಳಲ್ಲ. ಕಳೆದ ಕೆಲದಿನಗಳಿಂದ ವಿಪಕ್ಷಗಳು ಈ ವಿಷಯವನ್ನು ಮುಂದಿಟ್ಟುಕೊಂಡು ನಡೆಸುತ್ತಿರುವ ಹೋರಾಟಗಳು ತೀವ್ರ ಸ್ವರೂಪ ಪಡೆಯುತ್ತಿವೆ. ಆದರೂ ಇದಕ್ಕೆ ಜಗ್ಗದ–ಕುಗ್ಗದ ಸಿದ್ದರಾಮಯ್ಯನವರು ಎಲ್ಲವನ್ನೂ ಎದುರಿಸುವುದಾಗಿ ಹೇಳಿದ್ದಾರೆ.

ಹಗರಣಗಳಲ್ಲಿ ಮುಖ್ಯಮಂತ್ರಿಗಳ ಹೆಸರೇ ನೇರವಾಗಿ ಕೇಳಿಬಂದಲ್ಲಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವ ನಿದರ್ಶನಗಳು ನಮ್ಮ ಕಣ್ಣಮುಂದೆ ಇದೆ. ಬಂಗಾರಪ್ಪನವರು ಕ್ಲಾಸಿಕ್ ಕಂಪ್ಯೂಟರ್ ಹಗರಣದಲ್ಲಿ ಹಾಗೂ ರಾಮಕೃಷ್ಣ ಹೆಗಡೆಯವರು ಟೆಲಿಫೋನ್ ಕದ್ದಾಲಿಕೆ ಪ್ರಕರಣದಲ್ಲಿ ನೇರ ಹೊಣೆ ಹೊತ್ತು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವುದನ್ನು ಮನಗಾಣಬಹುದು. ಇವರೆಲ್ಲರ ಗರಡಿಯಲ್ಲಿ ಪಳಗಿರುವ ಸಿದ್ದರಾಮಯ್ಯನವರು ಮಾತ್ರ ಈ ವಿಚಾರದಲ್ಲಿ ಇನ್ನೂ ಮೀನಾ–ಮೇಷ ಎಣಿಸುತ್ತಿರುವುದು ಸಮಂಜಸವಲ್ಲ. ಸಮಾಜವಾದದ ಸಿದ್ಧಾಂತದಲ್ಲಿ ಅಪಾರ ನಂಬಿಕೆ ಹೊಂದಿರುವ ಸಿದ್ದರಾಮಯ್ಯನವರು ತಾವು ನಂಬಿರುವ ತತ್ವ–ಸಿದ್ಧಾಂತಗಳಿಗೆ ಬದ್ಧವಾಗೇ ನಡೆದುಕೊಳ್ಳುತ್ತಾರೆಂದು ಆಶಿಸೋಣವೆ? **–ಹೆಚ್.ಆರ್.ಪ್ರಸಾದ್, ವಿವೇಕಾನಂದನಗರ, ಮೈಸೂರು,**

ಪರಸ್ಪರ ಅರಿತು ಬಾಳಿದರೆ ಪಥ್ಯ ದಾಂಪತ್ಯ



> “ ಹೆಂಡತಿಯಾದವಳಿಗೂ ಗಂಡನ ಮೇಲೆ ಅತೀವ ಪ್ರೀತಿ, ಎಲ್ಲಿಯೋ ಹುಟ್ಟಿ ಬೆಳೆದ ಹೆಣ್ಣು ಮಗಳು ವಯಸ್ಸಿಗೆ ಬಂದು ಮದುವೆ ನಂತರ ನಡೆ ನುಡಿ ಸಂಸ್ಕೃತಿ ಭಿನ್ನವಾಗಿರುವ ಮತ್ತೊಂದು ಕುಟುಂಬಕ್ಕೆ ಒಗ್ಗಿಕೊಂಡು ಹೆತ್ತವರನ್ನು ಮರೆಯಲಾಗದಿದ್ದರೂ ಗಂಡನ ಮನೆಗೆ ಹೊಂದಿಕೊಳ್ಳುವ ಹೆಣ್ಣು ಗಂಡನನ್ನೇ ಸರ್ವಸ್ವ ಎಂದು ಬದುಕುತ್ತಾಳೆ. ಅವಳಿಗೂ ಒಂದು ಮಗುವಾಗಿ ತಾಯಿ ಎನಿಸಿಕೊಂಡ ನಂತರ ಗಂಡನ ಮೇಲೆ ಅವಳಿಗಿದ್ದ ಪೂರ್ಣ ಪ್ರೀತಿಯಲ್ಲಿ ಹೆಚ್ಚು ಭಾಗ ತನ್ನ ಕರುಳಿನ ಕುಡಿಯ ಕಡೆಗೆ ಹರಿಯುವುದು. ಆ ಕುಡಿಗೂ ಮದುವೆ ಮಕ್ಕಳು ಆದ ನಂತರ ಮಕ್ಕಳನ್ನು ಬಿಟ್ಟಾಳು ಆದರೆ ಗಂಡನನ್ನು ಬಿಡುವುದಿಲ್ಲ.



ಮಿರ್ಲೆ ಚಂದ್ರಶೇಖರ
ಮೊ: 9916129654

ಮದುವೆಯಾದ ಕೆಲವೇ ತಿಂಗಳಿಗೆ ಗಂಡ–ಹೆಂಡತಿ ವಿಚ್ಛೇದನ ಪಡೆಯುವುದು, ಮಾಜಿ ಪ್ರಿಯಕರ/ಪ್ರಿಯತಮೆ ಜೊತೆ ಹೋಗುವುದು ಇಲ್ಲವೆ ಇಬ್ಬರಲ್ಲಿ ಒಬ್ಬರು ಆತ್ಮಹತ್ಯೆಗೆ ಶರಣಾಗುವುದು. ಇಂತಹ ಸುದ್ದಿಗಳು ಮಾಧ್ಯಮಗಳಲ್ಲಿ ನಿತ್ಯವೂ ಇದ್ದೇ ಇರುತ್ತವೆ. ಮದುವೆ ಎನ್ನುವ ಪವಿತ್ರ ಬಂಧನದ ಅರ್ಥ ತಿಳಿಯದವರಿಂದ ಆಗಾಗ್ಗೆ ಇಂತಹ ಲೋಪಗಳಾಗುತ್ತಿರುತ್ತವೆ.

ಗಂಡ–ಹೆಂಡತಿಯ ಬೆಸುಗೆ, ಒಲುಮೆ, ಪ್ರೀತಿ, ಪ್ರೇಮ, ವಾತ್ಸಲ್ಯಗಳ ಆಳದ ಅರಿವು ನಮಗೆ ಪೂರ್ಣವಾಗಿ ಅಲ್ಲದಿದ್ದರು ಸ್ವಲ್ಪವಾದರೂ ತಿಳಿಯ ಬೇಕಾದರೆ 1915ರಲ್ಲಿ ಹುಟ್ಟಿ 2004ರಲ್ಲಿ ಕಣ್ಮರೆ ಯಾದ ಪ್ರೇಮಕವಿ ಕೆ.ಎಸ್. ನರಸಿಂಹ ಸ್ವಾಮಿ ಅವರ ಕೆಲವೇ ಕೆಲವು ಕವಿತೆಗಳನ್ನು ಓದಿದರೆ ಸಾಕು. ಮುನಿಸಿಕೊಂಡ ದಂಪತಿ ಕ್ಷಣ ಮಾತ್ರದಲ್ಲಿ ಒಂದಾಗುವರು, ವಿಚ್ಛೇದನಗೊಂಡವರು ಯಾಕಾದರು ಬೇರೆಯಾದೆವು, ಮತ್ತೆ ಒಂದಾಗುವ ಎನ್ನುವ ಮಟ್ಟಕ್ಕೆ ಮನಸ್ಸು ಬದಲಾಗದೆ ಇರಲಾರದು. ಗಂಡ–ಹೆಂಡತಿಯ ಸಂಬಂಧ ಉಳಿದೆಲ್ಲ ನಂಟಿಗಿಂತ ವಿಭಿನ್ನವಾದದ್ದು ಮತ್ತು ಶ್ರೇಷ್ಠವಾದದ್ದು ಕೂಡ.

ತಂದೆ–ತಾಯಿ ಮತ್ತು ಸ್ನೇಹಿತರಿಗೂ ಹೇಳಿಕೊಳ್ಳಲಾಗದ ನೋವು–ನಲಿವುಗಳನ್ನು ಗಂಡ–ಹೆಂಡತಿ ಪರಸ್ಪರ ಹಂಚಿಕೊಳ್ಳುವರು, ಸಮಸ್ತವನ್ನು ಕೊಟ್ಟು ಪಡೆಯುವ ಪವಿತ್ರ ಸಂಬಂಧ ಪತಿ–ಪತ್ನಿಯ ಸಂಬಂಧ.

ದಾಂಪತ್ಯದಲ್ಲಿ ಹೆಂಡತಿಗೆ ಪ್ರಮುಖ ಸ್ಥಾನ, ಈಕೆ ಮನೆಯ ಒಡತಿ. ಇವಳಿಲ್ಲದೆ ಮನೆಯೊಳಗೆ ಏನೂ ನಡೆಯದು. ಕೆಎಸ್‌ನರವರು ಬಣ್ಣಿಸಿರುವಂತೆ 'ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದೆ ಕೋಟಿ ರುಪಾಯಿ, ಹೆಂಡತಿಯೊಬ್ಬಳು ಹತ್ತಿರವಿದ್ದರೆ ನಾನೂ ಒಬ್ಬ ಸಿಪಾಯಿ. ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ಹುಣ್ಣಿಮೆ, ಹೋಳಿಗೆ, ದೀಪ, ಹೆಂಡತಿ ತೌರಿಗೆ ಹೊರಡುವನೆಂದರೆ ನನಗಿನ್ನಿಲ್ಲದ ಕೋಪ'.

ಗಂಡಸಿನ ಬದುಕಿಗೆ ಹೆಂಡತಿಯ ಮಹತ್ವವನ್ನು ನಾಟಿಸುವ ಈ ಎರಡು ಸಾಲುಗಳು ಎಷ್ಟು ಅರ್ಥಗರ್ಭಿತ. ಹೆಂಡತಿ ಗಂಡನ ಜೊತೆ ಹೆಜ್ಜೆಗೆ ಹೆಜ್ಜೆ ಇಟ್ಟು ನಡೆದರೆ ಆ ಕುಟುಂಬ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿಯೂ ಗುರುತಿಸಲ್ಪಡುವುದು. ಸ್ವತಃ ಅನುಭವಿಸಿ, ಅನುಭವಿಸಿದ್ದನ್ನು ಸುಂದರವಾಗಿ ಸರಳ ಪದಗಳಲ್ಲಿ ಕವಿತೆ ಕಟ್ಟಿ ತಲೆಮಾರು ಪೀಳಿಗೆಗೆ ಸಂ'ಸಾರ'ವೆಂದರೇನು? ಎಂಬುದಕ್ಕೆ ಅರ್ಥ ಕೊಟ್ಟಿದ್ದಾರೆ ನರಸಿಂಹಸ್ವಾಮಿಯವರು.

ಇವರ ಕವಿತೆಗಳು ನವದಂಪತಿಗಳಿಗೆ ಮೈಸೂರು ಮಲ್ಲಿಗೆಯ ಪರಿಮಳವನ್ನು ಬೀರುತ್ತದೆ, ಮೈಸೂರು ಪಾಕದ ಸಿಹಿಯನ್ನು ಕೊಡುತ್ತದೆ. ಮದುವೆಗಳಲ್ಲಿ ಮದುಮಕ್ಕಳಿಗೆ ಹಣ ಅಥವಾ ಸಾಮಾನುಗಳ ಬದಲಾಗಿ ಇವರು ರಚಿಸಿರುವ ಕವನ ಸಂಗ್ರಹಗಳ ಕೃತಿಯನ್ನು ಉಡುಗೊರೆ ಕೊಟ್ಟರೆ ಹೊಸಜೀವನಕ್ಕೆ ಕಾಲಿಡುವ ತರುಣರಿಗೆ ಕವಿತೆಗಳಲ್ಲಿರುವ ಪ್ರೀತಿಯ ಅರ್ಥ ತಿಳಿಯಲು ಅನುವಾಗುವುದು.

ಮದುವೆ ನಂತರದ ಹೆಣ್ಣು–ಗಂಡಿನ ಬದುಕು ಸಾರ್ಥಕತೆ ಪಡೆಯಬೇಕಾದರೆ ಒಬ್ಬರನ್ನೊಬ್ಬರು ಗೌರವಿಸುವುದು, ಕ್ಷಮಾಗುಣ, ಸಹಕಾರಗುಣ ಇಬ್ಬರಲ್ಲೂ ಇರಬೇಕಾಗುತ್ತದೆ. ಅದರಲ್ಲೂ ಇಬ್ಬರೂ ನೌಕರಿಗೆ ಹೋಗುವವರಾದರೆ ಹೊಂದಾಣಿಕೆ ಮುಖ್ಯ ಪಾತ್ರ ವಹಿಸುವುದು. ಇದುವರೆಗೂ ಕುಟುಂಬ ವ್ಯವಸ್ಥೆಯಲ್ಲಿ ನಡೆದುಕೊಂಡು ಬಂದಿರುವಂತೆ ಗಂಡನಾದವನು ಇಂಥ ಕೆಲಸವನ್ನು ಮಾಡಬೇಕು, ಅವುಗಳನ್ನು ಮಾಡಬಾರದು, ಹೆಂಡತಿ ಈ ಕೆಲಸಗಳನ್ನೇ ಮಾಡಬೇಕು ಎನ್ನುವುದನ್ನು ಭಾಗ ಮಾಡಿ ಇಟ್ಟುಬಿಟ್ಟಿದ್ದಾರೆ.

ಹೆಂಡತಿ ಆದವಳು ಗಂಡಸು ಮಾಡುವ ಕೆಲಸಗಳನ್ನು ನಾನು ಮಾಡಬಾರದು ಎನ್ನದೆ ಮಾಡುತ್ತಾಳೆ. ಆದರೆ ಗಂಡಸು ಎನಿಸಿಕೊಂಡ ಯಜಮಾನ ಹೆಂಡತಿ ಮಾಡುವ ಕೆಲಸಗಳನ್ನು ವಿಶೇಷ ಸಂದರ್ಭಗಳಲ್ಲೂ ಸಹ ಮಾಡಲು ಮನಸ್ಸು ಮಾಡುವುದಿಲ್ಲ. ಆದಾಗ್ಯೂ ಈ ವಿಷಯದಲ್ಲಿ ಕೆಲವು ಗಂಡಸು ಮಹನೀಯರು ಹೆಂಡತಿಗೆ ಜೊತೆಯಾಗಿ ನಿಲ್ಲುವರು.

ಅವಳ ಕೆಲಸದಲ್ಲಿ ಹೆಗಲು ಕೊಡದಿದ್ದರೂ ಒಂದರೆಗಳಿಗೆ ಬಿಟ್ಟಿರುವ ಶಕ್ತಿ ಇವನಿಗಿರುವುದಿಲ್ಲ, ಹೆಂಡತಿ ಮನೆಯಲ್ಲಿ ಇಲ್ಲದಿದ್ದರೆ ಗಂಡನಿಗೆ ಯಾವುದರಲ್ಲು ಆಸಕ್ತಿ ಇರುವುದಿಲ್ಲ, ಆದ್ದರಿಂದಲೇ ನರಸಿಂಹಸ್ವಾಮಿಯವರು ಹೇಳಿದ್ದು 'ಹೆಂಡತಿ ತೌರಿಗೆ ಹೊರಡುವನೆಂದರೆ ನನಗಿನ್ನಿಲ್ಲದ ಕೋಪ' ಎಂದು.

ಹೆಂಡತಿಯಾದವಳಿಗೂ ಗಂಡನ ಮೇಲೆ ಅತೀವ ಪ್ರೀತಿ, ಎಲ್ಲಿಯೋ ಹುಟ್ಟಿ ಬೆಳೆದ ಹೆಣ್ಣು ಮಗಳು ವಯಸ್ಸಿಗೆ ಬಂದು ಮದುವೆ ನಂತರ ನಡೆ ನುಡಿ ಸಂಸ್ಕೃತಿ ಭಿನ್ನವಾಗಿರುವ ಮತ್ತೊಂದು ಕುಟುಂಬಕ್ಕೆ ಒಗ್ಗಿಕೊಂಡು ಹೆತ್ತವರನ್ನು ಮರೆಯಲಾಗದಿದ್ದರೂ ಗಂಡನ ಮನೆಗೆ ಹೊಂದಿಕೊಳ್ಳುವ ಹೆಣ್ಣು, ತನ್ನ ಗಂಡನನ್ನೇ ಸರ್ವಸ್ವ ಎಂದು ಬದುಕುತ್ತಾಳೆ. ಅವಳಿಗೂ ಒಂದು ಮಗುವಾಗಿ ತಾಯಿ ಎನಿಸಿಕೊಂಡ ನಂತರ ಗಂಡನ ಮೇಲೆ ಅವಳಿಗಿದ್ದ ಪೂರ್ಣ ಪ್ರೀತಿಯಲ್ಲಿ ಹೆಚ್ಚು ಭಾಗ ತನ್ನ ಕರುಳಿನ ಕುಡಿಯ ಕಡೆಗೆ ಹರಿಯುವುದು. ಆ ಕುಡಿಗೂ ಮದುವೆ ಮಕ್ಕಳು ಆದ ನಂತರ ಮಕ್ಕಳನ್ನು ಬಿಟ್ಟಾಳು ಆದರೆ ಗಂಡನನ್ನು ಬಿಡುವುದಿಲ್ಲ.

ಸಾಮಾಜಿಕ ನೆಲೆಗಟ್ಟಿನಲ್ಲಿ ಇಷ್ಟೊಂದು ಬಾಂಧವ್ಯ ಇರುವ ಗಂಡ–ಹೆಂಡತಿ ಬೆಸುಗೆ ಅಲ್ಲಲ್ಲಿ ಬಿರುಕು ಬಿಡುವುದನ್ನು ಕಾಣುತ್ತೇವೆ. ಕಾರಣಗಳನ್ನು ಹುಡುಕ ಹೊರಟರೆ ನೂರಾರು ಸಿಗುತ್ತವೆ. ಗಂಡಹೆಂಡಿರನ್ನು ಕೂಡಿಸಲು ಸಾಧ್ಯವಾಗದಷ್ಟು ದೂರ ಹೋದವರೂ ಇದ್ದಾರೆ, ವಿದ್ಯಾವಂತರು ಮೇಲ್ದರ್ಜೆಯ ನಾಗರಿಕರಲ್ಲಿ ಸಂಸಾರಿಕ ಸಮಸ್ಯೆಗಳು ಹೆಚ್ಚು.

ನನ್ನ ಮಹಿಳಾ ಸಹದ್ಯೋಗಿ ಸಂಬಂಧಿ ಸಂಸಾರವೂ ಇದೇ ರೀತಿ ಆಗಿರುವುದನ್ನು ಕೇಳಿ ಬೇಸರವಾಯಿತು. ಆಕೆಯೇ ಹೇಳುವಂತೆ ಆತ ಸ್ನಾತಕೋತ್ತರ ಪದವಿ ಪಡೆದು ಕೈತುಂಬ ಸಂಬಳ ಪಡೆಯುವ ಉಪನ್ಯಾಸಕನಾಗಿದ್ದಾನೆ, ಗುಣದಲ್ಲಿ ಸಾಧು ಸ್ವಭಾವ, ಅವನಿಗೆ ಮದುವೆ ಆಗಿ ಸುಮಾರು ಮೂರು ವರ್ಷಗಳಾಗಿದೆ. ಅದೇ ಊರಿನ ಸಂಬಂಧಿಕರ ಹುಡುಗಿಯನ್ನು ಮದುವೆ ಮಾಡಿಕೊಂಡಿದ್ದಾನೆ. ಅಂತರ್ಯದಲ್ಲಿ ಏನಿದಿಯೋ ಯಾರಿಗೂ ತಿಳಿಯದು. ಗಂಡ–ಹೆಂಡತಿ ಅನ್ಯೋನ್ಯತೆಯಿಂದ ಇಲ್ಲವಂತೆ. ತಂದೆ–ತಾಯಿಯ ಜೊತೆಗೆ ಇರುವ ಈ ದಂಪತಿಗಳು ಒಂದು ದಿನವೂ ಜೊತೆಗೆ ಮಲಗಿಲ್ಲವಂತೆ. ಇಲ್ಲಿ ವರದಕ್ಷಿಣೆಯ ಕಿರುಕುಳ ಇಲ್ಲ. ಅತ್ತೆ ಮಾವನ ಕಾಟವಿಲ್ಲ, ಸೊಸೆಯದ್ದೆ ಉದ್ದಟತನ, ಮಾತುಮಾತಿಗೂ ಗಂಡನನ್ನು ಹೀಯ್ಯಾಳಿಸುತ್ತಾಳಂತೆ. ಇವಳ ಕಿರುಕುಳವನ್ನು ತಡೆಯಲಾರದೆ ಹುಡುಗ ಮನೆ ಬಿಟ್ಟು ಹೋಗಿ ಕೆಲವು ತಿಂಗಳಾಗಿದೆಯಂತೆ, ಎಲ್ಲಿದ್ದಾನೆ ಎನ್ನುವುದು ಮನೆಯವರಿಗೆ ತಿಳಿಯದು. ಹುಡುಗಿ ಗಂಡನ ಮನೆ ತೊರೆದು ಅಪ್ಪನ ಮನೆಯನ್ನು ಸೇರಿಕೊಂಡಿದ್ದಾಳೆ.

ಹೆಣ್ಣಿನ ತಪ್ಪಿನಿಂದಾಗಿ ವಿದ್ಯಾವಂತನಾದ ಒಬ್ಬನೇ ಮಗ ಮನೆ ಬಿಟ್ಟು ಹೋಗಿರುವುದು ಎಲ್ಲಿಗೆ? ಎಂಬುದನ್ನು ತಿಳಿಯದೆ ಪರಿತಪಿಸುತ್ತಿರುವ ವೃದ್ಧ ತಂದೆ–ತಾಯಿ, ನನ್ನ ಅಣ್ಣನ ಸಂಸಾರ ಹೀಗಾಯ್ತಲ್ಲ ಎಂಬ ಚಿಂತೆಯಲ್ಲಿರುವ ತಂಗಿ. ಹಿರಿಯರು ನಿಂತು ಮದುವೆ ಮಾಡಿರುವ ಈ ಸಂಸಾರ ಪ್ರಾರಂಭದಲ್ಲೇ ದಾರಿತಪ್ಪಿದೆ. ಸರಿಹೋಗುವ ಲಕ್ಷಣಗಳು ಕಂಡು ಬರುತ್ತಿಲ್ಲ. ಹುಡುಗ ಬೇರೆ ಮದುವೆ ಮಾಡಿಕೊಳ್ಳಲು ವಿಚ್ಛೇದನವನ್ನು ನೀಡಲು ಒಪ್ಪದ ಹೆಣ್ಣು, ವರದಕ್ಷಿಣೆಯ ಕಿರುಕುಳ ನೀಡುತ್ತಿದ್ದೀರಿ ಎಂಬುದಾಗಿ ಪೊಲೀಸ್‌ಗೆ ದೂರು ನೀಡುತ್ತೇನೆಂದು ಎದುರಿಸುತ್ತಿದ್ದಾಳಂತೆ.

ತನ್ನ ಕೈಯ್ಯಾರೆ ತಾನೇ ಜೀವನವನ್ನು ಹಾಳು ಮಾಡಿಕೊಳ್ಳಲು ಯಾವ ಹೆಣ್ಣು ಬಯಸುತ್ತಾಳೆ?, ಇದೊಂದು ಯಕ್ಷಪ್ರಶ್ನೆಯಾಗಿ ಉಳಿದಿದೆ. ಇವರಿಬ್ಬರ ವೈರತ್ವಕ್ಕೆ ಕಾರಣ ಏನು ಎನ್ನುವುದು ಮನೆಯವರಿಗೆ ಸ್ಪಷ್ಟವಾಗಿ ತಿಳಿಯದು. ಜೀವನವೇ ಬೇಡವೆಂದು ಕಾಣದಂತೆ ಮಾಯವಾಗಿರುವ ಮಗ. ಜೀವನ ನಿರ್ವಹಣೆಗೆ ಕಷ್ಟವಾಗಿ ದಿನ ಕಳೆಯುತ್ತಿರುವ ವಯಸ್ಸಾದ ತಂದೆತಾಯಿ. ಕಡುವೈರಿಗೂ ಬೇಡ ಇಂಥಹ ಶಿಕ್ಷೆ.

ಇಂತಹ ಕಿಡಿಗೇಡಿ ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದೆ ಕೋಟಿ ರುಪಾಯಿ ಎಂದು ಯಾವ ಗಂಡ ತಾನೆ ಹೇಳುತ್ತಾನೆ?. ಕೋಪಿಸಿಕೊಳ್ಳಲು ಹೆಂಡತಿ ತವರಿಗೆ ಹೋಗುವುದಿರಲಿ ಗಂಡನೇ ಮನಸ್ಸು ಕೆಡಿಸಿಕೊಂಡು ಮನೆ, ಊರು, ನೌಕರಿ, ಬಂಧುಬಳಗ ಎಲ್ಲವನ್ನೂ ಬಿಟ್ಟು ಹೋಗಿದ್ದಾನೆ!. ಹೆಂಡತಿಯೊಬ್ಬಳು ಹತ್ತಿರವಿದ್ದರೆ ನಾನೂ ಒಬ್ಬ ಸಿಪಾಯಿ ಆಗುವುದಿರಲಿ ಇಂಥ ಗಂಡಂದಿರಿಗೆ ಬಡಪಾಯಿಗಳಾಗಿ ಬದುಕೇ ಜಿಗುಪ್ಸೆ ಎನಿಸಿದೆ, ಹೆಂಡತಿ ಎಂಬುದು ಸುಖ–ಸಂತೋಷ ನೀಡುವ ಬದಲಾಗಿ ಭೂತವಾಗಿ ಕಾಡುತ್ತಿದೆ.

ಮದುವೆಗೆ ಮೊದಲು ಬೇರೆಯವರಿಗೆ ಹೇಗೆ ಕಾಣುತ್ತೋ ಬಿಡುತ್ತೊ ಪ್ರೀತಿಗೆ ಬಿದ್ದವರಿಗೆ ಹುಡುಗನಿಗೆ ಹುಡುಗಿ, ಹುಡುಗಿಗೆ ಹುಡುಗ ಚೆಂದವಾಗಿ ಅಂದವಾಗಿ ಸೂರ್ಯಚಂದ್ರರಿಗೆ ಸರಿಸಾಟಿಯಾಗಿ, ಮುಗಿಲಂದಕ್ಕೆ ಮಿಗಿಲಾಗಿ ಕಾಣುತ್ತಾರೆ. ಹರೆಯದರಲ್ಲಿ ಚೆಂದವಿಲ್ಲದ್ದು ಅಂದವಾಗಿ ಕಾಣುವುದಕ್ಕೆ ಕಾರಣ ತಾರುಣ್ಯದಲ್ಲಿ ಹೆಚ್ಚಿನವರಿಗೆ ಕಣ್ಣಿಗೆ ಕಾಮದ ಪೊರೆ ಆವರಿಸಿಕೊಂಡಿರುತ್ತದೆ, ಇದೊಂದು ರೀತಿಯ ಕಾಮಾಲೆ ಕಣ್ಣಿಗೆ ಕಂಡಿದ್ದೆಲ್ಲವೂ ಹಳದಿ.

ಮದುವೆಯ ನಂತರ ಹತ್ತಾರು ವರ್ಷ ಸುಖ–ಸಂಸಾರ ನಡೆಸಿದ ನಂತರವೂ ಅಕ್ಕಪಕ್ಕದ ಮನೆಯ ಯಜಮಾನನ ಹೆಂಡತಿಯರಿಗಿಂತ ನಮ್ಮ ಹೆಂಡತಿ ಸುಂದರವಾಗಿ ಕಾಣುತ್ತಾಳೆಂದರೆ ಅದುವೇ ಆಳವಾಗಿ ಬೇರೂರಿರುವ ನೈಜ ಪ್ರೀತಿ. ಇತರೆ ಹೆಂಗಸರು ಸುರಸುಂದರಿಯರಾಗಿ ಇಲ್ಲವೆಂದೇನು ಅಲ್ಲ. ಇದ್ದರೂ ನನ್ನವಳು ನನಗೆ ಅವರೆಲ್ಲರಿಗಿಂತಲೂ ಬಲು ಸುಂದರಿ ಎನ್ನುತ್ತಾರೆ ಪ್ರೇಮಕವಿ ನರಸಿಂಹಸ್ವಾಮಿಗಳು.

ನನ್ನವಳು ನನ್ನೆದೆಯ ಹೊನ್ನಾಡನಾಳುವಳು ಬೆಳಗುಗೆನ್ನೆಯ ಚೆನ್ನೆ ನನ್ನ ಮಡದಿ: ಹೊಳೆಯ ಸುಳಿಗಳಿಗಿಂತ ಆಳ ಕಣ್ಣಿನ ಚೆಲುವು ಅವಳೊಮ್ಮೆ ಹೆರಳ ಕೆದರಿ ಕಪ್ಪುಗುರುಳನು ಬೆನ್ನ ಮೇಲೆಲ್ಲ ಹರಡಿದರೆ ದೂರದಲಿ ಗಿರಿಯ ಮೇಲೆ ಇಳಿದಂತೆ ಇರುಳ ಮಾಲೆ.

ಕವಿಯ ಕವಿತೆಯಲ್ಲಿ ಬಣ್ಣಿಸುವಂತೆ ನನ್ನವಳು ನನ್ನೆದೆಯನ್ನು ಆಳಬೇಕೆ ಹೊರತು ಬೇರೆ ಯಾರೋ ಸುಂದರಿ ಆಳುವುದಲ್ಲ. ದಾಂಪತ್ಯವು ಸುಖದಾರಿ ಕಾಣಬೇಕಾದರೆ ಹೆಂಡತಿಯ ಹೃದಯವು ಸಹ ಗಂಡನಿಗಾಗಿ ಮಿಡಿಯುತ್ತಿರಬೇಕು, ಇದೊಂದು ರೀತಿಯ ಕೊಟ್ಟು ತೆಗೆದುಕೊಳ್ಳುವ ಬದುಕಿನ ವ್ಯವಹಾರ.

ಇತ್ತೀಚೆಗಂತು ಮದುವೆಯಾದ ಹೊಸತರಲ್ಲೇ ಸಂಬಂಧಗಳು ಮುರಿದುಬೀಳುತ್ತಿವೆ. ಕೆಲವು ಕಲ್ಯಾಣಮಂಟಪದಲ್ಲೇ ಹೆಣ್ಣು/ಗಂಡು ಕೈಕೊಟ್ಟ ಉದಾಹರಣೆಗಳಿವೆ. ರಕ್ತಗತವಾದ ಸಂಬಂಧಗಳು ಬೆಳೆಯುತ್ತಾ ದೂರವಾಗುವುದುಂಟು ಆದರೆ ಗಂಡ–ಹೆಂಡತಿಯ ನಂಟು ಮಾಗಿದಂತೆ ಬಿಗಿಯಾಗುತ್ತಾ ಹೋಗಬೇಕು. ವೃದ್ಧಾಪ್ಯದಲ್ಲಿ ಒಬ್ಬರಿಗೊಬ್ಬರ ಅವಲಂಬನೆ ಬಹಳವೇ ಬೇಕಾಗುತ್ತದೆ. ಏಕೆಂದರೆ ಆ ಕಾಲಘಟ್ಟದಲ್ಲಿ ಹೆತ್ತ ಮಕ್ಕಳು ತಾತ್ಸಾರದಿಂದ ಕಾಣುವುದುಂಟು ಅಥವಾ ಪ್ರೀತಿಯಿಂದ ನೋಡಿಕೊಂಡರೂ ದುಡಿಮೆಗಾಗಿ ಅನ್ಯ ಊರುಗಳಲ್ಲಿ ಇರುವುದರಿಂದ ಅಪ್ಪ–ಅಮ್ಮನ ಹಾರೈಕೆ ಕಷ್ಟವಾಗುವುದು.

ಚಿರಕಾಲ ಈ ಸಂಬಂಧ ಉಳಿಯಬೇಕಾದರೆ ಗಂಡನಿಗಿಂತ ಹೆಂಡತಿಯ ಸಹಕಾರವು ಪ್ರಮುಖ ಪಾತ್ರ ವಹಿಸುತ್ತದೆ. ಮದುವೆಗೆ ಮುಂಚೆ ಹೆಣ್ಣಾದವಳು ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂರವರು ಹೇಳುವ ದೊಡ್ಡದಾಗಿ ಕನಸ್ಸನ್ನು ಕಾಣಬೇಕು ಎನ್ನುವಂತೆ ಕನಸುಗಳು ಹೆಣ್ಣುಮಕ್ಕಳಿಗೆ ಜಾಸ್ತಿ. ಅವು ಕೈಗೂಡದಿದ್ದರೆ ಜೀವನಪೂರ ಸಂಕಟ ಅನುಭವಿಸುತ್ತಾರೆ. ಕನಸುಗಳು ನನಸಾಗದೇ ಇರಬಹುದು ಆದರೆ ಇದ್ದುದರಲ್ಲಿ ಸುಖಪಡುವುದು ಜಾಣತನ, ಅಂಥ ಹೆಣ್ಣು ಗಂಡನಿಗೆ ಹೇಳುವ ರೀತಿ ಎಷ್ಟು ಚೆನ್ನಾಗಿದೆ ನೋಡಿ:

ಬಡತನವೊ, ಸಿರಿತನವೊ, ಯಾರಿರಲಿ, ಎಲ್ಲಿರಲಿ, ದೊರೆಯಾಗಿ ಮೆರೆವರು ನೀವಲ್ಲವೆ?, ಗಂಡನಿಗೆ ಒಪ್ಪಾಗಿ, ಕಂದನಿಗೆ ದಿಕ್ಕಾಗಿ, ಪಯಣದಲಿ ಜೊತೆಯಾಗಿ ನಾನಿಲ್ಲವೆ?. ಗಂಡನಿಗೆ ಪಯಣದಲ್ಲಿ ಜೊತೆಯಾಗಿ ಹೀಗೆ ನಿಲ್ಲುವ ಹೆಂಡತಿ ಇದ್ದರೆ ಸಂಸಾರಗಳು ಸುಖವಾಗಿರುತ್ತವೆ. ಮದುವೆ ಸಂಭ್ರಮಾಚರಣೆಗಳು ಇಪ್ಪತ್ತೈದು, ಐವತ್ತು ಊಹಂ.. ನೂರು ದಾಟಿದರೂ ಆಶ್ಚರ್ಯವಿಲ್ಲ.

ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಿಂದ ವಿವಿಧ ಅಂಗನವಾಡಿ ಕೇಂದ್ರಗಳಿಗೆ ಭೇಟಿ; ಪರಿಶೀಲನೆ





ಪ್ರಧಾನ ಮೈಸೂರು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ರವೀಂದ್ರ ಹೆಗ್ಡೆ ಅವರು ಮೈಸೂರು ನಗರದ ವಿವಿಧ ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ, ಅಲ್ಲಿನ ಮೂಲಸೌಕರ್ಯಗಳ ಬಗ್ಗೆ ಪರಿಶೀಲನೆ ನಡೆಸಿದರು.

ಮೈಸೂರು,ಆ.12–ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಹಾಗೂ ಅಂಗನವಾಡಿ ಕೇಂದ್ರಗಳ ಮೂಲಸೌಕರ್ಯದ ರಾಜ್ಯ ಸಮಿತಿ ಅಧ್ಯಕ್ಷರಾದ ವಿಶ್ರಾಂತ ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ನಿರ್ದೇಶನದಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ರವೀಂದ್ರ ಹೆಗ್ಡೆ ಅವರು ಮೈಸೂರು ನಗರದ ವಿವಿಧ ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ಅಲ್ಲಿನ ಮೂಲಸೌಕರ್ಯಗಳ ಕೊರತೆಯನ್ನು ಕಂಡು ಕಳವಳ ವ್ಯಕ್ತಪಡಿಸಿದರು.

ಮೈಸೂರು ನಗರದಲ್ಲಿ ಬಹುತೇಕ ಅಂಗನವಾಡಿ ಕೇಂದ್ರಗಳು ಸಮುದಾಯ ಭವನ ಹಾಗೂ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅಂಗನವಾಡಿ ಕೇಂದ್ರದಲ್ಲಿ ಶುದ್ಧ ಗಾಳಿ, ಬೆಳಕು, ಕುಡಿಯುವ ನೀರಿನ ಕೊರತೆ ಇರುತ್ತದೆ. ಅಲ್ಲದೆ ಕಟ್ಟಡಗಳು ಶಿಥಿಲಗೊಂಡಿದ್ದು, ಮಳೆ ನೀರು ಸೋರಿಕೆಯಾಗುತ್ತಿರುತ್ತದೆ. ಇನ್ನು ಕೆಲವು ಅಂಗನವಾಡಿ ಕೇಂದ್ರಗಳಲ್ಲಿ ಹೆಗ್ಗಣಗಳು ಬಿಲಾ ತೋಡಿ ಕಟ್ಟಡದ ನೆಲಹಾಸು ಹಾಳಾಗಿರುವುದು, ಇದರಿಂದ ಅಹಾರ ಸಂರಕ್ಷಣೆಗೆ ತೊಡಕುಂಟಾಗಿರುವುದು ಕಂಡು ಬಂದಿರುತ್ತದೆ ಹಾಗೂ ಈ ಕುರಿತು ಅಗತ್ಯ ಕ್ರಮಕೈಗೊಳ್ಳುವಂತೆ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು.

ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ತಯಾರಿಸುವ ಆಹಾರದಲ್ಲಿ ಪೋಷಕಾಂಶದ ಕೊರತೆ, ಮಕ್ಕಳಿಗೆ ತಯಾ ರಿಸುವ ಲಡ್ಡು ಹಾಗೂ ಸಾಂಬಾರು ಮಾಡಲು ಉಪಯೋಗಿಸುವ ಬೇಳೆ, ಕಾಳುಗಳು ಅವಧಿ ಮುಕ್ತಾಯವಾಗಿದ್ದ (date Expired) ಆಹಾರ ಪದಾರ್ಥಗ ಇರುವುದನ್ನು ಕಂಡು ನ್ಯಾಯಾಧೀಶರು ಕಳವಳ ವ್ಯಕ್ತಪಡಿಸಿದರು. ಸದರಿ ಆಹಾರ ಪದಾರ್ಥಗಳನ್ನು ತಕ್ಷಣ ವಾಪಸ್ಸು ಕಳುಹಿಸುವಂತೆ ಹಾಗೂ ಉತ್ತಮ ಅಹಾರ ಪದಾರ್ಥಗಳು ಪಡೆಯುವಂತೆ ನಿರ್ದೇಶಿಸಿದರು.

ಅಂಗನವಾಡಿ ಕೇಂದ್ರದ ಕಾರ್ಯಕರ್ತೆಯರಿಗೆ, ಸಹಾಯಕಿಯರಿಗೆ, ಮೇಲ್ವಿಚಾರಕರಿಗೆ ಅಂಗನವಾಡಿ ಕೇಂದ್ರಗಳನ್ನು ಹೇಗೆ ನಿಭಾಯಿಸಬೇಕು ಮತ್ತು ಸರ್ಕಾರದ ಆಶಯ, ಉದ್ದೇಶಗಳನ್ನು ಮನವರಿಕೆ ಮಾಡಿ ಕೊಟ್ಟು, ಮೂಲಸೌಕರ್ಯಗಳ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತರುವ ಭರವಸೆ ನೀಡಿದರು. ಹಾಗೆಯೇ ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯರ, ಶುಶ್ರೂಷಕರ, ಪೊಲೀಸ್ ಠಾಣೆಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ, ಅಧಿಕಾರಿಗಳ, ಮೇಲ್ವಿಚಾರಕರ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ದೂರವಾಣಿ ಸಂಖ್ಯೆಗಳನ್ನು ಪ್ರಕಟಿಸುವಂತೆ ಸೂಚಿಸಿ ದರು. ಈ ಸಂದರ್ಭದಲ್ಲಿ ಹಿರಿಯ ಸಿವಿಲ್ ನ್ಯಾಯಾ ಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿ ಕಾರದ ಸದಸ್ಯ ಕಾರ್ಯದರ್ಶಿ ದಿನೇಶ್.ಬಿ.ಜಿ ಹಾಜರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಆ.12– ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ ನಿರ್ವಹಣಾ ಕೆಲಸದ ನಿಮಿತ್ತ ಆ.13ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಇಲವಾಲ, ಹಳೆ–ಕಾಮನಕೊಪ್ಪಲು, ಮೈದನಹಳ್ಳಿ, ಮೇಗಳಾಪುರ, ಭದ್ರೇಗೌಡನ ಕೊಪ್ಪಲು, ಚಿಕ್ಕೆಗೌಡನಕೊಪ್ಪಲು, ಹೊಸಕೋಟೆ, ಸರಕಟ್ಟೆ, ಯಾಚೇಗೌಡನಹಳ್ಳಿ, ದಡಕನಹಳ್ಳಿ, ರಾಮೇನಹಳ್ಳಿ, ಯಡಹಳ್ಳಿ, ಕಲ್ಲೂರು, ನಾಗನಹಳ್ಳಿ, ಗುಂಗ್ರಾಲ್‌ಛತ್ರ, ಛತ್ರದ ಕೊಪ್ಪಲು, ರಟ್ನಳ್ಳಿ, ವೀರಪ್ಪನಕೊಪ್ಪಲು ಮತ್ತು ಸುತ್ತಮುತ್ತಲಿನ ಪ್ರದೇಶಗಳು.


ಗೋಕುಲಂ 1ನೇ, 2ನೇ ಮತ್ತು 3ನೇ ಹಂತ, ಮಾದೇಶ್ವರ ಬಡಾವಣೆ, ವಿಜಯನಗರ 1ನೇ ಮತ್ತು 2ನೇ ಹಂತ, ಹಿನಕಲ್, ಯಾದವಗಿರಿ, ಮಂಜುನಾಥಪುರ, ಮಹಾಜನ ಲೇಔಟ್, ಒಂಟಿಕೊಪ್ಪಲ್, ಜಯಲಕ್ಷ್ಮೀಪುರಂ, ಸಿ.ಎಫ್.ಟಿ.ಆರ್.ಐ, ಡಿ.ಸಿ.ಹೌಸ್, ನಾರ್ಥ್ ಕ್ವಾರ್ಟಸ್, ಆಕಾಶವಾಣಿ, ಇಎಸ್ಐ ಆಸ್ಪತ್ರೆ ಹಸು–ಕರು ಪಾರ್ಕ್, ಗೋಕುಲಂ ಪಾರ್ಕ್, ಕಾಳಿದಾಸ ರೋಡ್, ಯಾದವಗಿರಿ ಕೈಗಾರಿಕಾ ಪ್ರದೇಶ, ವಿಜಯನಗರ ವಾಟರ್ ಸಪ್ಲೈ, ಆದಿ ಪಂಪಾ ರಸ್ತೆ, ಎಂ.ಎ.ಸಿ ಲೇಡಿಸ್ ಹಾಸ್ಟಲ್, ಜನರಲ್ ತಿಮ್ಮಯ್ಯ ರಸ್ತೆ, ಬೃಂದಾವನ, ಯೋಗನರಸಿಂಹ ಸ್ವಾಮಿ ದೇವಸ್ಥಾನ, ಆಯಿಸ್ಟಾರ್ ಬೇ ಹಾಗೂ ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಈಗಾಗಲೇ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಿದೆ

ಹೈಕೋರ್ಟ್‌ಗೆ ಮಾಹಿತಿ ನೀಡಲು ಸರ್ಕಾರ ಸಿದ್ಧತೆ

ಮೈಸೂರು,ಆ.12(ಆರ್‌ಕೆ)–ಸಚಿವ ಸಂಪುಟದಲ್ಲಿ ನಿರ್ಧಾರವಾದಂತೆ ಅಧಿಸೂಚನೆ ಹೊರಡಿಸಿ ರಚನೆಯಾಗಿರುವ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರವು ಈಗಾಗಲೇ ಕಾರ್ಯಾರಂಭ ಮಾಡಿದೆ ಎಂದು ಹೈಕೋರ್ಟ್‌ಗೆ ಸಮಜಾಯಿಷಿ ನೀಡಲು ಸರ್ಕಾರ ಸಿದ್ಧತೆ ಮಾಡಿಕೊಳ್ಳುತ್ತಿದೆ. ಸಚಿವ ಸಂಪುಟದಲ್ಲಿ ಮಸೂದೆ ಅನುಮೋದಿಸಿ ರಾಜ್ಯ ಪತ್ರದಲ್ಲೂ ಅಧಿಸೂಚನೆ ಪ್ರಕಟಿಸಿ ಅದರ ನ್ವಯ ಒಂದು ತಿಂಗಳ ಹಿಂದೆಯೇ, ಜುಲೈ 1ರಿಂದಲೇ ಕಾರ್ಯಾರಂಭ ಮಾಡಿರುವ ಪ್ರಾಧಿಕಾರದ ವಿರುದ್ಧ ರಾಜಮಾತೆ ಪ್ರಮೋದಾದೇವಿ ಒಡೆಯರ್ ಜುಲೈ 19ರಂದು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ ಎಂದು ಪ್ರಾಧಿಕಾರದ ಮೂಲಗಳು ತಿಳಿಸಿವೆ.



ಅವರ ಅರ್ಜಿ ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಅಧಿಕಾರಿಗಳು ಪೂರಕ ದಾಖಲೆಗಳೊಂದಿಗೆ ವಾದ ಮಾಡಿ ಸಮಜಾಯಿಷಿ ನೀಡದ ಕಾರಣ ನ್ಯಾಯಾಲಯವು ಪ್ರಾಧಿಕಾರಕ್ಕೆ ಮಧ್ಯಂತರ ತಡೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ದಸರೆಯೊಳಗೆ ಚಾಮುಂಡಿಬೆಟ್ಟದ ನಂದಿ ರಸ್ತೆ ಸಂಚಾರಕ್ಕೆ ಮುಕ್ತ

ಮೈಸೂರು, ಆ. 12(ಆರ್‌ಕೆ)– ಭಾರಿ ಮಳೆಯಿಂದಾಗಿ ಕುಸಿದಿದ್ದ ಚಾಮುಂಡಿ ಬೆಟ್ಟದ ನಂದಿ ಪ್ರತಿಮೆ ರಸ್ತೆಗೆ ತಡೆಗೋಡೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

ಕುಸಿದ ಕಾರಣ ಮುಂಜಾಗ್ರತೆಯಾಗಿ ಬಂದ್ ಮಾಡಲಾಗಿದ್ದ ಬೆಟ್ಟದ ವ್ಯೂ ಪಾಯಿಂಟ್ ಮತ್ತು ನಂದಿ ಪ್ರತಿಮೆ ನಡುವಿನ ರಸ್ತೆಯನ್ನು ದಸರಾ ಮಹೋತ್ಸವದೊಳಗಾಗಿ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು ಎಂದು ಲೋಕೋಪಯೋಗಿ ಇಲಾಖೆ ಎಗ್ಸಿಕ್ಯೂಟಿವ್ ಇಂಜಿನಿಯರ್ ರಾಜು ತಿಳಿಸಿದ್ದಾರೆ.



ಚಾಮುಂಡಿಬೆಟ್ಟದ ನಂದಿ ಪ್ರತಿಮೆ ರಸ್ತೆಗೆ ತಡೆಗೋಡೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುವುದು.

ಕಳೆದ ಮೂರು ವರ್ಷಗಳ ಹಿಂದೆ ಅತೀ ಹೆಚ್ಚು ಮಳೆಯಿಂದಾಗಿ ಬೆಟ್ಟದಲ್ಲಿ ನೀರು ಹರಿದ ಪರಿಣಾಮ ವ್ಯೂ ಪಾಯಿಂಟ್ ಮತ್ತು ನಂದಿ ಪ್ರತಿಮೆ ನಡುವೆ ಎರಡನೇ ವ್ಯೂ ಪಾಯಿಂಟ್ ಬಳಿ ರಸ್ತೆ ಕುಸಿದಿದ್ದು, ತಡೆಗೋಡೆ ನಿರ್ಮಿಸುವ ಕಾಮಗಾರಿ ಪ್ರಗತಿಯಲ್ಲಿದ್ದು ಶೇ. 80ರಷ್ಟು ಕೆಲಸ ಪೂರ್ಣಗೊಂಡಿದೆ. ಮಳೆ ಸುರಿಯುತ್ತಿರುವ ಕಾರಣ ಸ್ಥಗಿತಗೊಂಡಿರುವ ಕೆಲಸವನ್ನು ನಿಂತ ಮೇಲೆ ಪುನಾರಂಭಿಸಲಾಗುವುದು ಎಂದು ಅವರು ತಿಳಿಸಿದರು.

2021ರ ಅಕ್ಟೋಬರ್ ಮಾಹೆಯಲ್ಲಿ ಕುಸಿದಿದ್ದರಿಂದ ನಂದಿ ರಸ್ತೆಯಲ್ಲಿನ ವಾಹನ ಸಂಚಾರವನ್ನು ಸುರಕ್ಷತೆ ದೃಷ್ಟಿಯಿಂದ ಬಂದ್ ಮಾಡಲಾಗಿತ್ತು. 10 ಕೋಟಿ ರೂ. ವೆಚ್ಚದಲ್ಲಿ ರಸ್ತೆಗೆ ತಡೆಗೋಡೆ ನಿರ್ಮಿಸುವ ಕಾರ್ಯ ನಡೆಯುತ್ತಿದ್ದು, ಬಾಕಿ ಇರುವ ಕೆಲಸವನ್ನು 2 ತಿಂಗಳೊಳಗಾಗಿ ಪೂರ್ಣಗೊಳಿಸಿ ಮುಂಬರುವ ದಸರೆ ವೇಳೆಗೆ ಮುಕ್ತಗೊಳಿಸಲಾಗುವುದು ಎಂದು ರಾಜು ತಿಳಿಸಿದರು. ಮಳೆಯಿಂದಾಗಿ ಈ ರಸ್ತೆಯ ಮತ್ತೊಂದೆಡೆಯೂ ಕುಸಿದಿದ್ದು, ಲೋಕೋಪಯೋಗಿ ಇಲಾಖೆಯಿಂದಲೇ ರಿಪೇರಿ ಮಾಡಲಾಗಿದೆ. 1994, 2005, 2017ರಲ್ಲೂ ಚಾಮುಂಡಿಬೆಟ್ಟದ ಹಲವೆಡೆ ಭೂ ಕುಸಿತ ಉಂಟಾಗಿತ್ತು. ನಂತರ 2021ರ ಅಕ್ಟೋಬರ್ 20ರಂದು ನಂದಿ ಪ್ರತಿಮೆಗೆ ಹೋಗುವ ರಸ್ತೆಯಲ್ಲಿ ಭೂ ಕುಸಿತವಾಗಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

2019, 2021ರ ಅಕ್ಟೋಬರ್ 31ರಂದು ಆ ರಸ್ತೆಯಲ್ಲಿ ಭೂ ಕುಸಿತವಾಗಿದ್ದರಿಂದ ಆ ಮಾರ್ಗದ ವಾಹನ ಸಂಚಾರವನ್ನು ಬಂದ್ ಮಾಡಲಾಗಿತ್ತು. ಮಳೆ ಹೆಚ್ಚಾಗಿರುವುದರಿಂದ ಬೆಟ್ಟದ ಹಲವೆಡೆ ಈ ರೀತಿಯ ಭೂ ಕುಸಿತ ಉಂಟಾಗಿರುವುದರಿಂದ ಇಲಾಖೆಯು ಆಗಿಂದಾಗ್ಗೆ ಪರಿಶೀಲಿಸಿ ಅಂತಹ ಸ್ಥಳಗಳಲ್ಲಿ ರಿಪೇರಿ ಕಾರ್ಯ ನಡೆಸಲಾಗಿತ್ತು ಎಂದು ರಾಜು 'ಮೈಸೂರು ಮಿತ್ರ'ದಲ್ಲಿ ತಿಳಿಸಿದ್ದಾರೆ.

ಸರ್ಕಾರವು ಆದ್ಯತೆ ಮೇಲೆ ಬೆಟ್ಟದಲ್ಲಿ ಆಗಿಂದಾಗ್ಗೆ ಕುಸಿಯುತ್ತಿರುವುದರಿಂದ ಆದ್ಯತೆ ಮೇಲೆ ಲೋಕೋಪಯೋಗಿ ಇಲಾಖೆಯು ಗಮನಹರಿಸಿ ರಿಪೇರಿ ಮಾಡಿ ವಾಹನ ಸಂಚಾರಕ್ಕೆ ಈ ರಸ್ತೆಯನ್ನು ರಿಪೇರಿ ಮಾಡಬೇಕು ಎಂದು ತಿಳಿಸಿದರು.

ಅಖಿಲ ಭಾರತ ವೀರಶೈವ ಅಂಗಾಯತ ಮಹಾಸಭಾ ರಾಷ್ಟ್ರೀಯ ಕಾರ್ಯಕಾರಿ ಸಮಿತಿಗೆ ಆಯ್ಕೆ




ಮೈಸೂರು: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಕೆ.ಕೆ.ಕಂಡೇಶ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಗುರುವಂದನಾ ಕಾರ್ಯಕ್ರಮ

ಮೈಸೂರು, ಆ.12–ಮೈಸೂರಿನ ನಂಜುಮಳಿಗೆ ವೃತ್ತದಲ್ಲಿರುವ ಶ್ರೀ ಗೋಪಾಲ ಸ್ವಾಮಿ ಶಿಕ್ಷಣ ಸಂಸ್ಥೆ ಆವರಣದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ಆ.13ರಂದು ಸಂಜೆ 5 ಗಂಟೆಗೆ ಗುರುವಂದನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಪ್ರಧಾನ ಭಾಷಣಕಾರರಾಗಿ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶಿವಾನಂದ ಸಿಂಧನಕೇರಾ ಮಾತನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಉಪಾಧ್ಯಕ್ಷರಾದ ಉದಯರವಿ ಪ್ರಕಾಶ್ ಕೆ.ಆರ್, ಗಂಗಾಧರಚಾರ್, ಗೋಪಾಲ ಸ್ವಾಮಿ ಶಿಕ್ಷಣ ಸಂಸ್ಥೆಯ ಕರೆಸ್ಪಾಂಡೆಂಟ್ ಎನ್.ಆರ್.ಮಂಜುನಾಥ್ ಉಪಸ್ಥಿತರಿರುತ್ತಾರೆ. ಮಾಧ್ಯಮಿಕ ಶಿಕ್ಷಕ ಸಂಘದ ಅಧ್ಯಕ್ಷ ಕೆಂಪಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ.

ಸಿದ್ದರಾಮಯ್ಯ ಅವರಿಗೆ ಹುಟ್ಟುಹಬ್ಬದ ಶುಭಾಶಯ...



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ 77ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ಬೆಂಗಳೂರಿನ ನಿವಾಸದಲ್ಲಿ ಶುಭಾಶಯ ಕೋರಲಾಯಿತು. ಈ ವೇಳೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಮರಿಗೌಡ, ಮುಖಂಡರಾದ ಸೀತಾರಾಮ, ತಮ್ಮಣ್ಣೇಗೌಡ, ಜವರೇಗೌಡ, ಆನಂದ, ಶಿವಕುಮಾರ, ರವಿ ಇನ್ನಿತರರಿದ್ದರು.

ಮುಡಾ ಹಗರಣ; ಸಿಬಿಐ ತನಿಖೆಗೆ ಒತ್ತಾಯಿಸಿ ಪ್ರತಿಭಟನೆ

ಮೈಸೂರು,ಆ.12(ಪಿಎಂ)–ರಾಜ್ಯದ ಆಡಳಿತ, ವಿರೋಧ ಪಕ್ಷಗಳು (ಪಾದಯಾತ್ರೆ ಮತ್ತು ಜನಾಂದೋಲನ ಸಮಾವೇಶ) ಪರಸ್ಪರ ರಾಜಕೀಯ ಕೆಸರೆರಚಾಟದಲ್ಲಿ ತೊಡಗಿವೆ ಎಂದು ಖಂಡಿಸಿ ಹಾಗೂ ಮುಡಾದಲ್ಲಿ ನಡೆದಿದೆ ಎನ್ನಲಾದ ಸಾವಿರಾರು ಕೋಟಿ ರೂ. ಹಗರಣದ ತನಿಖೆಯನ್ನು ಸಿಬಿಐಗೆ ವಹಿಸಲು ರಾಜ್ಯಪಾಲರು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.



ಮೈಸೂರಿನ ಹಳೇ ಜಿಲ್ಲಾಧಿಕಾರಿ ಕಚೇರಿ ಎದುರು ಸೋಮವಾರ ಕರ್ನಾಟಕ ಸೇನಾ ಪಡೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಹಳೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಮುಡಾ ವಿಚಾರದಲ್ಲಿ ವಿಪಕ್ಷಗಳ ರಾಜಕೀಯ ಕೆಸರೆರಾಚಾಟ ನೋಡಿ ರಾಜ್ಯದ ಜನತೆಗೆ ಬೇಸರವಾಗಿದೆ. ವಾಲ್ಮೀಕಿ ನಿಗಮದ ಹಾಗೂ ಮುಡಾದಲ್ಲಿ ಹಿಂದೆಂದೂ ಕಂಡು–ಕೇಳರಿಯದಂತಹ ಅತೀ ದೊಡ್ಡ ಹಗರಣ ನಡೆದಿದೆ. 80 ಸಾವಿರ ಜನರು ಮುಡಾ ನಿವೇಶನಕ್ಕಾಗಿ ಕಾದು ಕುಳಿತಿದ್ದಾರೆ. ಇತ್ತ ಸರ್ಕಾರ ಹಾಗೂ ಮುಡಾ ಅಧಿಕಾರಿಗಳು ನಿವೇಶನಗಳನ್ನು ನುಂಗಿ ನೀರು ಕುಡಿದಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಡಾ ಆಯುಕ್ತ ದಿನೇಶ್ ಕುಮಾರ್ ಅವರನ್ನು ಅಮಾನತು ಮಾಡಿ, ವಿಚಾರಣೆಗೊಳಪಡಿಸದೆ, ರಾಜ ಮರ್ಯಾದೆಯಿಂದ ವರ್ಗಾವಣೆ ಮಾಡಿ ಕಳಿಸಿರುವುದು ನಿಜಕ್ಕೂ ಖಂಡನೀಯ. ಈ ಪ್ರಕರಣ ಬೆಳಕಿಗೆ ಬಂದು ಎರಡು ತಿಂಗಳು ಕಳೆದರೂ, ಇನ್ನೂ ಇದರ ಬಗ್ಗೆ ಕ್ರಮ ವಹಿಸದೆ, ಸಿಬಿಐಗೆ ವಹಿಸದೆ ಇರುವುದು ಅತ್ಯಂತ ದುಃಖಕರ ಸಂಗತಿ. ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ, ರಾಜ್ಯದಲ್ಲಿ ನೀರಾವರಿ ಯೋಜನೆಗಳು ಸಂಪೂರ್ಣ ವಿಫಲವಾಗಿವೆ. ರಾಜ್ಯದಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳು ಗ್ರಹಣ ಹಿಡಿದಿದೆ ಎಂದು ದೂರಿದರು.

ಅಹಿಂದ ಸಮುದಾಯಗಳಿಗೆ ಸವಲತ್ತುಗಳನ್ನು ಕೊಡುತ್ತೇವೆಂದು ಹೇಳಿಕೊಂಡು ಅಧಿಕಾರದ ಚುಕ್ಕಾಣಿ ಹಿಡಿದ ಕಾಂಗ್ರೆಸ್ ಸರ್ಕಾರ, ವಾಲ್ಮೀಕಿ ನಿಗಮ ಮತ್ತು ಮುಡಾ ಹಗರಣದಲ್ಲಿ ಸಿಲುಕಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿ. ಜೊತೆಗೆ ಸರ್ಕಾರ ಅಧಿಕಾರ ಉಳಿಸಿಕೊಳ್ಳಲು ಹಲವಾರು ಸಂಘಟನೆಗಳು ಹಾಗೂ ಅಹಿಂದ ಸಂಘಟನೆಗಳನ್ನು ಬಳಸಿಕೊಳ್ಳುತ್ತಿದ್ದು, ಇದು ವಿಪರ್ಯಾಸ ಎಂದು ಕಿಡಿಕಾರಿದರು.

ಸಂಘಟನೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಮುಖಂಡರಾದ ಸುರೇಶ್ ಗೋಲ್ಡ್, ಪ್ರಭುಶಂಕರ್, ಶಿವಲಿಂಗಯ್ಯ, ಕುಮಾರ್‌ಗೌಡ, ವರಕೂಡು ಕೃಷ್ಣೇಗೌಡ, ನಾಗರಾಜ್, ಮಂಜುಳಾ, ಪ್ರಜೀಶ್, ಸಿಂದುವಳ್ಳಿ ಶಿವಕುಮಾರ್, ಭಾಗ್ಯಮ್ಮ, ಮಹದೇವ್ ಪಡುವಾರಳ್ಳಿ, ಗೀತಾಗೌಡ, ಬೋಗಾದಿ ಸಿದ್ದೇಗೌಡ, ಡಾ.ರಾಮಕೃಷ್ಣೇಗೌಡ, ಬೇಬಿರತ್ನ ಜಾಧವ್, ಪ್ರದೀಪ, ರಾಧಾಕೃಷ್ಣ, ಹನುಮಂತಯ್ಯ, ಸುಬ್ಬೇಗೌಡ, ರಮೇಶ್, ರಘು ಅರಸ್, ಕೆ.ಸಿ. ಗುರುಮಲ್ಲಪ್ಪ, ಕುಮಾರ್, ಗಣೇಶ್ ಪ್ರಸಾದ್, ಚಂದ್ರಶೇಖರ್, ಪ್ರಭಾಕರ್, ರವಿನಾಯಕ್, ವಿಷ್ಣು ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೆಆರ್‌ಎಸ್‌ನಲ್ಲಿ ಕ್ರಸ್ಟ್ ಗೇಟ್ ಅಳವಡಿಕೆ: ಸದ್ಯ ಯಾವ ಆತಂಕವೂ ಇಲ್ಲ

- 58 ಕೋಟಿ ವೆಚ್ಚದಲ್ಲಿ ಯೋಜನೆ ಸಾಕಾರಗೊಂಡಿತ್ತು
- ಕೇಂದ್ರ ನೀರಾವರಿ ಆಯೋಗ ಮೇಲುಸ್ತುವಾರಿ ವಹಿಸಿತ್ತು
- 10 ತಜ್ಞರ ತಂಡ ಸಲಹೆ ಮೇರೆಗೆ ಯೋಜನೆ ಸಾಕಾರ
- ಅತ್ಯಾಧುನಿಕ ತಂತ್ರಜ್ಞಾನದ ಸುಭದ್ರ ವ್ಯವಸ್ಥೆ ಇದು
- ತುಂಗಭದ್ರಾದಲ್ಲಿ ಅಳವಡಿಸಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ



ಬಾಪುಲಿಂಗರಾಜ್ ಅರಸ್

ಮೈಸೂರು, ಆ.12– ತುಂಗಭದ್ರಾ ಅಣೆಕಟ್ಟೆಯ ಗೇಟ್ ತುಂಡಾಗಿ ಕೊಚ್ಚಿ ಹೋದ ಘಟನೆ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಹಾಗೂ ಮೈಸೂರಿನ ಕಬಿನಿ ಜಲಾಶಯಗಳ ಗೇಟ್‌ಗಳ ಸ್ಥಿತಿ ಬಗ್ಗೆ ಸಹಜ ಆತಂಕ ಜನರಲ್ಲಿದೆ. ಆದರೆ ಕೆಆರ್‌ಎಸ್ ಹಾಗೂ ಕಬಿನಿ ಕ್ರಸ್ಟ್‌ಗೇಟ್ ಬಗ್ಗೆ ಯಾರೂ ಆತಂಕಪಡುವ ಅಗತ್ಯವಿಲ್ಲ. ಏಕೆಂದರೆ ಎರಡು ಜಲಾಶಯದ ಗೇಟ್‌ಗಳು ಸುಭದ್ರ ಸ್ಥಿತಿಯಲ್ಲಿವೆ.

ಭಾರತದ ಅತೀ ದೊಡ್ಡ ಕಲ್ಲಿನಿಂದ ಕಟ್ಟಿದ ಅಣೆಕಟ್ಟೆಯಾಗಿರುವ ತುಂಗಭದ್ರಾ ಜಲಾಶಯವನ್ನು 1953ರಲ್ಲಿ ನಿರ್ಮಾಣ ಮಾಡಿದ್ದು, 105.38 ಟಿಎಂಸಿ ಗರಿಷ್ಠ ನೀರಿನ ಸಂಗ್ರಹ ಸಾಮರ್ಥ್ಯ ಹೊಂದಿದೆ. ಒಟ್ಟು 33 ಕ್ರಸ್ಟ್ ಗೇಟ್‌ಗಳನ್ನು ಹೊಂದಿರುವ ಜಲಾಶಯದ 19ನೇ ಗೇಟ್ ಶನಿವಾರ ರಾತ್ರಿ ಚೈನ್ ಕಟ್ಟಾಗಿ ಕೊಚ್ಚಿ ಹೋಗಿದೆ. ಮುರಿದು ಬಿದ್ದಿರುವ ಗೇಟ್‌ನಿಂದ ಅಧಿಕ ನೀರು ಪೋಲಾದರೆ ಇತ್ತ ಅಣೆಕಟ್ಟೆಗೆ ಅಪಾಯ ಸಂಭವಿಸುವ ಸಾಧ್ಯತೆ ಹಿನ್ನೆಲೆಯಲ್ಲಿ ಸುರಕ್ಷತೆ ದೃಷ್ಟಿಯಿಂದ ಎಲ್ಲಾ ಕ್ರಸ್ಟ್‌ಗೇಟ್ ತೆರೆದು ನೀರು ಬಿಡಲಾಗುತ್ತಿದೆ. ಇದರಿಂದ ಈಗಾಗಲೇ ಹತ್ತಾರು ಟಿಎಂಸಿ ನೀರು ಪೋಲಾಗುತ್ತಿದೆ.

ತುಂಗಭದ್ರಾ ಜಲಾಶಯದ ಗೇಟ್ ತುಂಡಾದ ಹಿನ್ನೆಲೆಯಲ್ಲಿ ಮಂಡ್ಯದ ಶ್ರೀರಂಗಪಟ್ಟಣ ತಾಲೂಕಿನಲ್ಲಿರುವ ಕೃಷ್ಣರಾಜ ಸಾಗರ ಅಣೆಕಟ್ಟು ಹಾಗೂ ಮೈಸೂರಿನ ಹೆಚ್.ಡಿ.ಕೋಟೆ ತಾಲೂಕಿನ ಕಬಿನಿ ಜಲಾಶಯದ ಗೇಟ್‌ಗಳ ಗತಿ ಏನಪ್ಪಾ ಎಂಬ ಸಹಜ ಆತಂಕ ಹಳೇ ಮೈಸೂರು ಭಾಗದ ಜನರಲ್ಲಿದೆ. ಆದರೆ ಈ ಎರಡು ಜಲಾಶಯಗಳ ಗೇಟ್‌ಗಳ ಅಥವಾ ಅಣೆಕಟ್ಟೆಯ ಸುರಕ್ಷತೆ ಬಗ್ಗೆ ಯಾರೂ ಆತಂಕಪಡುವ ಪ್ರಮೇಯವಿಲ್ಲ. ಏಕೆಂದರೆ ಎರಡು ಜಲಾಶಯದ ಗೇಟ್ ಹಾಗೂ ಅಣೆಕಟ್ಟು ಸುಭದ್ರವಾಗಿದೆ.

ಕೃಷ್ಣರಾಜ ಅಣೆಕಟ್ಟೆಯನ್ನು 1932ರಲ್ಲಿ ನಿರ್ಮಾಣ ಮಾಡಿದ್ದು, 124.80 ಅಡಿ ಗರಿಷ್ಟ ನೀರಿನ ಮಟ್ಟ ಹೊಂದಿದೆ. ಜಲಾಶಯದ ಹಿನ್ನೀರು 25 ಮೈಲಿವರೆಗೂ ನಿಲ್ಲಲಿದೆ. 49 ಟಿಎಂಸಿ ನೀರು ಶೇಖರಣೆಯ ಸಾಮರ್ಥ್ಯ ಹೊಂದಿರುವ ಕೆಆರ್‌ಎಸ್‌ನಲ್ಲಿ ಸ್ವಯಂ ಚಾಲಿತ ಕ್ರಸ್ಟ್ ಗೇಟ್‌ಗಳಿವೆ. ಇಂಗ್ಲೆಡ್‌ನ ರಾನ್ ಸವ್ಸ್ ಹಾಗೂ ಭಧ್ರಾವತಿ ಕಬ್ಬಿಣದ ಕಾರ್ಖಾನೆಯಿಂದ ಈ ಗೇಟ್‌ಗಳನ್ನು ತರಿಸಿ ಅಳವಡಿಸಲಾಗಿತ್ತು.

ರಾಜರ ಕಾಲದಲ್ಲಿ ಅಳವಡಿಸಿದ್ದ ಕೆಆರ್‌ಎಸ್ ಕ್ರಸ್ಟ್‌ಗೇಟ್‌ಗಳನ್ನು ಉತ್ತಮವಾಗಿ ನಿರ್ವಹಣೆ ಮಾಡಲಾಗುತ್ತಿತ್ತು. ಆದರೂ ರೋಲರ್ಸ್ ಹಾಗಾಗಿ ಕಟ್ ಆಗುತ್ತಿತ್ತು. ಇದರಿಂದ ಅತೀ ಸೂಕ್ಷ್ಮವಾಗಿ ಗೇಟ್ ತೆರೆಯುವ–ಮುಚ್ಚುವ ಪರಿಸ್ಥಿತಿ ಇತ್ತು. ಈ ಹಿನ್ನೆಲೆಯಲ್ಲಿ 88 ವರ್ಷ ಹಳೆಯದಾಗಿರುವ ಗೇಟ್ ತೆರವು ಮಾಡಿ ಹೊಸ ಕ್ರಸ್ಟ್‌ಗೇಟ್ ಅಳವಡಿಸಲು ಸರ್ಕಾರ ತೀರ್ಮಾನಿಸಿತು.

ವಿಶ್ವ ಬ್ಯಾಂಕ್ ನೆರವಿನಲ್ಲಿ ಹೊಸ ಗೇಟ್ ಅಳವಡಿಸಲು ಕೇಂದ್ರ ನೀರಾವರಿ ಆಯೋಗ 10 ತಜ್ಞರ ತಂಡಗಳನ್ನು ರಚನೆ ಮಾಡಿತ್ತು. 2015 ರಿಂದ 2019 ರವರೆಗೆ ತಜ್ಞರ ತಂಡ ಸ್ಥಳ ಪರಿಶೀಲನೆ ಮಾಡಿ ಹೊಸ ಕ್ರಸ್ಟ್‌ಗೇಟ್ ಅಳವಡಿಕೆ ಸಂಬಂಧ ಡಿಸೈನ್ ಹಾಗೂ ಡ್ರಾಯಿಂಗ್ ಮಾಡಿತು. ಈ ಕಾರ್ಯಕ್ಕೆ ನಾಲ್ಕು ವರ್ಷಗಳ ಸಮಯಾವಕಾಶ ಹಿಡಿಯಿತು.

ತರುವಾಯ ಹೊಸ ಕ್ರಸ್ಟ್ ಗೇಟ್ ಅಳವಡಿಸಲು 58 ಕೋಟಿ ರೂಪಾಯಿಗಳ ಅಂತಿಮ ಯೋಜನೆ ರೂಪಿಸಿ ಟೆಂಡರ್ ಕರೆಯಲಾಯಿತು. ಅರ್ಹ, ಗುಜರಾತ್‌ನ ಹಾರ್ಡ್‌ವೇರ್ ಟೂಲ್ಸ್ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್‌ಗೆ ಅಂತಿಮವಾಗಿ ಟೆಂಡರ್ ನೀಡಲಾಯಿತು.

2020 ರಿಂದ ಹೊಸ ಕ್ರಸ್ಟ್ ಗೇಟ್ ಅಳವಡಿಸುವ ಕಾರ್ಯ ಆರಂಭವಾಯಿತು. ಆದರೆ ಕೋವಿಡ್ ಎದುರಾದ ಕಾರಣ ಕಾರ್ಯ ವಿಳಂಬವಾಯಿತು. 2021 ರಿಂದ ಗೇಟ್ ಅಳವಡಿಸುವ ಕಾರ್ಯ ಆರಂಭಿಸಿ, ಮುಗಿಸಲಾಯಿತು. ಕೆಆರ್‌ಎಸ್‌ನಲ್ಲಿ ಹೊಸ ಕ್ರಸ್ಟ್‌ಗೇಟ್‌ಗಳ ಕಾರ್ಯ ನಿರ್ವಹಣೆ ತೃಪ್ತಿಕರವಾಗಿದೆ.

ಈ ಕಾರಣದಿಂದ ತುಂಗಭದ್ರಾ ಜಲಾಶಯದ ಕ್ರಸ್ಟ್‌ಗೇಟ್‌ಗಳಂತೆ ಕೆಆರ್‌ಎಸ್ ಕ್ರಸ್ಟ್‌ಗೇಟ್‌ಗಳ ಬಗ್ಗೆ ಯಾವುದೇ ಆತಂಕವಿಲ್ಲ.

ಒಟ್ಟು 132 ಟಿಎಂಸಿ ಗರಿಷ್ಟ ನೀರಿನ ಶೇಖರಣಾ ಸಾಮರ್ಥ್ಯದ ತುಂಗಭದ್ರಾ ಜಲಾಶಯದಲ್ಲಿ 33 ಕ್ರಸ್ಟ್‌ಗೇಟ್‌ಗಳಿವೆ. ಕೆಆರ್‌ಎಸ್ ನಂತೆ ತುಂಗಭದ್ರಾ ಜಲಾಶಯದ 60 ವರ್ಷದ ಹಳೆಯ ಕ್ರಸ್ಟ್‌ಗೇಟ್‌ಗಳನ್ನು ತೆರವು ಮಾಡಿ ಹೊಸ ಗೇಟ್ ಅಳವಡಿಸಿದ್ದರೆ ಅಥವಾ ಸೂಕ್ತ ನಿರ್ವಹಣೆ ಮಾಡಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಅಧಿಕಾರ ನಡೆಸಿದ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಸರ್ಕಾರ ವೈಫಲ್ಯತೆ ಹಾಗೂ ಅಧಿಕಾರಿಗಳ ನಿರ್ಲಕ್ಷ್ಯತನ ಇಂದಿನ ಅವಘಡಕ್ಕೆ ಕಾರಣವಾಗಿದೆ.

ಕಬಿನಿ ಜಲಾಶಯದ ಕ್ರಸ್ಟ್ ಗೇಟ್ ಅಳವಡಿಕೆಗೆ 100 ಕೋಟಿ ಪ್ರಸ್ತಾವನೆ



ಮೈಸೂರಿನ ಹೆಚ್.ಡಿ.ಕೋಟೆ ತಾಲೂಕಿನ ಬೀಚನಹಳ್ಳಿಯಲ್ಲಿರುವ ಕಬಿನಿ ಜಲಾಶಯ 2,284 ಅಡಿ ಗರಿಷ್ಠ ಸಾಮರ್ಥ್ಯ ಹೊಂದಿದೆ. 19.25 ಟಿಎಂಸಿ ಗರಿಷ್ಟ ನೀರಿನ ಶೇಖರಣೆಯ ಸಾಮರ್ಥ್ಯವಿದ್ದು, ಜಲಾಶಯದಲ್ಲಿ 4 ಕ್ರಸ್ಟ್ ಗೇಟ್‌ಗಳಿದ್ದು, ಉತ್ತಮವಾಗಿ ನಿರ್ವಹಣೆ ಮಾಡಲಾಗುತ್ತಿದೆ. ಕ್ರಸ್ಟ್‌ಗೇಟ್‌ಗಳಿಗೆ ಹಾಗಾಗಿ ಗ್ರೀಸಿಂಗ್, ಪೈಟಿಂಗ್ ಮಾಡಲಾಗುತ್ತಿದೆ. ಇದರಿಂದ ಗೇಟ್‌ನಲ್ಲಿ ಸೋರಿಕೆ ಇಲ್ಲ ಎಂದು ಜಲಾಶಯದ ಮುಖ್ಯ ಅಧೀಕ್ಷಕ ಚಂದ್ರಶೇಖರ್ ತಿಳಿಸಿದ್ದಾರೆ.

ಕ್ರಸ್ಟ್‌ಗೇಟ್ ಹಳೆಯದಾಗಿರುವ ಕಾರಣ ಹೊಸ ಕ್ರಸ್ಟ್‌ಗೇಟ್ ಅಳವಡಿಸುವುದು ಸೇರಿದಂತೆ ಇಡೀ ಜಲಾಶಯವನ್ನು ನವೀಕರಿಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಹೊಸ ಕ್ರಸ್ಟ್ ಗೇಟ್ ಅಳವಡಿಕೆ ಹಾಗೂ ನವೀಕರಣಕ್ಕೆ 100 ಕೋಟಿ ರೂ. ಪ್ರಸ್ತಾವನೆ ರೂಪಿಸಲಾಗಿದೆ. ಈ ಸಂಬಂಧ ಸರ್ಕಾರಕ್ಕೂ ಸಲ್ಲಿಸಲಾಗಿದೆ. ಇನ್ನು ಆರು ತಿಂಗಳಲ್ಲಿ ಸರ್ಕಾರದಿಂದ ಅನುಮೋದನೆ ದೊರೆತು ಕಾಮಗಾರಿ ಆರಂಭವಾಗುವ ಸಾಧ್ಯತೆ ಇದೆ ಎಂದು ಚಂದ್ರಶೇಖರ್ ವಿಶ್ವಾಸ ವ್ಯಕ್ತಪಡಿಸಿದರು. ಒಟ್ಟಾರೆ ಕಾವೇರಿ ಜಲಾಶಯನ ಪ್ರದೇಶದ ಜನರು ಎರಡು ಕಣ್ಣುಗಳಂತಿರುವ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯಗಳ ಕ್ರಸ್ಟ್‌ಗೇಟ್‌ಗಳು ಉತ್ತಮ ಸ್ಥಿತಿಯಲ್ಲಿವೆ ಎಂಬುದು ಸಮಾಧಾನದ ಸಂಗತಿ.

ಆಟೋಮೇಷನ್ ಸೆಂಟರ್‌ನಲ್ಲಿ ಕಂಟ್ರೋಲ್

ಕೆಆರ್‌ಎಸ್‌ನಲ್ಲಿ ಕಂಪ್ಯೂಟರ್ ನಿಯಂತ್ರಿತ ಹೊಸ ಕ್ರಸ್ಟ್‌ಗೇಟ್‌ಗಳನ್ನು ಅಳವಡಿಸಲಾಗಿದೆ. ಈ ಮೊದಲು ಪ್ರತಿಯೊಂದು ಗೇಟ್ ಬಳಿ ಹೋಗಿ ಚೈನ್ ಮೂಲಕ ಕ್ರಸ್ಟ್‌ಗೇಟ್‌ಗಳನ್ನು ಮೇಲೆತ್ತುವುದು, ಇಳಿಸಬೇಕಿತ್ತು. ಆದರೆ ಈಗ ಅಳವಡಿಸಿರುವುದು ಕಂಪ್ಯೂಟರ್ ನಿಯಂತ್ರಿತ ಕ್ರಸ್ಟ್‌ಗೇಟ್‌ಗಳಾಗಿವೆ. ಆಟೋಮೇಷನ್ ಸೆಂಟರ್‌ನಲ್ಲಿ ಕುಳಿತು ಕ್ರಸ್ಟ್‌ಗೇಟ್‌ಗಳನ್ನು ಮೇಲೆತ್ತುವ ಹಾಗೂ ಇಳಿಸುವ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಲಾಗಿದೆ. ಆದರೆ ಇನ್ನು ಆಟೋಮೇಷನ್ ಸೆಂಟರ್ ಕಾರ್ಯಾರಂಭಗೊಳ್ಳದ ಕಾರಣ ಮ್ಯಾನ್ಯುಯಲ್ ಆಗಿಯೇ ನಿರ್ವಹಣೆ ಮಾಡಲಾಗುತ್ತಿದೆ. ಕೆಆರ್‌ಎಸ್‌ನ ಸೌತ್ ಗೇಟ್‌ನಲ್ಲಿ ಆಟೋ ಮೇಷನ್ ಸೆಂಟರ್ ಕಟ್ಟಡ ನಿರ್ಮಾಣ ಕಾರ್ಯ ನಡೆಯುತ್ತಿದ್ದು, ಅದು ಪೂರ್ಣಗೊಂಡ 3 ತಿಂಗಳ ಒಳಗೆ ಆಟೋಮೇಷನ್ ಸೆಂಟರ್ ಕಾರ್ಯರಂಭವಾಗಲಿದೆ. ಆಟೋ ಮೇಷನ್ ಸೆಂಟರ್ ಇನ್ನು ಕಾರ್ಯಾರಂಭಗೊಳ್ಳದ ಕಾರಣ ಈಗ ಆಯಾ ಕ್ರಸ್ಟ್ ಗೇಟ್ ಬಳಿ ಹೋಗಿ ಮೋಟಾರ್ ಬಟನ್ ಒತ್ತುವ ಮೂಲಕ ಗೇಟ್ ಮೇಲೆತ್ತುವ ಹಾಗೂ ಇಳಿಸುವ ಕಾರ್ಯ ಮಾಡಲಾಗುತ್ತಿದೆ. ಒಟ್ಟಾರೆ ಕೆಆರ್‌ಎಸ್ ಕ್ರಸ್ಟ್‌ಗೇಟ್‌ಗಳಿಗೆ ಆಧುನಿಕತೆಯ ಸ್ಪರ್ಶ ನೀಡಲಾಗಿದೆ.

ಏಕಾಏಕಿ ಆಸ್ಪತ್ರೆಗೆ ನುಗ್ಗಿದರು; ವೈದ್ಯರ ಕಾರ್ಯವೈಖರಿ ಪ್ರಶ್ನಿಸಿದರು; ರೋಗಿಗಳ ವಾರ್ಡ್‌ಗೂ ಇಣುಕಿ ಪರಿಶೀಲಿಸಿದರು

ಎನ್‌ಜಿಓವೊಂದರ ದಿಢೀರ್ ದಾಳಿಯಿಂದ ತಬ್ಬಿಬ್ಬಾದ ವೈದ್ಯರು; ಶ್ರೀರಂಗಪಟ್ಟಣ ಸಾರ್ವಜನಿಕ ಆಸ್ಪತ್ರೆಯಲ್ಲಿ ವಿಚಿತ್ರ ಬೆಳವಣಿಗೆ

ಶ್ರೀರಂಗಪಟ್ಟಣ,ಆ.12– ಮಾನವ ಹಕ್ಕುಗಳು ಹಾಗೂ ಭ್ರಷ್ಟಾಚಾರ ವಿರೋಧಿ ಹೆಸರಿನಲ್ಲಿ ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಏಕಾಏಕಿ ಸರ್ಕಾರಿ ಕಚೇರಿಗಳಿಗೆ ನುಗ್ಗುವ ಪ್ರವೃತ್ತಿ ಇತ್ತೀಚೆಗೆ ಹೆಚ್ಚಾಗುತ್ತಿದೆ. ಇಂದು(ಸೋಮವಾರ) ಶ್ರೀರಂಗಪಟ್ಟಣ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಮಾನವ ಹಕ್ಕುಗಳು ಹಾಗೂ ಭ್ರಷ್ಟಾಚಾರ ವಿರೋಧಿ ಸಂಸ್ಥೆ ರಾಜ್ಯ ಘಟಕದ ಪದಾಧಿಕಾರಿಗಳೆಂದು ಭೇಟಿ ನೀಡಿದ ಒಂದು ಗುಂಪು ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ತೆರಳಿ ಪರಿಶೀಲನೆ ನಡೆಸಿದೆ.

ಮಾನವ ಹಕ್ಕುಗಳು ಹಾಗೂ ಭ್ರಷ್ಟಾಚಾರ ವಿರೋಧಿ ಸಂಸ್ಥೆ ಎಂಬ ಹೆಸರಿನಲ್ಲಿ ಟಾಗ್ ಮತ್ತು ಐಡಿ ಕಾರ್ಡ್‌ಗಳನ್ನು ಹೊಂದಿದ್ದ ಈ ತಂಡಕ್ಕೆ ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಮಾರುತಿಯವರು, ಎಲ್ಲಾ ಭಾಗಗಳಿಗೂ ಭೇಟಿ ನೀಡಿ ಪರಿಶೀಲನೆ ನಡೆಸಲು ಹಾಗೂ ರೋಗಿಗಳ ಕುಂದು ಕೊರತೆ ವಿಚಾರಿಸಲು ಅವಕಾಶ ಕಲ್ಪಿಸಿದ್ದಾರೆ. ಇದು ಅಚ್ಚರಿಗೆ ಕಾರಣವಾಗಿದೆ.

ಈ ತಂಡ ಡಾ.ಮಾರುತಿ ಅವರನ್ನು ಭೇಟಿ ಮಾಡಿ, ಆಸ್ಪತ್ರೆಯಲ್ಲಿ ರೋಗಿಗಳೊಂದಿಗೆ ವೈದ್ಯರು, ನರ್ಸ್ ಸೇರಿದಂತೆ ಸಹಾಯಕರ ವರ್ತನೆ, ರೋಗಿಗಳಿಗೆ ನೀಡುವ ಚಿಕಿತ್ಸೆ, ಮೂಲ ಸೌಕರ್ಯ ಕುರಿತಾಗಿ ಚರ್ಚಿಸಿದೆ.

ರೋಗಿಗಳಿಗೆ ಸರ್ಜರಿ ಸೇರಿದಂತೆ ದೊಡ್ಡ ಚಿಕಿತ್ಸೆ ನೀಡಬೇಕಾದ ಸಮಯದಲ್ಲಿ ವೈದ್ಯರು ಸೇರಿದಂತೆ ಸಿಬ್ಬಂದಿ ಹಣ ಕೇಳುತ್ತಿರುವ ಬಗ್ಗೆ ಆರೋಪಗಳು ಕೇಳಿ ಬರುತ್ತಿವೆ. ಚಿಕಿತ್ಸೆ ಪಡೆಯಲು ಬಂದ ರೋಗಿಗಳನ್ನು ಕೆಲ ವೈದ್ಯರು ದೂರದಿಂದಲೇ ಮಾತನಾಡಿಸಿ, ಸರಿಯಾಗಿ ಪರೀಕ್ಷೆಯನ್ನೂ ನಡೆಸದೆ, ಮಾತ್ರೆ ತೆಗೆದುಕೊಳ್ಳಿ ಎಂದು ಚೀಟಿ ಬರೆದು ಕಳುಹಿಸುತ್ತಿದ್ದಾರೆ ಎಂದು ಡಾ.ಮಾರುತಿ ಅವರಲ್ಲಿ ದೂರಿದ್ದಾರೆ.

ಶಸ್ತ್ರಚಿಕಿತ್ಸೆ ಮಾಡಲು ತೆರಳಿದ್ದ ವೈದ್ಯರ ಹೆಸರನ್ನು ಅವರ ಕೊಠಡಿಯ ಬಾಗಿಲ ಮೇಲೆ ಅಳವಡಿಸಬೇಕು ಎಂದು ತಾಕೀತು ಮಾಡಿದ ಗುಂಪು, ರೋಗಿಗಳು ಹಾಗೂ ವೈದ್ಯರ ಕರ್ತವ್ಯಗಳ ಬಗ್ಗೆ ಸೂಚನಾ ಫಲಕಗಳನ್ನು ಅಳವಡಿಸುವಂತೆ ಸೂಚನೆ ನೀಡಿದೆ.



ಶ್ರೀರಂಗಪಟ್ಟಣ ತಾಲೂಕು ಸಾರ್ವಜನಿಕ ಆಸ್ಪತ್ರೆಯ ರೋಗಿಗಳ ಕುಂದು ಕೊರತೆ ವಿಚಾರಿಸಿದ ಎನ್‌ಜಿಓವೊಂದರ ಸದಸ್ಯರು

> **ಬಂದಿದ್ದವರೆಲ್ಲ ಟಾಗ್ ಸಮೇತ ಐಡಿ ಕಾರ್ಡ್ ಹೊಂದಿದ್ದರು. ಅವರು ಬರುವುದಕ್ಕೂ ಮುನ್ನ ಅಧ್ಯಕ್ಷರು ಎಂದು ಹೇಳಿಕೊಂಡು ಒಬ್ಬರು ಕರೆ ಮಾಡಿ ನನಗೆ ಮಾಹಿತಿ ನೀಡಿದ್ದರು. ಅವರು ಹಾಕಿದ್ದ ಟಾಗ್ ಮತ್ತು ಐಡಿ ಕಾರ್ಡ್ ನೋಡಿದಾಗ ಮಾನವ ಹಕ್ಕುಗಳ ಆಯೋಗದ ಸದಸ್ಯರೇ ಬಂದಿದ್ದಾರೆ ಎಂದು ನನಗೆ ಅನ್ನಿಸಿತು. ಹೀಗಾಗಿ ಅವರ ಪರಿಶೀಲನೆಗೆ ಅನುವು ಮಾಡಿಕೊಡಲಾಯಿತು. ಆಸ್ಪತ್ರೆಯಲ್ಲಿ ರೋಗಿಗಳಿಗೆ ನೀಡುವ ಚಿಕಿತ್ಸೆ, ಇಲ್ಲಿನ ಮೂಲ ಸೌಕರ್ಯಗಳ ಬಗ್ಗೆ ವಿವರಿಸಲಾಯಿತು. ಅವರೊಂದಿಗೆ ಸ್ಥಳೀಯರು ಕೂಡ ಇದ್ದರು. ನಂತರವಷ್ಟೇ ಆಸ್ಪತ್ರೆಗೆ ಬಂದಿದ್ದವರು ಮಾನವ ಹಕ್ಕುಗಳ ಆಯೋಗದವರು ಅಲ್ಲ, ಎನ್‌ಜಿಓದವರು ಎಂದು ತಿಳಿಯಿತು.**
>
> – **ಡಾ.ಮಾರುತಿ,** *ಆಡಳಿತ ವೈದ್ಯಾಧಿಕಾರಿ, ಶ್ರೀರಂಗಪಟ್ಟಣ ತಾಲೂಕು ಸಾರ್ವಜನಿಕ ಆಸ್ಪತ್ರೆ*

ಸಂಜೆ ಪಾಳಿಯಲ್ಲಿ ಕಾರ್ಯ ನಿರ್ವಹಿಸುವ ವೈದ್ಯರು ಕಡಿಮೆ ಇದ್ದು, ಅಪಘಾತ ಹಾಗೂ ಅನಾಹುತ ನಡೆದ ವೇಳೆ ಶೀಘ್ರ ಸ್ಪಂದಿಸಲು ಹೆಚ್ಚು ವೈದ್ಯ ಸಿಬ್ಬಂದಿಗಳನ್ನು ನೇಮಿಸಬೇಕು. ಆಸ್ಪತ್ರೆಯ ವೈದ್ಯರು, ಸಿಬ್ಬಂದಿ ವರ್ಗದವರು ತಾಲೂಕಿನ ಪ್ರತಿ ಹಳ್ಳಿಗೆ ಒಂದು ದಿನ ಭೇಟಿ ನೀಡಿ, ಡೆಂಗ್ಯೂ ಬರಲು ಕಾರಣ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು ಎಂದು ಆಸ್ಪತ್ರೆಯ ಆಡಳಿತಾಧಿಕಾರಿಗೆ ಖಡಕ್ ಸೂಚನೆ ನೀಡಿದೆ.

ನಂತರ ಆಸ್ಪತ್ರೆಯಲ್ಲಿ ದಾಖಲಾಗಿರುವ ಡೆಂಗ್ಯೂ ರೋಗಿಗಳಿಗೆ ಪ್ರತ್ಯೇಕ ಕೊಠಡಿ, ಮಹಿಳಾ ವಾರ್ಡ್, ಮಕ್ಕಳ ವಾರ್ಡ್, ಡಯಾಲಿಸಿಸ್ ರೋಗಿಗಳ ವಾರ್ಡ್‌ಗಳಿಗೂ ಭೇಟಿ ನೀಡಿದ ಈ ಗುಂಪು ಆಸ್ಪತ್ರೆಯ ಸೌಲಭ್ಯಗಳ ಕುರಿತು ರೋಗಿಗಳಿಂದ ಮಾಹಿತಿ ಪಡೆದಿದೆ.

ಮಾನವ ಹಕ್ಕುಗಳು ಹಾಗೂ ಭ್ರಷ್ಟಾಚಾರ ವಿರೋಧಿ ಸಂಸ್ಥೆಯ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎಂಬಾತ ಈ ಗುಂಪಿನ ನೇತೃತ್ವ ವಹಿಸಿದ್ದರು. ಸಂಸ್ಥೆಯ ಆರೋಗ್ಯ ಪ್ರಧಾನ ಕಾರ್ಯದರ್ಶಿ ಡಾ. ಆರ್.ಕೆ.ನಾಗರಾಜು, ಕೃಷಿ ಪ್ರಧಾನ ಕಾರ್ಯದರ್ಶಿ ವಿಜೇಂದ್ರ (ಪುಟ್ಟ), ರಾಜ್ಯ ಮಹಿಳಾ ಉಪಾಧ್ಯಕ್ಷೆ ರಾಣಿ ಪ್ರಭ, ರಾಜ್ಯ ಮಹಿಳಾ ಪ್ರಧಾನ ಕಾರ್ಯದರ್ಶಿ ಸರಸ್ವತಿ, ಪ್ರಧಾನ ಕಾರ್ಯದರ್ಶಿಯಾದ ಚಂದ್ರಶೇಖರ್, ರಾಜ್ಯ ಮಾಧ್ಯಮ ವಿಭಾಗದ ಪ್ರಧಾನ ಕಾರ್ಯದರ್ಶಿ ಎಲ್.ವಿ ನವೀನ್ ಕುಮಾರ್, ಜಿಲ್ಲಾ ಮಾಧ್ಯಮ ವಿಭಾಗದ ಪ್ರಧಾನ ಕಾರ್ಯದರ್ಶಿ ಗಂಜಾಂ ಮಂಜು, ರಾಜ್ಯ ಘಟಕದ ಸದಸ್ಯರಾದ ಶಿವಕುಮಾರ್, ಗೋಪಾಲಗೌಡ ಮುಂತಾದವರಿದ್ದ ಗುಂಪಿನ ಸದಸ್ಯರು ಪ್ರತಿಯೊಬ್ಬರು ಐಡಿ ಕಾರ್ಡ್ ಇರುವ ಟಾಗ್ ಧರಿಸಿದ್ದರು.

ಆರೋಗ್ಯ ಇಲಾಖೆಯಿಂದ ಅಧಿಕೃತವಾಗಿ ಯಾವುದೇ ಸೂಚನೆ ಬಾರದಿದ್ದರೂ ಎನ್‌ಜಿಓ ಹೆಸರಿನಲ್ಲಿ ಗುಂಪೊಂದು ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಲು ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಹೇಗೆ ಅನುಮತಿ ನೀಡಿದರು. ಈ ಸಂದರ್ಭದಲ್ಲಿ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿಯ ಕರ್ತವ್ಯಕ್ಕೆ ಅಡ್ಡಿಯಾಗುವುದಿಲ್ಲವೇ? ರೋಗಿಗಳಿಗೆ ತೊಂದರೆಯಾಗುವುದಿಲ್ಲವೇ? ಯಾರ್‍ಯಾರೋ ಈ ರೀತಿ ಆಸ್ಪತ್ರೆಗೆ ನುಗ್ಗಬಹುದೇ. ಒಂದು ವೇಳೆ ಏನಾದರೂ ಅನಾಹುತ ಸಂಭವಿಸಿದರೆ ಹೊಣೆ ಯಾರು? ಎಂಬ ಪ್ರಶ್ನೆ ವ್ಯಾಪಕವಾಗಿ ಕೇಳಿ ಬರುತ್ತಿದೆ.

> ಯಾವುದೇ ಎನ್‌ಜಿಓ ಆಗಲಿ, ಸಂಘ ಸಂಸ್ಥೆಗಳಾಗಲೀ ಆಸ್ಪತ್ರೆಗೆ ತೆರಳಿ ಪರಿಶೀಲನೆ ಮಾಡುವುದು ಕಾನೂನುಬಾಹಿರವಾಗುತ್ತದೆ. ಆಸ್ಪತ್ರೆಯಲ್ಲಿ ಯಾವುದಾದರೂ ಕುಂದು ಕೊರತೆಗಳಿದ್ದರೆ ಅಥವಾ ಅಲ್ಲಿನ ವೈದ್ಯರ ಬಗ್ಗೆ ದೂರುಗಳಿದ್ದರೆ ಅದನ್ನು ನಮಗೆ ತಿಳಿಸಬೇಕು. ಅದನ್ನು ಬಿಟ್ಟು ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸುವುದು, ರೋಗಿಗಳಿಂದ ಕುಂದು ಕೊರತೆ ವಿಚಾರಿಸುವುದನ್ನು ಅನುಮತಿಸಲು ಸಾಧ್ಯವಿಲ್ಲ. ಹೀಗೆ ಎನ್‌ಜಿಓಗಳು ಆಸ್ಪತ್ರೆಗಳ ಪರಿಶೀಲನೆಗೆ ಇಳಿದು ಬಿಟ್ಟರೆ ಅಲ್ಲಿನ ವಾತಾವರಣಕ್ಕೆ ಹಾಗೂ ರೋಗಿಗಳಿಗೆ ಅಡಚಣೆ ಉಂಟಾಗುತ್ತದೆ. ಶ್ರೀರಂಗಪಟ್ಟಣ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿದ ತಂಡದ ಬಗ್ಗೆ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳುತ್ತೇವೆ.
>
> –**ಡಾ.ಮೋಹನ್,** ಜಿಲ್ಲಾ ಆರೋಗ್ಯಾಧಿಕಾರಿ, ಮಂಡ್ಯ ಜಿಲ್ಲೆ.

ಪರಿಶಿಷ್ಟರ ಒಳ ಮೀಸಲಾತಿ ಜಾರಿಗಾಗಿ ಸುಗ್ರೀವಾಜ್ಞೆಗೆ ಆಗ್ರಹಿಸಿ ಪ್ರತಿಭಟನೆ



ಪರಿಶಿಷ್ಟರ ಒಳ ಮೀಸಲಾತಿಗೆ ಸುಗ್ರೀವಾಜ್ಞೆ ಹೊರಡಿಸಬೇಕೆಂದು ಆಗ್ರಹಿಸಿ ಕದಸಂಸ ಕಾರ್ಯಕರ್ತರು ಮಂಡ್ಯದಲ್ಲಿ ಪ್ರತಿಭಟನೆ ನಡೆಸಿದರು.

ಮಂಡ್ಯ,ಆ.12– ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಪರಿಶಿಷ್ಟರಿಗೆ ಒಳ ಮೀಸಲಾತಿ ನೀತಿ ಜಾರಿಗಾಗಿ ರಾಜ್ಯ ಸರ್ಕಾರ ಸುಗ್ರೀವಾಜ್ಞೆ ಹೊರಡಿಸುವಂತೆ ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಮಂಡ್ಯದಲ್ಲಿ ಪ್ರತಿಭಟನೆ ನಡೆಸಿತು.

ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಿಂದ ಸಮಿತಿಯ ಕಾರ್ಯಕರ್ತರು ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಪತ್ರ ರವಾನಿಸಿದರು.

ಪರಿಶಿಷ್ಟರಿಗೆ ಒಳ ಮೀಸಲಾತಿ ಜಾರಿಗಾಗಿ ಸುದೀರ್ಘ ಹೋರಾಟ ನಡೆದರೂ ರಾಜ್ಯವನ್ನಾಳಿದ ಕಾಂಗ್ರೆಸ್, ಜೆಡಿಎಸ್ ಹಾಗೂ ಬಿಜೆಪಿ ಸರ್ಕಾರಗಳು ಒಳ ಮೀಸಲು ಜಾರಿಗೆ ಇಚ್ಛಾಶಕ್ತಿ ತೋರಲಿಲ್ಲ. ಇದೀಗ ಸರ್ವೋಚ್ಚ ನ್ಯಾಯಾಲಯ ಒಳ ಮೀಸಲಾತಿ ಜಾರಿಗೆ ಸಮ್ಮತಿಸಿರುವುದು ಸ್ವಾಗತಾರ್ಹ, ರಾಜ್ಯ ಸರ್ಕಾರ ಅನವಶ್ಯಕವಾಗಿ ಉಪಸಮಿತಿ ರಚನೆ ನಾಟಕವನ್ನಾಡದೆ ನ್ಯಾ. ಎ.ಜೆ.ಸದಾಶಿವ ಆಯೋಗದ ವರದಿ ಹಾಗೂ ರಾಜ್ಯ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆಯ ಎಚ್.ಕಾಂತರಾಜು ವರದಿ ಆಧರಿಸಿ ಪರಿಶಿಷ್ಟರ ಮೀಸಲು ನೀತಿ ಜಾರಿಗೆ ಸುಗ್ರೀವಾಜ್ಞೆ ಹೊರಡಿಸಬೇಕು ಎಂದು ಒತ್ತಾಯಿಸಿದರು.

ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಪರಿಶಿಷ್ಟರ ಮೀಸಲಾತಿ ನೀತಿಯಲ್ಲಿ ಕ್ರಿಮಿಲೇಯರ್ ಪದ್ಧತಿ ಅಳವಡಿಸಲು ಸಂವಿಧಾನ ಪೀಠದ ಬಹುತೇಕ ನ್ಯಾಯಾಧೀಶರು ಸೂಚಿಸಿದ್ದು ರಾಜ್ಯ ಸರ್ಕಾರ ವೈಜ್ಞಾನಿಕ ಮಾನದಂಡ ಅನುಸರಿಸಿ ಕ್ರೀಮಿಲೇಯರ್ ಪದ್ಧತಿ ಅಳವಡಿಸಬೇಕು ಎಂದು ಒತ್ತಾಯಿಸಿದರು.

ಸಮಿತಿಯ ರಾಜ್ಯಾಧ್ಯಕ್ಷ ವೆಂಕಟಗಿರಿಯಯ್ಯ, ಜಿಲ್ಲಾಧ್ಯಕ್ಷ ಬಿ.ಆನಂದ್, ಪದಾಧಿಕಾರಿಗಳಾದ ವೈ.ಸುರೇಶ್‌ಕುಮಾರ್, ಕೆ.ಎಂ.ಅನಿಲ್‌ಕುಮಾರ್, ಸುಮಿತ್ರ, ಸರಳ, ರಾಮಕೃಷ್ಣ ಸಂಪಳ್ಳಿ, ಸಿದ್ದಯ್ಯ ದೊಡ್ಡಭೂಹಳ್ಳಿ, ಮೇಡಮೂರ್ತಿ, ಮಹದೇವ ಕೊತ್ತತ್ತಿ, ಎನ್.ಸಿ.ರಾಜು ಭಾಗವಹಿಸಿದ್ದರು.

ಮಂಡ್ಯ ವಿವಿಗೆ ಮಧು ಜಿ.ಮಾದೇಗೌಡ, ವಿಭಾಗೀಯ ರೈಲ್ವೆಗೆ ಕೆ.ವಿವೇಕಾನಂದ ಸದಸ್ಯರಾಗಿ ನಾಮನಿರ್ದೇಶನ

ಭಾರತೀನಗರ.ಆ.12– ವಿಧಾನಪರಿಷತ್ ಸದಸ್ಯರನ್ನು ವಿವಿಧ ಸಮಿತಿಗಳಿಗೆ ನೇಮಕ ಮಾಡಿ ಕರ್ನಾಟಕ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿಯವರು ಆದೇಶ ಹೊರಡಿಸಿದ್ದಾರೆ ಎಂದು ಪರಿಷತ್ ಕಾರ್ಯದರ್ಶಿ ಕೆ.ಆರ್.ಮಹಾಲಕ್ಷ್ಮಿ ಎಂಎಲ್‌ಸಿಗಳಿಗೆ ಮಾಹಿತಿ ನೀಡಿದ್ದಾರೆ.

ಎಂಎಲ್‌ಸಿ ಮಧು.ಜಿ.ಮಾದೇಗೌಡ ಅವರನ್ನು ಮಂಡ್ಯ ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ತಿನ ವ್ಯವಸ್ಥಾಪನಾ ಮಂಡಳಿ ಹಾಗೂ ಸಲಹಾ ಸಮಿತಿಗೆ ಸದಸ್ಯರಾಗಿ ನೇಮಿಸಲಾಗಿದೆ.



ಮಧು.ಜಿ.ಮಾದೇಗೌಡ



ಕೆ.ವಿವೇಕಾನಂದ

ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರನ್ನು ವಿಭಾಗೀಯ ರೈಲ್ವೆ ಬಳಕೆದಾರರ ಸಲಹಾ ಸಮಿತಿ ಸಮಿತಿ ಸದಸ್ಯರಾಗಿ ನೇಮಕ ಮಾಡಲಾಗಿದೆ. ಈ ಸಂಬಂಧ ಮಾಹಿತಿ ನೀಡಿರುವ ವಿಧಾನಪರಿಷತ್ ಕಾರ್ಯದರ್ಶಿ ಕೆ.ಆರ್.ಮಹಾಲಕ್ಷ್ಮಿ ಅವರು ವಿಧಾನಪರಿಷತ್ ಸದಸ್ಯರ ಮೇಲ್ಕಂಡ ಸದಸ್ಯತ್ವವು 2024ರ ಆಗಸ್ಟ್ 7ರಿಂದಲೇ ಜಾರಿಗೆ ಬಂದಿದೆ ಎಂದು ತಿಳಿಸಿದ್ದಾರೆ.

ಆ.21ರಂದು ಗಜಪಯಣ; ಅಂಬಾರಿ ಆನೆ ಅಭಿಮನ್ಯು ಸೇರಿ ಒಟ್ಟು 14 ಆನೆಗಳು ದಸರಾದಲ್ಲಿ ಭಾಗಿ



ಆನೆಗಳ ಸಂಖ್ಯೆಯಲ್ಲಿ ದೇಶದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ ; ಅರಣ್ಯ ಸಚಿವ ಈಶ್ವರ ಖಂಡ್ರೆ



ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ದಸರಾ ಗಜಪಡೆಯ ಚಿತ್ರಸಹಿತ ಪಟ್ಟಿಯನ್ನು ಅರಣ್ಯ ಸಚಿವರು ಬಿಡುಗಡೆ ಮಾಡಿದರು.

ದಸರಾ ಗಜಪಡೆ ವಿವರ...

ಅಭಿಮನ್ಯು ಸೇರಿದಂತೆ ವರಲಕ್ಷ್ಮೀ (ಹೆಣ್ಣು), ಧನಂಜಯ (ಗಂಡು), ಗೋಪಿ (ಗಂಡು), ಭೀಮ (ಗಂಡು), ಲಕ್ಷ್ಮೀ (ಹೆಣ್ಣು), ಕಂಜನ್ (ಗಂಡು), ರೋಹಿತ್ (ಗಂಡು), ಏಕಲವ್ಯ (ಗಂಡು), ಮೊದಲನೇ ತಂಡದಲ್ಲಿ ಆಗಮಿಸಲಿವೆ. ಅಂತೆಯೇ ಎರಡನೇ ತಂಡದಲ್ಲಿ ಪ್ರಶಾಂತ (ಗಂಡು), ಮಹೇಂದ್ರ (ಗಂಡು), ಸುಗ್ರೀವ (ಗಂಡು), ಲಕ್ಷ್ಮೀ (ಹೆಣ್ಣು), ಹಿರಣ್ಯ (ಹೆಣ್ಣು) ಆಗಮಿಸಲಿವೆ. ಒಟ್ಟು 14 ಆನೆಗಳು ಆಗಮಿಸಲಿದ್ದು ಅಲ್ಲದೆ, ಹರ್ಷ (ಗಂಡು), ಅಯ್ಯಪ್ಪ (ಗಂಡು), ಪಾರ್ಥಸಾರಥಿ (ಗಂಡು), ಮಾಲಾದೇವಿ (ಹೆಣ್ಣು) ಆನೆಗಳನ್ನು ಮೀಸಲು ಆನೆಗಳಾಗಿ ಆಯ್ಕೆ ಮಾಡಲಾಗಿದೆ.

ಮೈಸೂರು,ಆ.12(ಪಿಎಂ)– ದಸರಾ ಮಹೋತ್ಸವದ ಗಜಪಯಣಕ್ಕೆ ಆ.21ರಂದು ಚಾಲನೆ ದೊರೆಯಲಿದ್ದು, ಅಂಬಾರಿ ಆನೆ ಅಭಿಮನ್ಯು ಸೇರಿದಂತೆ ಒಟ್ಟು 14 ಆನೆಗಳ ಗಜಪಡೆ ತಂಡ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿವೆ.

ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ)ದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಮಾನವ–ಆನೆ ಸಂಘರ್ಷ ನಿರ್ವಹಣೆ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನದ ಸಮಾರೋಪದಲ್ಲಿ 2024ನೇ ಸಾಲಿನ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಗಜಪಡೆಯ ಚಿತ್ರಸಹಿತ ಪಟ್ಟಿಯನ್ನು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಸಂಪ್ರದಾಯದಂತೆ ಮೈಸೂರು ಜಿಲ್ಲಾಡಳಿತದ ಸಹಯೋಗದೊಂದಿಗೆ ವೀರನ ಹೊಸಹಳ್ಳಿಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಮೊದಲ ತಂಡದ ಆನೆಗಳಿಗೆ ಪೂಜೆ ಸಲ್ಲಿಸಿ, ಮಾವುತರು ಮತ್ತು ಕಾವಾಡಿಗಳಿಗೆ ಸತ್ಕರಿಸಿ ಆನೆಗಳನ್ನು ಕಾಡಿನಿಂದ ನಾಡಿಗೆ ಬರಮಾಡಿಕೊಳ್ಳುವ ಗಜಪಯಣ ಆರಂಭವಾಗಲಿದೆ. ಮೊದಲ ತಂಡದಲ್ಲಿ 9 ಆನೆಗಳು ಹಾಗೂ ಎರಡನೇ ತಂಡದಲ್ಲಿ 5 ಆನೆಗಳು ಬರಲಿವೆ ಎಂದು ತಿಳಿಸಿದರು.

ಇಂದು ವಿಶ್ವ ಆನೆ ದಿನ. ಈ ದಿನದಂದು ಜಗತ್ತಿನಾದ್ಯಂತ ಸಮಸ್ಯೆಯಾಗಿ ಕಾಡುತ್ತಿರುವ ಮಾನವ–ಆನೆ ಸಂಘರ್ಷ ತಡೆಗೆ ಪರಿಹಾರ ಕಂಡುಕೊಳ್ಳುವ ಸಲುವಾಗಿ ಇಂದು ಇಲ್ಲಿ ನಡೆದ ಈ ಸಮ್ಮೇಳನ ಫಲಪ್ರದವಾಗಿದೆ ಎಂದು ಭಾವಿಸಿದ್ದೇನೆ. ಕರ್ನಾಟಕ ಆನೆಗಳ ಸಂಖ್ಯೆಯಲ್ಲಿ ದೇಶದಲ್ಲಿ ಮೊದಲ ಸ್ಥಾನದಲ್ಲಿದೆ. ನಮ್ಮ ರಾಜ್ಯದಲ್ಲಿ 6,395 ಆನೆಗಳಿವೆ. ಅದೇ ರೀತಿ ಹುಲಿಯ ಸಂಖ್ಯೆಯಲ್ಲಿ ನಾವು ದ್ವಿತೀಯ ಸ್ಥಾನದಲ್ಲಿದ್ದೇವೆ. ನಮ್ಮಲ್ಲಿ 563 ಹುಲಿಗಳಿವೆ ಎಂದು ಹೇಳಿದರು. ರಾಜ್ಯದಲ್ಲಿ ವನ್ಯಜೀವಿಗಳ ಸಂರಕ್ಷಣೆಗೆ ಹಲವು ಕಾರ್ಯಕ್ರಮ ರೂಪಿಸಿದ್ದು, ವನ್ಯ ಪ್ರಾಣಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಆದರೆ ಅರಣ್ಯ ಪ್ರದೇಶದ ಹೆಚ್ಚಳ ಸಾಧ್ಯವಾಗುತ್ತಿಲ್ಲ. ಇದರಿಂದ ವನ್ಯಜೀವಿ–ಮಾನವ ಸಂಘರ್ಷ ಹೆಚ್ಚಾಗುತ್ತಿದ್ದು, ಇದರ ತಡೆಗೆ ಬೇರೆ ಬೇರೆ ರಾಜ್ಯಗಳಲ್ಲಿ ಅಳವಡಿಸಿಕೊಂಡಿರುವ ಉತ್ತಮ ಪರಿಹಾರ ಕ್ರಮಗಳ ಕುರಿತಂತೆ ಚರ್ಚಿಸಿ ಅಳವಡಿಸಿಕೊಳ್ಳಲು ಈ ಸಮಾವೇಶದ ವೇದಿಕೆ ಅನುವು ಮಾಡಿದೆ ಎಂದರು.

ಸಮಾವೇಶದ ಅಂಗವಾಗಿ ನಡೆದ ರೈತರೊಂದಿಗಿನ ಸಂವಾದದಲ್ಲಿ ನಾನೂ ಪಾಲ್ಗೊಂಡಿದ್ದೆ. ಈ ಸಂವಾದದಲ್ಲಿ ಆನೆ ಹಾವಳಿ ಹೆಚ್ಚಾಗಿರುವ ಪ್ರದೇಶಗಳ ರೈತರು ಮತ್ತು ಪರಿಸರವಾದಿಗಳು ನೀಡಿದ ಸಲಹೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ಅವುಗಳ ಪೈಕಿ ಉತ್ತಮ ಸಲಹೆಗಳನ್ನು ಅಳವಡಿಸಿಕೊಳ್ಳಲಾಗುವುದು. ಅದೇ ರೀತಿ ಇಂದು ತಮಿಳುನಾಡು, ಜಾರ್ಖಂಡ್, ಕೇರಳ ರಾಜ್ಯದ ಸಚಿವರುಗಳೊಂದಿಗೆ ನಡೆದ ಸಚಿವರ ಮಟ್ಟದ ಸಭೆಯಲ್ಲಿ ಲಾಂಟನಾ, ಸನ್ನಾ ಸಮಸ್ಯೆ, ವನ್ಯಜೀವಿ–ಮಾನವ ಸಂಘರ್ಷ ತಡೆ, ವನ್ಯಜೀವಿ ದಾಳಿಯಿಂದ ಮೃತಪಟ್ಟವರಿಗೆ ನೀಡುವ ಪರಿಹಾರ ಇತ್ಯಾದಿ ವಿಷಯಗಳ ಬಗ್ಗೆ ಚರ್ಚಿಸಲಾಯಿತು ಎಂದು ತಿಳಿಸಿದರು.

ತಮಿಳುನಾಡು ಅರಣ್ಯ ಸಚಿವ ಎಂ.ಮಥಿವೆಂಥನ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಕಾರ್ಯಪಡೆ ಮುಖ್ಯಸ್ಥ ಬ್ರಿಜೇಶ್ ದೀಕ್ಷಿತ್, ವನ್ಯಮೃಗ ವಿಭಾಗದ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ಸುಭಾಷ್ ಮಾಲ್ಕಡೆ, ಮೈಸೂರು ವಲಯದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮಾಲತಿ ಪ್ರಿಯ ಮತ್ತಿತರರು ಪಾಲ್ಗೊಂಡಿದ್ದರು.

ಒಳ ಮೀಸಲಾತಿಯಲ್ಲಿ ಕೆನೆಪದರ ನೀತಿ ಪರಿಗಣಿಸದಂತೆ ಆಗ್ರಹ

ಈ ಸಂಬಂಧ ಹೋರಾಟಕ್ಕೆ ವಿವಿಧ ಸಂಘಟನೆಗಳಿಂದ ನಿರ್ಧಾರ

ಮೈಸೂರು, ಆ.12(ಎಂಕೆ)– ಪರಿಶಿಷ್ಟ ಜಾತಿ ಮತ್ತು ಪಂಗಡದ ಒಳ ಮೀಸಲಾತಿಯಲ್ಲಿ ಕೆನೆಪದರ ನೀತಿ ಪರಿಗಣಿಸದಂತೆ ಒತ್ತಾಯಿಸಿ ನಿರಂತರ ಹೋರಾಟ, ಜಾಗೃತಿ ಅಭಿಯಾನ ನಡೆಸಲು ವಿವಿಧ ದಲಿತ ಸಂಘಟನೆಗಳ ಮುಖಂಡರು ಒಕ್ಕೊರಲ ನಿರ್ಣಯ ಕೈಗೊಂಡರು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಇತ್ತೀಚೆಗೆ ಸುಪ್ರೀಂಕೋರ್ಟ್ ಒಳ ಮೀಸಲಾತಿ ಸಂಬಂಧ ನೀಡಿರುವ ತೀರ್ಪಿನಲ್ಲಿ ಕೆನೆಪದರ ನೀತಿ ರೂಪಿಸುವಂತೆ ರಾಜ್ಯ ಸರ್ಕಾರಗಳಿಗೆ ಸೂಚಿಸಿರುವುದು ಸರಿಯಲ್ಲ. ಸಾಮಾಜಿಕವಾಗಿ ಇನ್ನೂ ಶೋಷಣೆಗೊಳಗಾಗುತ್ತಿರುವ ಪರಿಶಿಷ್ಟ ಜಾತಿಯ ಸಮುದಾಯಗಳಿಗೆ ಕೆನೆಪದರ ನೀತಿ ಅನ್ವಯಿಸಬಾರದು ಎಂದು ಆಗ್ರಹಿಸಲಾಯಿತು.



ಪರಿಶಿಷ್ಟ ಜಾತಿ ಮತ್ತು ಪಂಗಡದ ಒಳ ಮೀಸಲಾತಿಯಲ್ಲಿ ಕೆನೆಪದರ ನೀತಿ ಸಂಬಂಧ ವಿವಿಧ ದಲಿತ ಸಂಘಟನೆಗಳ ಮುಖಂಡರು ಜಲದರ್ಶಿನಿ ಅತಿಥಿಗೃಹದಲ್ಲಿ ಸೋಮವಾರ ನಡೆಸಿದರು.

ಸಂವಿಧಾನದಲ್ಲಿಯೇ ಇಲ್ಲದಂತಹ 'ಕೆನೆಪದರ' ಪದವನ್ನು ಸೃಷ್ಟಿಸಲಾಗಿದೆ. ಇದು ಆರ್‌ಎಸ್‌ಎಸ್ ಅಜೆಂಡಾ. ಪರಿಶಿಷ್ಟರನ್ನು ಮೀಸಲಾತಿಯಿಂದ ವಂಚಿಸಲು ಮಾಡಿರುವ ಹುನ್ನಾರ ಇದಾಗಿದೆ. ಪರಿಶಿಷ್ಟ ಜಾತಿಯ ಒಳ ಮೀಸಲಾತಿಗೆ ಜಾರಿಗೆ ಯಾವುದೇ ತಕರಾರಿಲ್ಲ. ಆದರೆ, ಕೆನೆಪದರ ನೀತಿ ಅನ್ವಯವಾಗಬಾರದು. ಅಂಬೇಡ್ಕರ್ ಅವರು ಹೇಳಿದಂತೆ ಸಾಮಾಜಿಕ ಅಸಮಾನತೆ ಇರುವವರೆಗೂ ಮೀಸಲಾತಿ ಇರಲೇಬೇಕು. ಅಲ್ಲದೆ ಮೀಸಲಾತಿಯನ್ನು ಎಲ್ಲಾ ಜಾತಿ–ಸಮುದಾಯಗಳು ಪಡೆಯುತ್ತಿವೆ. ಆದರೆ ಪರಿಶಿಷ್ಟ ಸಮುದಾಯಕ್ಕೆ ನೀಡುತ್ತಿರುವ ಮೀಸಲಾತಿಯ ಮೇಲೆಯೇ ಎಲ್ಲರ ಕಣ್ಣಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ಹಿಂದೆ ಯಾವುದೇ ಚರ್ಚೆಯಾಗದೆ ಇಡಬ್ಲ್ಯೂಎಸ್ ಜಾರಿಗೊಳಿಸುವ ಮೂಲಕ ಮುಂದುವರೆದ ಸಮುದಾಯಕ್ಕೆ ಮೀಸಲಾತಿ ನೀಡಲಾಯಿತು. ಅದರಂತೆ ಒಳಗೊಳಗೆ ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀಸಲಾತಿಯಲ್ಲಿ ಕೆನೆಪದರ ನೀತಿ ಅಳವಡಿಸುವ ಹುನ್ನಾರ ನಡೆಯುತ್ತಿದೆ. ಕೂಡಲೇ ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ಪೀಳಿಗೆ ಮೀಸಲಾತಿಯಿಂದ ಹೊರಗುಳಿಯಬೇಕಾದ ಅಪಾಯ ಸೃಷ್ಟಿಯಾಗಬಹುದು ಎಂದು ಆತಂಕ ವ್ಯಕ್ತಪಡಿಸಿದರು.

ತಕರಾರಿಲ್ಲ: ಒಳ ಮೀಸಲಾತಿಗೆ ಪರಿಶಿಷ್ಟ ಜಾತಿ ಸಮುದಾಯಗಳಿಂದ ಯಾವುದೇ ತಕರಾರಿಲ್ಲ. ಆದರೆ ವೈಜ್ಞಾನಿಕವಾಗಿ ಜನಸಂಖ್ಯೆಗೆ ಅನುಗುಣವಾಗಿ ಜಾರಿಯಾಗಬೇಕು. ಜಾರಿಗೂ ಮುನ್ನ ಜಾತಿ ಜನಗಣತಿಯಾಗಬೇಕು ಎಂದು ಒತ್ತಾಯಿಸಿದರಲ್ಲದೆ ಕೆನೆಪದರ ಎಂಬುದು ಆರ್‌ಎಸ್‌ಎಸ್ ಅಜೆಂಡಾ. ಮೀಸಲಾತಿಯನ್ನು ತೆಗೆದುಹಾಕಲು ಮನುವಾದಿಗಳು ಹುಟ್ಟುಹಾಕಿರುವುದಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮನವಿ, ಜಾಗೃತಿ ಕಾರ್ಯಕ್ರಮ: ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಮಾತನಾಡಿ, ಪರಿಶಿಷ್ಟ ಜಾತಿ ಒಳ ಮೀಸಲಾತಿ ಜಾರಿಯಲ್ಲಿ ಕೆನೆಪದರ ನೀತಿ ಕೈ ಬಿಡುವಂತೆ ಮುಖ್ಯಮಂತ್ರಿಗಳಿಗೆ ದಲಿತ ಸಂಘಟನೆಗಳು ಒಟ್ಟಾಗಿ ಸೇರಿ ಮನವಿ ಮಾಡಬೇಕು. ಹಾಗೆಯೇ ನಿರಂತರ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಕೆನೆಪದರ ನೀತಿ ಏನೆಂಬುದನ್ನು ಸಮುದಾಯದ ಜನರಿಗೆ ತಿಳಿಸುವ ಕಾರ್ಯವಾಗಬೇಕು ಎಂದು ತಿಳಿಸಿದರು.

ನಿವೃತ್ತ ನ್ಯಾಯಮೂರ್ತಿಗಳಿಂದ ಅರಿವು: ಮೈಸೂರು ವಿವಿ ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಯ ಪ್ರಾಧ್ಯಾಪಕ ಪ್ರೊ.ಜೆ.ಸೋಮಶೇಖರ್, ಸುಪ್ರೀಂ ಕೋರ್ಟ್‌ನಿಂದ ಒಳ ಮೀಸಲಾತಿ ಸಂಬಂಧ ತೀರ್ಪು ಬಂದಿದೆ. ರಾಜಕೀಯ ಪಕ್ಷದ ಜನಪ್ರತಿನಿಧಿಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ನೀಡಿದ್ದಾರೆ. ಒಳ ಮೀಸಲಾತಿ ವರ್ಗೀಕರಣಕ್ಕೆ ವಿರೋಧವಿಲ್ಲ. ಆದರೆ ಕೆನೆಪದರ ಆತಂಕ ಸೃಷ್ಟಿಸಿದೆ. ಮೀಸಲಾತಿಯನ್ನು ಎಲ್ಲಾ ಸಮುದಾಯಗಳು ಪಡೆದುಕೊಳ್ಳುತ್ತಿವೆ. ಆದರೆ ಉನ್ನತಗಳಿಗೆ ಮೀಸಲಾತಿ ಪರಿಗಣಿಸುತ್ತಿಲ್ಲ. ಖಾಸಗಿ ಕ್ಷೇತ್ರದಲ್ಲಂತೂ ಇಲ್ಲವೇ ಇಲ್ಲ. ಆದ್ದರಿಂದ ಒಳ ಮೀಸಲಾತಿ ಹಾಗೂ ಕೆನೆಪದರ ನೀತಿ ಕುರಿತು ನಿವೃತ್ತ ನ್ಯಾಯಮೂರ್ತಿಗಳು, ಕಾನೂನು ತಜ್ಞರಿಂದ ಸರಣಿ ಜಾಗೃತಿ ಕಾರ್ಯಕ್ರಮಗಳು, ಚರ್ಚಾಕೂಟಗಳನ್ನು ಆಯೋಜಿಸುವ ಮೂಲಕ ಪರಿಶಿಷ್ಟ ಸಮುದಾಯಗಳನ್ನು ಎಚ್ಚರಿಸಬೇಕಿದೆ ಎಂದು ಸಲಹೆ ನೀಡಿದರು.

ಸಾಹಿತಿ ಸಿದ್ದಸ್ವಾಮಿ, ಲೇಖಕ ಟಿ.ಅರಕ್ ಕುಮಾರ್, ಮೈಸೂರು ವಿವಿ ಸಹಾಯಕ ಪ್ರಾಧ್ಯಾಪಕ ಡಾ.ಜ್ಞಾನಪ್ರಕಾಶ್, ಡಿಎಸ್‌ಎಸ್ ಮುಖಂಡ ಶಂಭು, ವಿಜ್ಞಾನಿ ಕನಕರಾಜು, ಮೈಸೂರು ನಗರ ಎಸ್‌ಸಿ ವಕೀಲರ ಸಂಘದ ಅಧ್ಯಕ್ಷ ತಿಮ್ಮಯ್ಯ, ರಾಜ್ಯ ನಾಯಕರ ಸಂಘದ ಅಧ್ಯಕ್ಷ ದ್ಯಾವಪ್ಪ ನಾಯಕ, ಮಾದಿಗ ಸಮಾಜದ ಮುಖಂಡ ಹಾಗೂ ವಕೀಲ ಶಿವಪ್ರಸಾದ್, ಆದಿ ಕರ್ನಾಟಕ ಹಿತರಕ್ಷಣಾ ಹೋರಾಟ ಸಮಿತಿ ಅಧ್ಯಕ್ಷ ಕೆ.ಮುರಳಿ, ವಿಶ್ವೇಶ್ವರನಗರ ಇಂಡಸ್ಟ್ರಿಯಲ್ ಸಬ್‌ರ್ಬ್‌ನ ಮುಖಂಡ ಪಾಂಡು, ನವೀನ್ ಕುಮಾರ್, ಸಿ.ವಿಜಯ್ ಕುಮಾರ್, ರೈಲ್ವೆ ಎಸ್‌ಸಿ ಸಹಕಾರ ಬ್ಯಾಂಕ್ ನಿರ್ದೇಶಕ ಆನಂದ್, ಪಡುವಾರಹಳ್ಳಿ ಅಂಬೇಡ್ಕರ್ ಹವ್ಯಾಸಿ ಸಂಘದ ಸತೀಶ್ ಕುಮಾರ್, ಕೆಎಸ್‌ಆರ್‌ಟಿಸಿ ನೌಕರರ ಸಂಘದ ಕೆ.ಎಂ.ರೇವಣ್ಣ ಮತ್ತಿತರರಿದ್ದರು.

ಬಾಂಗ್ಲಾದಲ್ಲಿ ಹಿಂದೂಗಳ ನರಮೇಧಕ್ಕೆ ಖಂಡನೆ



ಮೈಸೂರು ಗಾಯತ್ರಿಪುರಂನ ತ್ರಿವೇಣಿ ವೃತ್ತದಲ್ಲಿ ನರಸಿಂಹರಾಜ ಕ್ಷೇತ್ರ ಬಿಜೆಪಿ ಘಟಕದ ವತಿಯಿಂದ ನಡೆದ ಮೌನ ಪ್ರತಿಭಟನೆ ನಡೆಯಿತು.

ಮೈಸೂರು, ಆ.12(ಎಸ್‌ಪಿಎನ್)– ರಾಜಕೀಯ ಅಸ್ಥಿರತೆ ನಡುವೆ ಬಾಂಗ್ಲಾ ಹಿಂದೂಗಳ ನರಮೇಧವನ್ನು ಬಿಜೆಪಿ ಹಿರಿಯ ಮುಖಂಡ ಹಾಗೂ ಮಾಜಿ ಮೇಯರ್ ಸಂದೇಶ್ ಸ್ವಾಮಿ ಖಂಡಿಸಿದರು.

ಮೈಸೂರು ಗಾಯತ್ರಿಪುರಂನ ತ್ರಿವೇಣಿ ವೃತ್ತದಲ್ಲಿ ನರಸಿಂಹರಾಜ ಕ್ಷೇತ್ರ ಬಿಜೆಪಿ ಘಟಕದ ವತಿಯಿಂದ ನಡೆದ ಮೌನ ಪ್ರತಿಭಟನೆಯ ನೇತೃತ್ವ ವಹಿಸಿ, ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪಾಕಿಸ್ತಾನದ ಭಾಗವಾಗಿದ್ದ ಬಾಂಗ್ಲಾವನ್ನು ವಿಭಜಿಸಿ ಅದರ ಸ್ವಾತಂತ್ರ್ಯಕ್ಕಾಗಿ ಭಾರತ ಶ್ರಮಿಸಿತ್ತು. ಈ ಕೊಡುಗೆಯನ್ನು ಬಾಂಗ್ಲಾದೇಶದ ಪ್ರಜೆಗಳು ಮರೆಯುವಂತಿಲ್ಲ ಎಂದು ತಿಳಿಸಿದ್ದಾರೆ.

ಸಾವಿರಾರು ವರ್ಷಗಳಿಂದ ಬಾಂಗ್ಲಾ ನೆಲದಲ್ಲಿಯೇ ಹುಟ್ಟಿ, ಬೆಳೆದು ಬದುಕುತ್ತಿರುವ ಅಲ್ಪಸಂಖ್ಯಾತ ಹಿಂದೂಗಳನ್ನು ಗುರಿಯಾಗಿಸಿ ದಾಳಿ ಮಾಡುತ್ತಿರುವುದು ಅಮಾನವೀಯ ಕೃತ್ಯ. ಭಾರತದಲ್ಲಿ ಇಂದಿಗೂ ಅನಧಿಕೃತವಾಗಿ ಲಕ್ಷಾಂತರ ಮಂದಿ ಬಾಂಗ್ಲಾ ನಿವಾಸಿಗಳು ವಾಸ ಮಾಡುತ್ತಿದ್ದು, ಅವರನ್ನು ಪ್ರೀತಿ ವಿಶ್ವಾಸದಿಂದ ಕಾಣುತ್ತಿದ್ದೇವೆ. ಆದರೆ, ಬಾಂಗ್ಲಾದಲ್ಲಿ ಅಲ್ಪಸಂಖ್ಯಾತರಾಗಿರುವ ಹಿಂದೂಗಳ ಮಾರಣಹೋಮ ನಡೆಯುತ್ತಿರುವುದು ಖಂಡನೀಯ ಎಂದರು.

ಪ್ರತಿಭಟನೆಯಲ್ಲಿ 'ಹಿಂದೂಗಳು ಕಡಿಮೆಯಾದರೆ ಭಾರತ ಕಾಣೆಯಾಗುತ್ತದೆ', 'ಬಾಂಗ್ಲಾದೇಶದಿಂದ ಕೇಳುತ್ತಿರುವುದು ದೇವಸ್ಥಾನದ ಗಂಟೆಯಲ್ಲ. ಅದು ಹಿಂದೂಗಳಿಗೆ ಎಚ್ಚರಿಕೆಯ ಗಂಟೆ – ಸರಿಯಾಗಿ ಕೇಳಿಸಿಕೊಳ್ಳಿ ಎಲ್ಲರ ಚಿತ್ತ ಬಾಂಗ್ಲಾದೇಶದ ಹಿಂದುಗಳತ್ತ', 'ಬಾಂಗ್ಲಾ ಹಿಂದುಗಳೇ, ಧೃತಿಗೆಡದಿರಿ, ನಿಮ್ಮೊಂದಿಗೆ ನಾವಿದ್ದೇವೆ' ಇತರೆ ಘೋಷವಾಕ್ಯವಿದ್ದ ಫಲಕಗಳನ್ನು ಪ್ರದರ್ಶಿಸಿ ಗಮನ ಸೆಳೆದರು. ಈ ವೇಳೆ ಬಿಜೆಪಿ ನಗರ ಘಟಕದ ಪ್ರಧಾನ ಕಾರ್ಯದರ್ಶಿ ಗಿರಿಧರ್ ಮುಂತಾದ ಮುಖಂಡರಿದ್ದರು.

ರಾಜಸ್ಥಾನದಲ್ಲಿ ನೀರಲ್ಲಿ ಮುಳುಗಿ 15 ಮಂದಿ ಸಾವು

ಜೈಪುರ: ರಾಜಸ್ಥಾನದಾದ್ಯಂತ ಭಾರಿ ಮಳೆಯಾಗಿದ್ದು, ನಿನ್ನೆ ಭಾನುವಾರ 15 ಜನರ ದುರಂತ ಸಾವಿಗೆ ಕಾರಣವಾಗಿದೆ. ವಿವಿಧ ಜಿಲ್ಲೆಗಳಲ್ಲಿ ಸಾವು ಸಂಭವಿಸಿದೆ. ಭರತ್‌ಪುರದಲ್ಲಿ ಏಳು, ಜುಂಜುನುದಲ್ಲಿ ಮೂರು, ಕರೌಲಿಯಲ್ಲಿ ಮೂರು, ಜೋಧ್‌ಪುರದಲ್ಲಿ ಒಬ್ಬರು ಮತ್ತು ಬನ್ಸ್ವಾರಾದಲ್ಲಿ ಒಬ್ಬರು ಮೃತಪಟ್ಟಿದ್ದಾರೆ ಎಂದು ಮಾಹಿತಿ ಸಿಕ್ಕಿದೆ. ಪ್ರತ್ಯೇಕ ಘಟನೆಗಳಲ್ಲಿ, ಜೈಪುರ ಸಮೀಪದ ಕನೋಟಾ ಅಣೆಕಟ್ಟಿನಲ್ಲಿ ಐವರು ಯುವಕರು ಮುಳುಗಿ ಮೃತಪಟ್ಟಿದ್ದು, ಪತ್ತೆಗಾಗಿ ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದೆ.

ಭರತ್‌ಪುರದಲ್ಲಿ 14 ರಿಂದ 22 ವರ್ಷದೊಳಗಿನ ಏಳು ಯುವಕರು ನೀರಿನಲ್ಲಿ ಮುಳುಗಿ ಪ್ರಾಣ ಕಳೆದುಕೊಂಡಿರುವ ಭೀಕರ ಮಳೆ ಸಂಬಂಧಿತ ದುರಂತ ಸಂಭವಿಸಿದೆ. ಮೃತರು ಶ್ರೀನಗರ ಗ್ರಾಮದವರಾಗಿದ್ದು, ಮೂವರು ಸೋದರ ಸಂಬಂಧಿಗಳಾಗಿದ್ದಾರೆ.

ಬಾಂಗ್ಲಾದಲ್ಲಿ ಹಿಂದೂಗಳ ಮೇಲೆ ದೌರ್ಜನ್ಯ ಖಂಡಿಸಿ ಪ್ರತಿಭಟನೆ



ಬಾಂಗ್ಲಾದಲ್ಲಿ ಹಿಂದೂಗಳ ಮಾರಣ ಹೋಮ ಖಂಡಿಸಿ ಮೈಸೂರಿನ ಹೆಬ್ಬಾಳು ಬಡಾವಣೆ ನಿವಾಸಿಗಳು ಪ್ರತಿಭಟನೆ ನಡೆಸಿದರು.

ಮೈಸೂರು, ಆ.12(ಎಸ್‌ಪಿಎನ್)– ನೆರೆಯ ಬಾಂಗ್ಲಾದಲ್ಲಿ ಹಿಂದೂಗಳ ಮಾರಣ ಹೋಮ ಖಂಡಿಸಿ ಮೈಸೂರಿನ ಹೆಬ್ಬಾಳು ಬಡಾವಣೆ ನಿವಾಸಿಗಳು ಸೋಮವಾರ ಸಂಜೆ ಇಲ್ಲಿನ ಬಸವೇಶ್ವರ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ಪ್ರತಿಭಟನಾಕಾರರು ವಿವಿಧ ಘೋಷಣೆಗಳನ್ನು ಕೂಗಿ, ಬಾಂಗ್ಲಾ ದೇಶದಲ್ಲಿ ಹಿಂದೂಗಳ ಮನೆ, ಅಂಗಡಿ, ದೇವಸ್ಥಾನದ ಮೇಲಿನ ದಾಳಿ ನಡೆಸಲಾಗುತ್ತಿದೆ. ತಂದೆ–ತಾಯಿಗಳ ಎದುರೇ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ, ಹತ್ಯೆ, ಆಸ್ತಿ ನಾಶದಂತಹ ಅಮಾನವೀಯ ಕೃತ್ಯ ಎಸಗಲಾಗುತ್ತಿದೆ. ಹಿಂದೂಗಳ ಮೇಲೆ ಮೂಲಭೂತವಾದಿಗಳು ಮಾಡುತ್ತಿರುವ ಹಿಂಸಾಚಾರ ಖಂಡನೀಯ. ಅಲ್ಲಿ ರಾಜಕೀಯ ಅರಾಜಕತೆ ಉಂಟಾಗಿದ್ದು, ಅಲ್ಲಿನ ಸೇನೆಯೂ ಇದನ್ನು ತಡೆಯುವ ಗೋಜಿಗೆ ಹೋಗುತ್ತಿಲ್ಲ ಎಂದು ದೂರಿದರು.

ಬಾಂಗ್ಲಾದೇಶದ ಮೂಲಭೂತವಾದಿಗಳು ಮಾಡಿರುವ ಅದ್ವಾನಕ್ಕೆ ಇಡೀ ಹಿಂದೂ ಸಮುದಾಯದ ಬದುಕು ಬೀದಿಗೆ ಬಂದಿದೆ. ಈ ಘಟನೆ ಬಗ್ಗೆ ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ತಕ್ಷಣ ಮಧ್ಯಪ್ರವೇಶಿಸಿ ಅಲ್ಲಿನ ಹಿಂದೂಗಳ ರಕ್ಷಣೆಗೆ ಮುಂದಾಗಬೇಕು. ಈ ಬಗ್ಗೆ ಬಾಂಗ್ಲಾದೇಶದ ಸ್ಥಳೀಯ ಆಡಳಿತದೊಂದಿಗೆ ರಾಜತಾಂತ್ರಿಕ ವ್ಯವಸ್ಥೆ ಮುಖೇನ ಹಿಂದೂಗಳ ರಕ್ಷಣೆ ಮಾಡದಿದ್ದಲ್ಲಿ ಭಾರತದ ಹಿಂದೂಗಳು ಕೇಂದ್ರ ಸರ್ಕಾರದ ವಿರುದ್ಧ ದಂಗೆ ಹೇಳುವ ದಿನ ದೂರವಿಲ್ಲ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್, ಹೆಬ್ಬಾಳ ಬಡಾವಣೆಯ ಮುಖಂಡರಾದ ಕುಮಾರಗೌಡ, ಸತೀಶ್, ರಾಮಕೃಷ್ಣ, ಅರುಣ, ಯೋಗೇಶ್, ಬೋರೇಗೌಡ, ದೇವೇಗೌಡ, ಚಲುವಯ್ಯ, ರವಿ ಮತ್ತಿತರರು ಭಾಗವಹಿಸಿದ್ದರು.

ಅಂಕಣಕಾರ ಜಿ.ಎಲ್.ತ್ರಿಪುರಾಂತಕ ಅವರಿಗೆ ಸನ್ಮಾನ



ವಚನ ಶ್ರಾವಣ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಜೆಎಸ್‌ಎಸ್ ಸಂಸ್ಥೆಗಳ ಸಂಯೋಜಕ ಹಾಗೂ ಅಂಕಣಕಾರ ಜಿ.ಎಲ್.ತ್ರಿಪುರಾಂತಕ ಅವರನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ಕುದೇರು ಮಠದ ಶ್ರೀಗಳು, ಶ್ರೀಮತಿ ಶಾರದ ಶಿವಲಿಂಗಸ್ವಾಮಿ, ಮ.ಗು.ಸದಾನಂದಯ್ಯ ಹಾಗೂ ಕಾರ್ಯಕ್ರಮದ ಪ್ರಾಯೋಜಕರನ್ನು ಕಾಣಬಹುದು.

ನಾಲ್ಕು ವರ್ಷದಿಂದ ನಡೆಯದ ತಾಪಂ, ಜಿಪಂ ಚುನಾವಣೆ

ಹೈಕೋರ್ಟ್ ಅಚ್ಚರಿ

ಬೆಂಗಳೂರು: ಕಳೆದ ನಾಲ್ಕು ವರ್ಷಗಳಿಂದ ರಾಜ್ಯದಲ್ಲಿ ತಾಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ ಚುನಾವಣೆಯೇ ನಡೆದಿಲ್ಲವೇ ಎಂದು ಹೈಕೋರ್ಟ್ ರಾಜ್ಯ ಸರ್ಕಾರದ ನಡೆಗೆ ಅತೀವ ಅಚ್ಚರಿ ವ್ಯಕ್ತಪಡಿಸಿದೆ.

ಈ ಸಂಬಂಧ ರಾಜ್ಯ ಚುನಾವಣಾ ಆಯೋಗ ಮತ್ತು 'ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನದ ಮೀಸಲಾತಿ ಪ್ರಕಟಿಸುವ ನಿಟ್ಟಿನಲ್ಲಿ, ಏಕಸದಸ್ಯ ನ್ಯಾಯಪೀಠದ ಆದೇಶ ಪಾಲಿಸುವಲ್ಲಿ ಸರ್ಕಾರ ವಿಫಲವಾಗಿದೆ' ಎಂದು ಆಕ್ಷೇಪಿಸಲಾದ ಎರಡು ಪ್ರತ್ಯೇಕ ನ್ಯಾಯಾಂಗ ನಿಂದನೆ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಮೊಹಮ್ಮದ್ ತಾಹಿರ್, 'ಕಳೆದ ನಾಲ್ಕು ವರ್ಷಗಳಿಂದ ರಾಜ್ಯದ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳು ಆಡಳಿತಾಧಿಕಾರಿಗಳ ಅಧೀನದಲ್ಲಿವೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಈ ಮಾತಿಗೆ ಆಶ್ಚರ್ಯ ವ್ಯಕ್ತಪಡಿಸಿದ ಮುಖ್ಯ ನ್ಯಾಯಮೂರ್ತಿಗಳು, 'ಅಧಿಕಾರ ವಿಕೇಂದ್ರೀಕರಣಕ್ಕೆ ಸಂಬಂಧಿಸಿದ ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯಿಂದ ಕರ್ನಾಟಕಕ್ಕೆ ಏನಾದರೂ ವಿನಾಯಿತಿ ಇದೆಯೇ' ಎಂದು ರಾಜ್ಯ ಸರ್ಕಾರವನ್ನು ಕುಟುಕಿದರು.

ಇದಕ್ಕೆ ಸಮಜಾಯಿಷಿ ನೀಡಿದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ, 'ಲೋಕಸಭೆ ಚುನಾವಣೆ ಹಾಗೂ ಇನ್ನಿತರ ಕಾರಣಗಳಿಗೆ ತಾ.ಪಂ. ಜಿ.ಪಂ ಚುನಾವಣೆ ವಿಳಂಬ ವಾಗಿದೆ. ಈಗಾಗಲೇ ರಾಜ್ಯದ 31 ಜಿ.ಪಂ. ಗಳ ಕ್ಷೇತ್ರ ಪುನರ್‌ವಿಂಗಡಣೆ ಕಾರ್ಯ ಮುಗಿದಿದೆ. ಮೀಸಲಾತಿ ನಿಗದಿಪಡಿಸುವ ಪ್ರಕ್ರಿಯೆ ಪ್ರಾರಂಭವಾಗಿದೆ. ಇದಕ್ಕೆ ಇನ್ನೂ ನಾಲ್ಕು ವಾರಗಳು ಬೇಕು' ಎಂದರು.

ಪ್ರತಿಯಾಗಿ ನ್ಯಾಯಪೀಠ, 'ಕ್ಷೇತ್ರ ಪುನರ್‌ವಿಂಗಡಣೆ, ಮೀಸಲಾತಿ ನಿಗದಿಪಡಿಸುವುದು ಚುನಾವಣಾ ಆಯೋಗದ ಕೆಲಸವಲ್ಲವೇ' ಎಂದು ಪ್ರಶ್ನಿಸಿತು. ಇದಕ್ಕೆ, ರಾಜ್ಯ ಚುನಾವಣಾ ಆಯೋಗದ ಪರ ಹಿರಿಯ ವಕೀಲ ಕೆ.ಎನ್.ಫಣೀಂದ್ರ, 'ಮೊದಲು ಆ ಅಧಿಕಾರ ಆಯೋಗದ ಬಳಿಯೇ ಇತ್ತು. ಆದರೆ, ರಾಜ್ಯ ಸರ್ಕಾರ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಆ ಅಧಿಕಾರವನ್ನು ಆಯೋಗದಿಂದ ಕಿತ್ತುಕೊಂಡಿದೆ' ಎಂದು ವಿವರಿಸಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ಸೆಪ್ಟೆಂಬರ್ 5ಕ್ಕೆ ವಿಚಾರಣೆ ಮುಂದೂಡಿತು.

ಮಾನವ–ವನ್ಯಜೀವಿ ಸಂಘರ್ಷ ಸಮಸ್ಯೆ ಪರಿಹಾರಕ್ಕೆ ಪ್ರಥಮ ಆದ್ಯತೆ

● ಅರಣ್ಯ ಸಚಿವ ಈಶ್ವರ ಖಂಡ್ರೆ ಮಾಹಿತಿ ● ಸಂಘರ್ಷ ನಿರ್ವಹಣೆ ಸಂಬಂಧ ಅಂತಾರಾಷ್ಟ್ರೀಯ ಸಮ್ಮೇಳನ



ಆನೆ–ಮಾನವ ಸಂಘರ್ಷ ನಿರ್ವಹಣೆ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಆಯೋಜಿಸಿದ್ದ ಆನೆಗಳ ಛಾಯಾ ಚಿತ್ರ ಪ್ರದರ್ಶನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವೀಕ್ಷಿಸಿದರು.

ಬೆಂಗಳೂರು, ಆ. 12(ಕೆಎಂಶಿ)– ಮಾನವ–ವನ್ಯಜೀವಿ ಸಂಘರ್ಷ ಸಮಸ್ಯೆ ಪರಿಹಾರ ಪ್ರಥಮ ಆದ್ಯತೆಯಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ಇಂದಿಲ್ಲಿ ತಿಳಿಸಿದ್ದಾರೆ.

ಆನೆ–ಮಾನವ ಸಂಘರ್ಷ ನಿರ್ವಹಣೆ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ಜನರ ಮತ್ತು ವನ್ಯಜೀವಿಗಳ ಸುರಕ್ಷತೆ ಖಾತ್ರಿಪಡಿಸಲು ಇಲಾಖೆ ಹಲವು ಕ್ರಮಗಳನ್ನು ಕೈಗೊಂಡಿದೆ ಎಂದರು.

ತಂತ್ರಜ್ಞಾನದ ಅಳವಡಿಕೆ ಮತ್ತು ಸಮುದಾಯ–ಚಾಲಿತ ಉಪಕ್ರಮಗಳೊಂದಿಗೆ ಆನೆಗಳು ನಾಡಿಗೆ ಬರುವುದನ್ನು ನಿಯಂತ್ರಿಸಲು ಶ್ರಮಿಸುತ್ತಿದ್ದು, ಈ ಸವಾಲು ಎದುರಿಸುವಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಮಾನವ–ವನ್ಯಜೀವಿ ಸಂಘರ್ಷ ಪರಿಸರ, ಸಾಮಾಜಿಕ ಮತ್ತು ಆರ್ಥಿಕ ಅಂಶಗಳನ್ನು ಒಳಗೊಂಡ ಸಂಕೀರ್ಣ ಸಮಸ್ಯೆಯಾಗಿದೆ. ಅಮೂಲ್ಯ ಜೀವ ಹಾಗೂ ಬೆಳೆ ಹಾನಿಗೆ ಕಾರಣವಾಗುತ್ತಿರುವ ಸಮಸ್ಯೆಗೆ ಸುಸ್ಥಿರ ಪರಿಹಾರ ಕಂಡುಕೊಳ್ಳಲು ಸಂಘಟಿತ ಮತ್ತು ಸಹಯೋಗದ ಪ್ರಯತ್ನಗಳು ಅಗತ್ಯ ಮತ್ತು ಅನಿವಾರ್ಯ ಎಂದರು.

ಜೀವನ ಮತ್ತು ಜೀವನೋಪಾಯಕ್ಕಾಗಿ ಅರಣ್ಯವನ್ನು ಅವಲಂಬಿಸಿರುವ ಅಸಂಖ್ಯಾತ ಸಮುದಾಯಗಳು ಅರಣ್ಯ ಸಂರಕ್ಷಣೆಯಲ್ಲಿ ಮಹತ್ವ ಪಾತ್ರ ವಹಿಸಿವೆ, ಕಾಡು ಭೂಗ್ರಹದ ಜೀವನಾಡಿ, ಎಲ್ಲ ಜೀವ ಜಂತುಗಳ ಉಸಿರು, ಶುದ್ಧ ಗಾಳಿ, ಶುದ್ಧ ನೀರು, ಫಲವತ್ತಾದ ಮಣ್ಣು ಲಭಿಸುವುದೇ ಅರಣ್ಯದಿಂದ.

ಕರ್ನಾಟಕ ಸರ್ಕಾರ ಅರಣ್ಯದಲ್ಲಿ ಕಳ್ಳಬೇಟೆ ನಿಗ್ರಹಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಂಡ ಪರಿಣಾಮ ವನ್ಯಮೃಗಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ, 2023ರ ಆನೆ ಗಣತಿಯ ಪ್ರಕಾರ ರಾಜ್ಯದಲ್ಲಿ 6,395 ಆನೆಗಳಿದ್ದು, ಗಜ ಸಂಖ್ಯೆಯಲ್ಲಿ ರಾಜ್ಯ ಪ್ರಥಮ ಸ್ಥಾನದಲ್ಲಿದೆ. ಕರ್ನಾಟಕ ವ್ಯಾಘ್ರಗಳ ಸಂಖ್ಯೆಯಲ್ಲಿ 2ನೇ ಸ್ಥಾನದಲ್ಲಿದೆ, ರಾಜ್ಯದಲ್ಲಿ 563 ಹುಲಿಗಳಿವೆ. ರಾಜ್ಯದಲ್ಲಿ ಪ್ರತಿ ವರ್ಷ ಸರಾಸರಿ 30 ಜನ ಆನೆಗಳ ದಾಳಿಯಿಂದ ಸಾವಿಗೀಡಾಗುತ್ತಿರುವುದು ನೋವಿನ ಸಂಗತಿ, ಮಾನವ–ಆನೆಗಳ ಸಂಘರ್ಷ ನಿರ್ವಹಣೆಗೆ ಸೂಕ್ತ ಪರಿಹಾರದ ಅಗತ್ಯವಿದೆ.


ವನ್ಯಜೀವಿ ಮತ್ತು ಮಾನವ ಸಂಘರ್ಷ ತಡೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಚ್ಚಿನ ಆಸಕ್ತಿ ತಳೆದಿದ್ದು, 2023–24ರಲ್ಲಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ 100 ಕೋಟಿ ರೂ. ಹೆಚ್ಚುವರಿ ಅನುದಾನ ನೀಡಿದ್ದಾರೆ ಎಂದು ತಿಳಿಸಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹಾ ಅರಣ್ಯ ಇಲಾಖೆಯ ಸುರಕ್ಷತಾ ಕಾರ್ಯಗಳಿಗೆ ಇಲಾಖೆ ಕೈಗೊಂಡಿರುವ ಕ್ರಮಗಳಿಗೆ ಬೆಂಬಲ ನೀಡಿದ್ದಾರೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ನಡೆದ ವಿವಿಧ ರಾಜ್ಯಗಳ ಅರಣ್ಯ ಸಚಿವರ ಮಟ್ಟದ ಸಭೆಯಲ್ಲಿ, ಆನೆ ಹಾವಳಿ ತಡೆಗೆ ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ ಕ್ಯಾಂಪಾ ಹಣ ಬಿಡುಗಡೆ ಮಾಡುವಂತೆ ಕೇಂದ್ರ ಹವಾಮಾನ ಬದಲಾವಣೆ, ಪರಿಸರ ಮತ್ತು ಅರಣ್ಯ ಸಚಿವರಿಗೆ ಮನವಿ ಸಲ್ಲಿಸಲು ಸಲಹೆ ವ್ಯಕ್ತವಾಯಿತು. ಕೇರಳ ಅರಣ್ಯ ಸಚಿವ ಎ.ಕೆ.ಸಸೀಂದ್ರನ್ ಇದರ ನೇತೃತ್ವವನ್ನು ತಾವು ವಹಿಸುವುದಾಗಿ ಪ್ರಕಟಿಸಿದರು. ಮಹಾರಾಷ್ಟ್ರ ಮತ್ತು ಇತರ ರಾಜ್ಯಗಳ ಅರಣ್ಯ ಸಚಿವರನ್ನೂ ಕರೆದುಕೊಂಡು ದೆಹಲಿಗೆ ನಿಯೋಗ ತೆರಳುವ ಮೂಲಕ ಕೇಂದ್ರ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲು ದಿನಾಂಕ ನಿಗದಿ ಮಾಡುವಂತೆ ಈಶ್ವರ ಖಂಡ್ರೆ ತಿಳಿಸಿದ್ದಕ್ಕೆ ಸಭೆ ಸಮ್ಮತಿಸಿತು.

ಮುಡಾ ನಿವೇಶನ ಹಂಚಿಕೆ ಹಗರಣ

ಏಕಸದಸ್ಯ ತನಿಖಾ ಆಯೋಗಕ್ಕೆ 2006ರ ನಂತರದ ಪ್ರಾಧಿಕಾರ ಸಭಾ ನಡಾವಳಿ ರವಾನೆ



ಮೈಸೂರು, ಆ. 12(ಆರ್‌ಕೆ)– ರಾಜ್ಯಾದ್ಯಂತ ಸದ್ದು ಮಾಡುತ್ತಿರುವ ಮುಡಾ ನಿವೇಶನ ಹಂಚಿಕೆ ಹಗರಣದ ತನಿಖೆ ನಡೆಸುತ್ತಿರುವ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ದೇಸಾಯಿ ನೇತೃತ್ವದ ಏಕಸದಸ್ಯ ಆಯೋಗಕ್ಕೆ 2006ರಿಂದ ಈವರೆಗೆ ಮುಡಾದಲ್ಲಿ ನಡೆದಿರುವ ಸಾಮಾನ್ಯ ಸಭೆಗಳ ನಡಾವಳಿಗಳ ಪ್ರತಿಗಳನ್ನು ಅಧಿಕಾರಿಗಳು ರವಾನಿಸಲು ಸಿದ್ಧತೆ ನಡೆಸುತ್ತಿದ್ದಾರೆ.

ಸಭೆಗಳ ನಿರ್ಣಯ ಪ್ರತಿಗಳನ್ನು ಬೆಂಗಳೂರಿನ ಕುಮಾರ ಕೃಪಾ ಅತಿಥಿ ಗೃಹದ ತನಿಖಾ ಕಚೇರಿಗೆ ಕಳುಹಿಸಿ ಕೊಡುವಂತೆ ನ್ಯಾಯಮೂರ್ತಿ ದೇಸಾಯಿ ಅವರು ಸೂಚನೆ ನೀಡಿರುವುದರಿಂದ ಮುಡಾ ಅಧಿಕಾರಿಗಳು 2006ರಿಂದ ಈವರೆಗೆ ನಡೆದಿರುವ ಪ್ರಾಧಿಕಾರದ ಸಾಮಾನ್ಯ ಸಭೆಗೆ ಮಂಡಿಸಲಾದ ವಿಷಯಗಳ ಮೇಲೆ ಚರ್ಚಿಸಿ ಕೈಗೊಂಡ ನಿರ್ಣಯಗಳ ನಡಾವಳಿ ಮೂಲ ಕಡತ ತೆಗೆದು ಹೊರಗಡೆ ಖಾಸಗಿ ಅಂಗಡಿಗಳಲ್ಲಿ ಜೆರಾಕ್ಸ್ ಮಾಡಿಸಿ ಪ್ರತಿಗಳ ಪುಸ್ತಕವನ್ನು ಬೈಂಡ್ ರೂಪದಲ್ಲಿ ತಯಾರಿಸುತ್ತಿದ್ದಾರೆ. ಸಭಾ ನಡಾವಳಿಗಳು ಸುಮಾರು 6ರಿಂದ 7 ಸಾವಿರ ಪ್ರತಿಗಳಾಗಲಿದ್ದು, ಮುಡಾ ಕಚೇರಿಯಲ್ಲಿ ಜೆರಾಕ್ಸ್ ಮಾಡಲು ಸೌಲಭ್ಯವಿಲ್ಲದ ಕಾರಣ, ಹೊರಗೆ ಖಾಸಗಿ ವ್ಯಕ್ತಿಗಳ ಮೂಲಕ ಹಣ ಪಾವತಿಸಿ ಜೆರಾಕ್ಸ್ ಮಾಡಿಸಲಾಗುತ್ತಿದೆ. ಸಿಬ್ಬಂದಿಯ ಮೂಲಕ ಒರಿಜಿನಲ್ ಕಡತಗಳನ್ನು ಕಳುಹಿಸಿ ನಾಲ್ಕೈದು ಮೆಷಿನ್ ಇರುವ ಅಂಗಡಿಗಳಲ್ಲಿ ಜೆರಾಕ್ಸ್ ಮಾಡಿಸಿ ಅಧಿಕಾರಿಗಳು ಬುಕ್ ಬೈಂಡಿಂಗ್ ಮಾಡಿಸುವ ಕಾರ್ಯದಲ್ಲಿ ಬ್ಯುಸಿಯಾಗಿದ್ದಾರೆ. ಎಲ್ಲಾ ಜೆರಾಕ್ಸ್ ಆದ ನಂತರ ಪ್ರತಿಗಳ ಬುಕ್‌ಗಳನ್ನು ವಾಹನದಲ್ಲಿ ಬೆಂಗಳೂರಿಗೆ ಕೊಂಡೊಯ್ದು ತನಿಖಾ ಕಚೇರಿಗೆ ತಲುಪಿಸಲು ತಯಾರಿ ನಡೆಸುತ್ತಿದ್ದಾರೆ.

ಸದಾ ಅನುಮಾನಪಡುತ್ತಿದ್ದ ಕೊನೆಗೊಂದು ದಿನ ಪತ್ನಿಯನ್ನು ಕೊಂದೇ ಬಿಟ್ಟ: ಹಂತಕ ಪತಿಗೆ 7 ವರ್ಷ ಜೈಲು



ಮೈಸೂರು,ಆ.12(ಜಿಎ)–ಪತ್ನಿ ಮೇಲೆ ಅನುಮಾನಗೊಂಡು ಆಕೆಯ ಕೊಲೆಗೈದಿದ್ದ ಪತಿಗೆ 7 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿ ಮೈಸೂರಿನ 7ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತೀರ್ಪು ನೀಡಿದೆ.

ನರಸಿಂಹರಾಜ ಪೊಲೀಸ್ ಠಾಣೆ ವ್ಯಾಪ್ತಿಯ ಬನ್ನಿಮಂಟಪ ಸಿ–ಬಡಾವಣೆಯ ರಾಜೇಶ್(35) ಶಿಕ್ಷೆಗೆ ಗುರಿಯಾದ ಪತಿ. ಪತ್ನಿ ರಾಧ ತನ್ನ ಗಂಡ ರಾಜೇಶ್ ಮತ್ತು ಮಕ್ಕಳೊಂದಿಗೆ ನರ ಸಿಂಹರಾಜ ಠಾಣಾ ವ್ಯಾಪ್ತಿ ಬನ್ನಿ ಮಂಟಪ ಸಿ–ಬಡಾವಣೆಯಲ್ಲಿ ವಾಸವಿದ್ದರು. ಈ ಮಧ್ಯೆ ಪತ್ನಿ ರಾಧಾ ಅವರ ಮೇಲೆ ಸದಾ ಅನುಮಾನ ಪಡುತ್ತಿದ್ದ. ಹಾಗಾಗಿ ಆಕೆಯ ಮೊಬೈಲ್ ಅನ್ನು ಕಿತ್ತುಕೊಂಡು ಇಟ್ಟುಕೊಂಡಿದ್ದ. ಅಲ್ಲದೆ ಪತ್ನಿ ರಾಧಾ ಒಳ್ಳೆ ಬಟ್ಟೆ ಹಾಕಿಕೊಂಡು ಓಡಾಡಿದರೂ ಸಹಿಸದೇ ಅನುಮಾನಪಡುತ್ತಿದ್ದ ಎನ್ನಲಾಗಿದೆ.

ಆರೋಪಿ ರಾಜೇಶ್ ಸರಿಯಾಗಿ ಕೆಲಸಕ್ಕೂ ಹೋಗದೇ, ಮನೆಯ ಖರ್ಚಿಗೆ ಹಣವನ್ನೂ ನೀಡದೇ ಸದಾ ಮನೆಯಲ್ಲಿಯೇ ಇರುತ್ತಿದ್ದ. ಪತ್ನಿ ರಾಧಾ ಈ ರೀತಿ ಕೆಲಸಕ್ಕೆ ಹೋಗದೇ ಮನೆಯಲ್ಲಿಯೇ ಇರುವುದಾದರೆ ಊರಿಗೆ ಹೋಗು ಎಂದು ಹೇಳಿದ್ದಾರೆ. ಇದರಿಂದ ಇಬ್ಬರ ಮಧ್ಯೆ ಮನಸ್ತಾಪ ಉಂಟಾಗಿದ್ದು, ಮೊದಲೇ ರಾಧಾಳ ಮೇಲೆ ಇದ್ದ ಅನುಮಾನದಿಂದ ರಾಜೇಶ್ 27–08–2022ರಂದು ಬೆಳಗಿನ ಜಾವ ಸುಮಾರು 6–30 ಗಂಟೆಯಲ್ಲಿ ಮಚ್ಚಿನಿಂದ ರಾಧಾ ಬಲಭಾಗದ ತಲೆಗೆ ತೀವ್ರವಾಗಿ ಹಲ್ಲೆ ಮಾಡಿ ಕೊಲೆಗೈದಿದ್ದ.

ಈ ಬಗ್ಗೆ ಮನೆಯ ಮಾಲೀಕರಾದ ಮಮತಾ ಅವರು ನರಸಿಂಹರಾಜ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಅಂದಿನ ಪೊಲೀಸ್ ಇನ್ಸ್‌ಪೆಕ್ಟರ್ ಅಜರುದ್ದೀನ್ ತನಿಖೆ ನಡೆಸಿ ಈತನ ವಿರುದ್ಧ ಕಲಂ 302 ಐಪಿಸಿ ರೀತ್ಯಾ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಈ ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 7ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ನ್ಯಾಯಾಧೀಶ ಎಂ.ರಮೇಶ ಅವರು ಅಭಿಯೋಜನೆ ಪರ ಹಾಜರುಪಡಿಸಿದ ಸಾಕ್ಷಿಗಳನ್ನು ಮತ್ತು ದಾಖಲಾತಿಗಳನ್ನು ಪರಿಗಣಿಸಿ ಪ್ರಕರಣದಲ್ಲಿ ಆರೋಪಿತನು ಕಲಂ 304–ಐ ಐಪಿಸಿ ರೀತ್ಯಾ ಅಪರಾಧ ಎಸಗಿರುವುದು ರುಜುವಾತಾಗಿರುವುದಾಗಿ ತೀರ್ಮಾನಿಸಿ ಆತನಿಗೆ 7 ವರ್ಷಗಳ ಕಠಿಣ ಸೆರೆಮನೆ ವಾಸ ಮತ್ತು ರೂ.1,000/– ದಂಡ ವಿಧಿಸಿ ತೀರ್ಪು ನೀಡಿದ್ದಾರೆ.

ಸದರಿ ಪ್ರಕರಣದಲ್ಲಿ ಮೈಸೂರಿನ 7ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸರ್ಕಾರಿ ಅಭಿಯೋಜಕರಾದ ಕೆ.ನಾಗರಾಜ ಸರ್ಕಾರದ ಪರ ವಾದ ಮಂಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹುಟ್ಟಹಬ್ಬ ಆಚರಣೆ



ಮೈಸೂರಿನ ಎನ್.ಆರ್.ಮೊಹಲ್ಲಾದ ಖಾಸಗಿ ಆಸ್ಪತ್ರೆಯಲ್ಲಿ ಸಿದ್ದರಾಮಯ್ಯ ಅಭಿಮಾನಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯನವರ 77ನೇ ಜನ್ಮದಿನದ ಅಂಗವಾಗಿ ರೋಗಿಗಳಿಗೆ ಹಾಲು ಹಣ್ಣು ಬ್ರೆಡ್ ವಿತರಿಸಿದರು.

ಮುಡಾ ಹಗರಣ: ಸಿದ್ದರಾಮಯ್ಯಗೆ ಶುರುವಾಯ್ತು ಮತ್ತೊಂದು ಸಂಕಷ್ಟ!



ಬೆಂಗಳೂರು, ಆಗಸ್ಟ್ 12: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಸೈಟ್ ಹಂಚಿಕೆಯಲ್ಲಿ ಭಾರೀ ಹಗರಣದ ಆರೋಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಟಿ.ಜೆ. ಅಬ್ರಹಾಂ ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ಗೆ ಖಾಸಗಿ ದೂರು ನೀಡಿದ್ದಾರೆ.

ಇದೇ ಮುಡಾ ಹಗರಣ ಸಂಬಂಧ ಸಾಮಾಜಿಕ ಕಾರ್ಯಕರ್ತ ಟಿಜೆ ಅಬ್ರಹಾಂ ಅವರು ಈಗಾಗಲೇ ರಾಜ್ಯಪಾಲರಿಗೆ ದೂರು ನೀಡಿದ್ದಾರೆ. ಈ ದೂರಿನ ಮೇರೆಗೆ ನಿಮ್ಮ ವಿರುದ್ಧ ಏಕೆ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಬಾರದು ಎಂದು ಸಿದ್ದರಾಮಯ್ಯಗೆ ಶೋಕಾಸ್ ನೋಟಿಸ್ ನೀಡಿದ್ದಾರೆ. ಇದಕ್ಕೆ ಪ್ರತಿಯಾಗಿ ಸಿದ್ದರಾಮಯ್ಯ ಸರ್ಕಾರ ಸಹ ನೋಟಿಸ್ ವಾಪಸ್ ಪಡೆದುಕೊಂಡು ಅಬ್ರಹಾಂ ಅವರ ದೂರು ತಿರಸ್ಕರಿಸಬೇಕೆಂದು ಒಂದು ಸಾಲಿನ ನಿರ್ಣಯ ಅಂಗೀಕರಿಸಿದೆ. ಹೀಗಾಗಿ ಸಿದ್ದರಾಮಯ್ಯನವರ ರಾಜಕೀಯ ಭವಿಷ್ಯ ರಾಜ್ಯಪಾಲರ ಅಂಗಳದಲ್ಲಿದ್ದು, ಅವರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುತ್ತಾರಾ ಅಥವಾ ಇಲ್ಲ ಎನ್ನುವ ಕುತೂಹಲ ಮೂಡಿಸಿದೆ.

ಅಲ್ಲದೇ ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ಗೆ ಸ್ನೇಹಮಯಿ ಕೃಷ್ಣ ಖಾಸಗಿ ದೂರು ದಾಖಲಿಸಿದ್ದು, ನಾಳೆ (ಆಗಸ್ಟ್ 13) ಖಾಸಗಿ ದೂರು ವಿಚಾರಣೆಗೆ ಸ್ವೀಕರಿಸಬೇಕೋ ಬೇಡ್ವಾ ಎನ್ನುವ ಬಗ್ಗೆ ಆದೇಶ ನೀಡುವ ಸಾಧ್ಯತೆಗಳಿವೆ. ಇದರ ಮಧ್ಯ ಇದೀಗ ಅಬ್ರಾಹಂ ಅವರು ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಸಿದ್ದರಾಮಯ್ಯ ಅವರು ಖಾಸಗಿ ದೂರು ನೀಡಿದ್ದಾರೆ. ಹೀಗಾಗಿ ಸಿದ್ದರಾಮಯ್ಯಗೆ ಮತ್ತಷ್ಟು ಸಂಕಷ್ಟ ಎದುರಾದಂತಾಗಿದೆ.

ಪ್ರಾಣಿಗಳಿಗೂ ಸ್ವತಂತ್ರವಿದೆ; ಜನರಲ್ಲಿ ಜಾಗೃತಿ ಪ್ರಯತ್ನ



ಮೈಸೂರು ಟೌನ್‌ಹಾಲ್ ಮುಂಭಾಗ ವೀಗನ್ ಕರ್ನಾಟಕ ಘಟಕದ ಪದಾಧಿಕಾರಿಗಳು ಫಲಕ ಹಿಡಿದು ಪ್ರಾಣಿಗಳಿಗೂ ಸ್ವತಂತ್ರ್ಯ ನೀಡುವ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

ಮೈಸೂರು, ಆ.12(ಎಸ್‌ಪಿಎನ್)– ಮಾನವ, ಪ್ರಾಣಿಗಳ ಮೇಲೆ ಅಧಿಪತ್ಯ ಸಾಧಿಸುವ ಬದಲು ಅವು ಸ್ವಾತಂತ್ರ್ಯವಾಗಿ ಬದುಕುವುದಕ್ಕೆ ಅವಕಾಶ ನೀಡಬೇಕು ಎಂದು ವೀಗನ್ ಕರ್ನಾಟಕ ಘಟಕದ ಪದಾಧಿಕಾರಿಗಳು ಶನಿವಾರ ಜಾಗೃತಿ ಮೂಡಿಸಿದರು.

ಮೈಸೂರು ಟೌನ್‌ಹಾಲ್ ಮುಂಭಾಗ ವೀಗನ್ ಕರ್ನಾಟಕ ಘಟಕದ ಪದಾಧಿಕಾರಿಗಳು ಬೋನಿನಲ್ಲಿ ಪದಾಧಿಕಾರಿ ನಿತಿನ್ ಅವರು, 'ನಮ್ಮ ಕ್ಷಣಿಕ ಸುಖ ಇನ್ನೊಂದು ಜೀವದ ನೋವಿಗಿಂತ ದೊಡ್ಡದಲ್ಲ' ಎಂಬ ಫಲಕ ಹಿಡಿದು ಪ್ರಾಣಿಗಳಿಗೂ ಸ್ವತಂತ್ರ್ಯ ನೀಡುವ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

ಆಗಸ್ಟ್ 15ರಂದು ನಾವು ಸ್ವಾತಂತ್ರ್ಯ ದಿನಾಚರಣೆ ಆಚರಿಸುತ್ತಿದ್ದೇವೆ. ಅದೇ ರೀತಿ ಪ್ರಾಣಿಗಳಿಗೂ ಸ್ವತಂತ್ರವಾಗಿ ಬದುಕಲು ಮಾನವ ಅವಕಾಶ ನೀಡಬೇಕು. ಹಾಲಿಗಾಗಿ ಹಸುವಿನ ಸ್ವಾತಂತ್ರ್ಯಹರಣವಾಗುತ್ತಿದೆ. ಮಾಂಸ ಸೇವನೆಗಾಗಿ ಕೋಳಿ, ಕುರಿ, ಮೇಕೆ ಸೇರಿದಂತೆ ಇತರೆ ಪ್ರಾಣಿಗಳನ್ನು ಹತ್ಯೆ ಮಾಡಲಾಗುತ್ತಿದೆ. ಇದರಿಂದ ದಿನನಿತ್ಯ ಲಕ್ಷಾಂತರ ಪ್ರಾಣಿಗಳನ್ನು ಕೊಲ್ಲಲಾಗುತ್ತಿದೆ ಎಂದು ವೀಗನ್ ಸಂಘಟನೆಯ ಸದಸ್ಯರು, ಮಾಧ್ಯಮ ಗಳಿಗೆ ತಿಳಿಸಿದರು.

ಈ ವೇಳೆ 'ವೆನ್ ವಿಲ್ ವಿ ಗೆಟ್ ಫ್ರೀಡಂ ಟು ಲೈವ್?', 'ಅನಿಮಲ್ಸ್ ಫೀಲ್ ಪೇನ್ ಜಸ್ಟ್ ಲೈಕ್ ಯು', 'ಕೇಳಲಿಲ್ಲವೇ ನನ್ನ ಅರಚಾಟ, ಕಾಣಲಿಲ್ಲವೇ ನನ್ನ ಸಂಕಟ', 'ಫ್ರೀ ಅವರ್ ಫ್ರೇಡ್ಸ್', ಸೇರಿದಂತೆ ಇತರೆ ಫಲಕಗಳನ್ನು ಪ್ರದರ್ಶಿಸಿ ಪ್ರಾಣಿಗಳಿಗೆ ಬದುಕುವ ಸ್ವಾತಂತ್ರ್ಯ ಇರಬೇಕು ಎಂದು ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಟ್ಟರು. ಈ ವೇಳೆ ವೀಗನ್ ಸಂಘಟನೆಯ ಅನುರಾಗ್, ನಿತಿನ್, ಸಿಂಚನಾ, ಸೌಮ್ಯ ಸುನಿಲ್, ಪ್ರಸನ್ನ ಮಹೇಶ್, ಮನೋಜ್ ಸೇರಿದಂತೆ ಇತರರಿದ್ದರು.

ಸಾ.ರಾ.ಮಹೇಶ್ ಹುಟ್ಟುಹಬ್ಬ ಆಚರಣೆ...



ರಾಜ್ಯ ಜನತಾದಳ (ಜಾ) ಕಾರ್ಯಾಧ್ಯಕ್ಷ ಸಾ.ರಾ.ಮಹೇಶ್ ಅವರ ಜನ್ಮದಿನದ ಅಂಗವಾಗಿ ಮೈಸೂರಿನ ಗೋಕುಲಂನಲ್ಲಿರುವ ಮಾತೃ ಮಂಡಳಿ ಶಿಶು ವಿಕಾಸ ಕೇಂದ್ರದ ವಿಶೇಷ ಮಕ್ಕಳ ಶಾಲೆಗೆ ಬಿಸಿನೀರು ಹಾಗೂ ಶುದ್ಧ ಕುಡಿಯುವ ನೀರು ಯಂತ್ರವನ್ನು ಎಸ್‌ಬಿಎಂ ಮಂಜು ಸ್ನೇಹ ಬಳಗದ ವತಿಯಿಂದ ಶಾಲೆಯ ಮುಖ್ಯಸ್ಥರಿಗೆ ವಿತರಿಸಲಾಯಿತು. ಈ ವೇಳೆ ಮಾಜಿ ಕಾರ್ಪೊರೇಟರ್ ಎಸ್‌ಬಿಎಂ ಮಂಜು, ಎಸ್‌ಬಿಎಂ ಮಂಜು ಸ್ನೇಹ ಬಳಗದ ಅಧ್ಯಕ್ಷ ಮಹದೇವ ಹನುಮೇಗೌಡ, ರಾಮಕೃಷ್ಣ, ಸತೀಶ್, ಅಭಿರಾಮ್, ಅರುಣ್ ಇನ್ನಿತರರು ಉಪಸ್ಥಿತರಿದ್ದರು.

ದೇಶ – ವಿದೇಶ

ಇಸ್ರೇಲ್ ಮೇಲೆ 'ಮಹಾ' ದಾಳಿಗೂ ಮುನ್ನ ರಕ್ಷಣಾ ಸಚಿವರನ್ನು ನೇಮಕ ಮಾಡಿದ ಇರಾನ್



ಇರಾನ್: ಹಮಾಸ್ ನಾಯಕ ಇಸ್ಮಾಯಿಲ್ ಹನಿಯೆಹ್ ಹತ್ಯೆ ನಂತರ ಕುದಿಯುತ್ತಿರುವ ಇರಾನ್ ಇದೀಗ ಇಸ್ರೇಲ್ ಮೇಲೆ ದಾಳಿ ಮಾಡುವುದಾಗಿ ಬಹಿರಂಗವಾಗಿ ಘೋಷಿಸಿದೆ.

ಇಸ್ರೇಲ್ ಮೇಲೆ ಯಾವುದೇ ಕ್ಷಣದಲ್ಲಾದರೂ ದಾಳಿ ಮಾಡುವ ನಿರ್ಧಾರಗೊಂಡಿರುವ ಇರಾನ್ ಇದೀಗ ತನ್ನ ನೂತನ ಸಚಿವ ಸಂಪುಟಕ್ಕೆ ಹಲವರ ನಾಮನಿರ್ದೇಶನ ಮಾಡಿದೆ. ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಅವರು ಈ–14 ಟಾಮ್‌ಕ್ಯಾಟ್ ಪೈಲಟ್ ಜನರಲ್ ಅಜೀಜ್ ನಾಸಿರ್ಜಾಡೆ ಅವರನ್ನು ರಕ್ಷಣಾ ಸಚಿವರಾಗಿ ಹೆಸರಿಸಿದ್ದಾರೆ. ಅಜೀಜ್ 2018–2021ರವರೆಗೆ ಇರಾನ್ ವಾಯುಪಡೆಯ ಮುಖ್ಯಸ್ಥರಾಗಿದ್ದರು. ಇರಾನ್‌ನ ವಾಯುಪಡೆಯ ಸದಸ್ಯರೊಬ್ಬರು ರಕ್ಷಾ ಸಚಿವಾಲಯದ ಮುಖ್ಯಸ್ಥರಾಗಿರುವುದು ಇದೇ ಮೊದಲು. ಅದಾಗಲೇ ಪ್ರಾಕ್ಸಿ ಯುದ್ಧ ಶುರು ಮಾಡಿರುವ ಇರಾನ್ ಹೆಜ್ಬುಲ್ಲಾ ಉಗ್ರರ ಮೂಲಕ ಇಸ್ರೇಲ್ ಮೇಲೆ ದಾಳಿ ನಡೆಸುತ್ತಿದೆ. ಆ ಮೂಲಕ ಇಸ್ರೇಲ್‌ಗೆ ಪೆಟ್ಟು ಕೊಟ್ಟು ನಂತರ ನೇರವಾಗಿ ದಾಳಿ ಮಾಡುವ ಯೋಜನೆಯಲ್ಲಿ ಇರಾನ್ ಇದೆ.

ಅಮೆರಿಕ ಪ್ರಜೆಗಳಿಂದ ಕೋಟ್ಯಾಂತರ ಡಾಲರ್ ಲೂಟಿ: ಭಾರತದ ನಕಲಿ ಕಾಲ್ ಸೆಂಟರ್‌ಗಳ ಕರಾಮತ್ತು



ಮೊಹಾಲಿ (ಪಂಜಾಬ್): ಕಳೆದ ನಾಲ್ಕು ತಿಂಗಳಿನಿಂದ ಅಮೆರಿಕ ದೇಶದ ಪ್ರಜೆಗಳಿಗೆ ತಲೆನೋವಾಗಿದ್ದ ನಕಲಿ ಕಾಲ್ ಸೆಂಟರ್‌ಗಳ ಮೇಲೆ ಪಂಜಾಬ್ ಪೊಲೀಸರು ದಾಳಿ ನಡೆಸಿದ್ದಾರೆ. ಈ ಕಾಲ್ ಸೆಂಟರ್ ಮೂಲಕ ದುಷ್ಕರ್ಮಿಗಳು ಅಮೆರಿಕ ಪ್ರಜೆಗಳನ್ನು ಸಂಪರ್ಕಿಸಿ ಅವರಿಗೆ ವಂಚನೆ ಎಸಗುತ್ತಿದ್ದರು ಎಂಬುದು ಸಾಬೀತಾಗಿದೆ.

ಇದೀಗ ಕೇವಲ ಮೂರು ನಕಲಿ ಕಾಲ್ ಸೆಂಟರ್‌ಗಳ ಮೇಲೆ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿರುವ ಮೊಹಾಲಿ ಪೊಲೀಸರು, ಇಡೀ ಜಿಲ್ಲೆಯಲ್ಲಿ ನೂರಾರು ನಕಲಿ ಕಾಲ್ ಸೆಂಟರ್‌ಗಳಿವೆ ಎಂದು ಪತ್ತೆ ಹಚ್ಚಿದ್ದಾರೆ. ಅಮೆರಿಕದ ಎಫ್‌ಬಿಐ ಕೂಡಾ ಭಾರತಕ್ಕೆ ಈ ಕುರಿತಾಗಿ ಎಚ್ಚರಿಕೆ ಸಂದೇಶ ರವಾನಿಸಿದ್ದು, ಭಾರತದ ಸೈಬರ್ ಕ್ರೈಂ ಪೊಲೀಸರು ಹಲವು ವಿಭಾಗಗಳ ಜೊತೆಗೆ ಸೇರಿ ತನಿಖೆ ನಡೆಸುತ್ತಿದ್ದಾರೆ. ದುಷ್ಕರ್ಮಿಗಳು ಭಾರತದ ಬ್ಯಾಂಕಿಂಗ್ ವ್ಯವಸ್ಥೆಗೇ ಸವಾಲೊಡ್ಡಿ ಈ ದುಷ್ಕೃತ್ಯ ಎಸಗುತ್ತಿದ್ದಾರೆ. ಅಮೆರಿಕ ಪ್ರಜೆಗಳಿಂದ ವೋಚರ್ ಅಥವಾ ಬಿಟ್ ಕಾಯಿನ್ ಮೂಲಕ ಹಣ ಸಂಗ್ರಹಿಸುತ್ತಿದ್ದಾರೆ. ಈ ಎಲ್ಲಾ ದುಷ್ಕೃತ್ಯಗಳನ್ನೂ ಪೊಲೀಸರು ಬಯಲು ಮಾಡಿದ್ದಾರೆ.


ಏಪ್ರಿಲ್‌ನಿಂದಲೇ ರಷ್ಯಾ ಸೇನೆಗೆ ಭಾರತೀಯರ ನೇಮಕಾತಿ ಸ್ಥಗಿತ



ಮಾಸ್ಕೋ: ಈ ವರ್ಷದ ಏಪ್ರಿಲ್‌ನಲ್ಲಿ ಭಾರತೀಯ ಪ್ರಜೆಗಳನ್ನು ತನ್ನ ಸಶಸ್ತ್ರ ಪಡೆಗಳಿಗೆ ನೇಮಿಸಿಕೊಳ್ಳುವುದನ್ನು ನಿಲ್ಲಿಸಿರುವುದಾಗಿ ರಷ್ಯಾ ಹೇಳಿದೆ. ಸ್ವಯಂ ಪ್ರೇರಿತವಾಗಿ ಮಿಲಿಟರಿ ಸೇವೆಗೆ ಒಪ್ಪಂದ ಮಾಡಿಕೊಂಡ ಭಾರತೀಯರನ್ನು ಶೀಘ್ರವಾಗಿ ಬಿಡುಗಡೆ ಮಾಡುವ ನಿಟ್ಟಿನಲ್ಲಿ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದೆ.

ಉಕ್ರೇನ್‌ನೊಂದಿಗಿನ ಯುದ್ಧದ ಮುಂಚೂಣಿಯಲ್ಲಿ ರಷ್ಯಾದ ಘಟಕಗಳೊಂದಿಗೆ ಸೇವೆ ಸಲ್ಲಿಸುತ್ತಿದ್ದ ಎಂಟು ಭಾರತೀಯರು ಇದುವರೆಗೆ ಕೊಲ್ಲಲ್ಪಟ್ಟಿದ್ದಾರೆ. ಈ ವರ್ಷದ ಏಪ್ರಿಲ್‌ನಿಂದ, ರಷ್ಯಾದ ಒಕ್ಕೂಟದ ರಕ್ಷಣಾ ಸಚಿವಾಲಯವು ಭಾರತ ಸೇರಿದಂತೆ ಹಲವಾರು ವಿದೇಶಿ ದೇಶಗಳ ನಾಗರಿಕರನ್ನು ರಷ್ಯಾದ ಸಶಸ್ತ್ರ ಪಡೆಗಳಲ್ಲಿ ಮಿಲಿಟರಿ ಸೇವೆಗೆ ಸೇರಿಸುವುದನ್ನು ನಿಲ್ಲಿಸಿದೆ ಎಂದು ರಷ್ಯಾದ ರಾಯಭಾರಿ ಕಚೇರಿ ಹೇಳಿಕೆಯಲ್ಲಿ ತಿಳಿಸಿದೆ. ಒಟ್ಟು 91 ಭಾರತೀಯರನ್ನು ರಷ್ಯಾದ ಸೇನೆಗೆ ನೇಮಕ ಮಾಡಿಕೊಳ್ಳಲಾಗಿದ್ದು, ಅವರಲ್ಲಿ 14 ಮಂದಿಯನ್ನು ಬಿಡುಗಡೆ ಮಾಡಲಾಗಿದೆ ಅಥವಾ ಭಾರತಕ್ಕೆ ಹಿಂತಿರುಗಿದ್ದಾರೆ ಎಂದು ಭಾರತ ವಿದೇಶಾಂಗ ಸಚಿವ ಜೈಶಂಕರ್ ಹೇಳಿದ್ದಾರೆ.

ತಿರುಮಲದಲ್ಲಿ ದ್ವಿಚಕ್ರ ವಾಹನ ಸಂಚಾರಕ್ಕೆ ನಿರ್ಬಂಧ



ತಿರುಪತಿ: ಸ್ಥಳೀಯರು, ಗಡಿ ಭಾಗದ ಭಕ್ತರು ತಿಮ್ಮಪ್ಪನ ಸನ್ನಿಧಾನಕ್ಕೆ ಬೈಕ್‌ಗಳ ಮೂಲಕ ಬರುತ್ತಾರೆ. ಅಂತಹವರಿಗೆ ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಇಂದಿನಿಂದ ಸೆಪ್ಟೆಂಬರ್ ಅಂತ್ಯದವರೆಗೆ ಬೆಟ್ಟದ ಮಾರ್ಗದಲ್ಲಿ ದ್ವಿಚಕ್ರ ವಾಹನಗಳಿಗೆ ಸಮಯ ನಿರ್ಬಂಧ ವಿಧಿಸಿ ಆದೇಶ ಹೊರಡಿಸಿದೆ. ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳು ಕಾಡು ಪ್ರಾಣಿಗಳು ಜನ್ಮ ನೀಡಿ ಹಾಲುಣಿಸುವ ತಿಂಗಳುಗಳಾಗಿವೆ. ರಾತ್ರಿಯಲ್ಲಿ ವನ್ಯಜೀವಿಗಳ ಬೇಟೆಗೆ ಅಥವಾ ಮರಿಗಳನ್ನು ಸ್ಥಳಾಂತರ ಮಾಡುವ ಚಟುವಟಿಕೆಗಳಲ್ಲಿ ತೊಡಗುತ್ತವೆ. ಮೊದಲ ಮತ್ತು ಎರಡನೇ ಘಾಟ್ ರಸ್ತೆಯಲ್ಲಿ ಕತ್ತಲಾದ ತಕ್ಷಣ ಕಾಡು ಪ್ರಾಣಿಗಳ ಚಲನೆ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ದ್ವಿಚಕ್ರ ವಾಹನ ಸವಾರಿಯನ್ನು ನಿಷೇಧಿಸಲಾಗಿದೆ. ಯಾರಾದರೂ ತಮ್ಮ ಮರಿಗಳನ್ನು ಹೊತ್ತ ವನ್ಯಜೀವಿಗಳ ಹತ್ತಿರ ಬಂದರೆ, ಅವರುಗಳ ಮೇಲೆ ಕ್ರೂರವಾಗಿ ದಾಳಿ ಮಾಡುತ್ತವೆ. ಇದರಿಂದಾಗಿ ಇಂದಿನಿಂದ ಸೆ.30ರವರೆಗೆ ಬೆಳಿಗ್ಗೆ 6ರಿಂದ ರಾತ್ರಿ 9ರವರೆಗೆ ಮಾತ್ರ ದ್ವಿಚಕ್ರ ವಾಹನಗಳಲ್ಲಿ ಪ್ರಯಾಣಿಸಬಹುದು.

ಪ್ಯಾರಿಸ್‌ನಿಂದ ತಿಗಣೆಗಳು ದೇಶ ಪ್ರವೇಶಿಸದಂತೆ ದಕ್ಷಿಣ ಕೊರಿಯಾದಲ್ಲಿ ಶ್ವಾನದಳ ನಿಯೋಜನೆ!




ಇಂಚಾನ್: ದಕ್ಷಿಣ ಕೊರಿಯಾದ ಇಂಚಾನ್ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶ್ವಾನದಳವನ್ನು ನಿಯೋಜಿಸಿದ್ದು, ಪ್ಯಾರಿಸ್ ಒಲಿಂಪಿಕ್ಸ್ ಮುಗಿಸಿ ದೇಶಕ್ಕೆ ಮರಳುತ್ತಿರುವ ಕ್ರೀಡಾಪಟುಗಳು, ಕೋಚ್ ಹಾಗೂ ಅಭಿಮಾನಿಗಳ ಮೂಲಕ ತಿಗಣೆಗಳು ದೇಶದೊಳಗೆ ನುಸುಳದಂತೆ ಎಚ್ಚರ ವಹಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಬೀಗಲ್ ತಳಿಯ 2 ವರ್ಷದ ನಾಯಿ ಕೆಕೊ ಈ ತಂಡದ ನಾಯಕ. ತಿಗಣೆಗಳು ದೇಹದಿಂದ ಹೊರಸೂಸುವ ಫೆರಮೋನ್‌ಗಳ ವಾಸನೆಯನ್ನು ಗ್ರಹಿಸುವ ತರಬೇತಿ ಪಡೆದ ದೇಶದ ಏಕೈಕ ನಾಯಿ ಕೆಕೊ. ಹೊಟೇಲ್‌ನ ಒಂದು ಕೊಠಡಿಯನ್ನು ಇದು ಕೇವಲ 2 ನಿಮಿಷಗಳಲ್ಲಿ ತಪಾಸಣೆ ನಡೆಸುವಷ್ಟರ ಮಟ್ಟಿಗೆ ಚುರುಕಾಗಿದೆ ಎಂದು ಸೆಸ್ಕೊ ಎಂಬ ಕೀಟನಿಯಂತ್ರಕ ಕಂಪನಿ ಹೇಳಿದೆ. ಇಂಚಾನ್ ವಿಮಾನ ನಿಲ್ದಾಣಕ್ಕೆ ಬಂದಿಳಿಯುವ ಪ್ರತಿಯೊಬ್ಬರ ತಪಾಸಣೆಯನ್ನು ಈ ತಂಡ ನಡೆಸಲಿದೆ. ಒಲಿಂಪಿಕ್ಸ್‌ಗೆ ಸಿದ್ಧತೆ ನಡೆಯುತ್ತಿದ್ದ ಸಂದರ್ಭದಲ್ಲಿ ಪ್ಯಾರಿಸ್‌ನಲ್ಲಿ ತಿಗಣೆ ಕಾಟದ ಕುರಿತು ಫ್ರಾನ್ಸ್ ರಾಷ್ಟ್ರದಾದ್ಯಂತ ಆತಂಕ ವ್ಯಕ್ತವಾಗಿತ್ತು. ಇವು ದೇಶವ್ಯಾಪಿ ಹರಡುವ ಭೀತಿಯನ್ನು ವ್ಯಕ್ತಪಡಿಸಿದ್ದ ಫ್ರಾನ್ಸ್, ಇವುಗಳ ನಿರ್ಮೂಲನೆಗೆ ಅಭಿಯಾನ ನಡೆಸಿತ್ತು.

ಮೈಸೂರು ಮಿತ್ರ ಮಂಗಳವಾರ 13 ಆಗಸ್ಟ್ 2024

ಕ್ರೀಡೆಗೆ ಬಂಗಾರದ ಹೆಗ್ಗುರುತು ಮೂಡಿಸಿದ ಸುಭಾಷ್ ಮುತ್ತಣ್ಣ

ಗೋಣಿಕೊಪ್ಪ, ಆ.12–ಕೊಡಗಿನಲ್ಲಿ ಕ್ರೀಡೆಯ ಸ್ವಚ್ಛ ಆಡಳಿತಗಾರ, ಸಂಘಟನೆಗಾರ, ತರಬೇತುದಾರ ಹಾಗೂ ಬಂಗಾರದ ಹೆಗ್ಗುರುತು ಮೂಡಿಸಿದ ನಿಸ್ವಾರ್ಥ ಸೇವಕ ಎಂದರೆ ಅದು ಚೆಪ್ಪುಡೀರ ಸುಭಾಷ್ ಮುತ್ತಣ್ಣನವರು.

ಚೆಪ್ಪುಡೀರ ಅಪ್ಪಣ್ಣ ಹಾಗೂ ಬೊಳ್ಳಮ್ಮ (ತಾಮನೆ ಪಾಂಡಂಡ) ದಂಪತಿ ಪುತ್ರನಾಗಿ 1946ರ ಜೂ.20ರಂದು ಸುಭಾಷ್ ಮುತ್ತಣ್ಣನವರು ಜನಿಸಿದರು. ಮಡಿಕೇರಿ ಸರ್ಕಾರಿ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮುಗಿಸಿ, ಅಲಹಾಬಾದ್‌ನಲ್ಲಿ ಬಿಎಸ್ಸಿ ಅಗ್ರಿಕಲ್ಚರ್ ಪೂರ್ಣಗೊಳಿಸಿದರು.



ಸುಭಾಷ್ ಮುತ್ತಣ್ಣ

ಕ್ರೀಡಾ ಸಾಧನೆ: ಅಲಹಾಬಾದ್ ವಿಶ್ವವಿದ್ಯಾನಿಲಯಕ್ಕೆ ಬಾಸ್ಕೆಟ್ ಬಾಲ್, ಹಾಕಿ, ಅಥ್ಲೆಟಿಕ್ಸ್‌ನಲ್ಲಿ ಉತ್ತರ ಪ್ರದೇಶವನ್ನು ಪ್ರತಿನಿಧಿಸಿದ್ದರು. ಇವರ 400 ಮೀಟರ್ ಹರ್ಡಲ್ಸ್‌ನಲ್ಲಿ ದಾಖಲೆ ನಿರ್ಮಿಸಿದ್ದರು.

ಲಯನ್ಸ್ ಕ್ಲಬ್: ಲಯನ್ಸ್ ಕ್ಲಬ್‌ನ ಚಾರ್ಟೆರ್ಡ್ ಸದಸ್ಯರಾಗಿ 1973ರಲ್ಲಿ ಸೇರಿದ ಇವರು ನಂತರದ ದಿನಗಳಲ್ಲಿ ಕ್ಲಬ್, ವಲಯ, ಜಿಲ್ಲಾಧ್ಯಕ್ಷ ಹಾಗೂ ಗವರ್ನರ್ ಆಗಿ ಪದವಿ ಅಲಂಕರಿಸಿದರು.

ಲಯನ್ಸ್ ಶಾಲೆ ಪ್ರಾರಂಭ: 1980–81ರಲ್ಲಿ ಸುಭಾಷ್, ಮನೆಯಪಂಡ ಸುಬ್ಬಯ್ಯ (ಮಣಿ) ಹಾಗೂ ದಿವಂಗತ ಕೊಳ್ಳಿಮಾಡ ಸಿ.ಮಂದಣ್ಣ ಲಯನ್ಸ್ ಶಾಲೆ ಪ್ರಾರಂಭಿಸಲು ಒಂದು ಸಂಗೀತ ರಸಮಂಜರಿಯನ್ನು ಏರ್ಪಡಿಸಿ ಅದರಿಂದ ಬಂದ ಹಣದಿಂದ ಮುಂದಿನ ಪೀಳಿಗೆಗೆ ಕ್ರೀಡೆ ಮತ್ತು ಶಿಕ್ಷಣ ಸಿಗಬೇಕೆಂಬ ದೂರದೃಷ್ಟಿಯಿಂದ ಈ ಶಾಲೆಯನ್ನು ಪ್ರಾರಂಭಿಸಲಾಯಿತು. ಇಂದು ಈ ಶಾಲೆ ಜಾತಿ–ಮತ–ಭೇದವಿಲ್ಲದ ವಿದ್ಯಾದೇಗುಲವಾಗಿದೆ. ನೂರಾರು ಮಕ್ಕಳು ಈ ಶಾಲೆಯಲ್ಲಿ ಓದಿ ಜೀವನ ರೂಪಿಸಿಕೊಂಡಿದ್ದಾರೆ. ಇಲ್ಲಿನ ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಕುಗ್ರಾಮದಿಂದ ಬಂದು ಒಲಿಂಪಿಕ್ಸ್‌ನವರೆಗೆ ಭಾರತದ ಬಾವುಟ ಹರಿಸಿದ್ದಾರೆ. ಇಂದು ದಾನದಲ್ಲಿ ಶ್ರೇಷ್ಠವಾದ ವಿದ್ಯಾದಾನದೊಂದಿಗೆ ಹೆಮ್ಮರವಾಗಿ ಲಯನ್ಸ್ ಶಾಲೆ ಬೆಳೆದು ನಿಂತಿದೆ. ಈ ಶಾಲೆಯಲ್ಲಿ ಆಸ್ಟ್ರೋ ಟರ್ಫ್ ಕೂಡ ಅಳವಡಿಸಲಾಗಿದೆ.

2 ಒಲಿಂಪಿಕ್ಸ್‌ನಲ್ಲಿ ಆಡಿದ ಹಾಕಿ ಆಟಗಾರರಾದ ವಿ.ಆರ್.ರಘುನಾಥ್ ಹಾಗೂ ಸಣ್ಣುವಂಡ ಕೆ.ಉತ್ತಪ್ಪ, ಅಂತಾರಾಷ್ಟ್ರೀಯ ಆಟಗಾರರಾದ ಮುಕ್ಕಾಟೀರ ಅಯ್ಯಪ್ಪ ಹಾಗೂ ಕುಪ್ಪಂಡ ಸೋಮಯ್ಯ, ಅಂತಾರಾಷ್ಟ್ರೀಯ ಕ್ರೀಡಾಪಟು ಸಿಂಚಲ್ ಅಂತಹ ಪ್ರತಿಭೆಗಳನ್ನು ಹೊರತಂದರು. 2012ರಲ್ಲಿ ಲಂಡನ್ ಒಲಿಂಪಿಕ್ಸ್ ನಡೆಯುವಾಗ ಸುಭಾಷ್ ಅವರು ಖುದ್ದಾಗಿ ಭಾರತ ತಂಡದ ಪರ ಆಡುತ್ತಿದ್ದ ರಘುನಾಥ್ ಹಾಗೂ ಉತ್ತಪ್ಪ ಅವರ ಆಟವನ್ನು ವೀಕ್ಷಿಸಿದರು.

9 ವರ್ಷಗಳ ಕಾಲ ಅಧ್ಯಕ್ಷರಾಗಿ ಕೂರ್ಗ್ ಹಾಕಿ ಸಂಸ್ಥೆಯನ್ನು ಮುನ್ನಡೆಸಿದರು. ಕೆಎಸ್‌ಎಚ್‌ಎಯ ಉಪಾಧ್ಯಕ್ಷರು ಕೂಡ ಆಗಿದ್ದರು. ಆ ಸಮಯದಲ್ಲಿ ಕೊಡಗು ತಂಡ ಸಿ–ಡಿವಿಷನ್‌ನಿಂದ ಎ–ಡಿವಿಷನ್ ವರೆಗೆ ಬೆಂಗಳೂರಿನ ಲೀಗ್‌ನಲ್ಲಿ ಉತ್ತೀರ್ಣಗೊಂಡರು. ಮದ್ರಾಸ್‌ನಲ್ಲಿ ಕೊಡಗಿನ ತಂಡ ಎಂಸಿಸಿ ಪಂದ್ಯಾವಳಿಯಲ್ಲಿ ಆಡಿದರು. ರಂಗಸ್ವಾಮಿ ಕಪ್ ನ್ಯಾಷನಲ್ಸ್ ಮಡಿಕೇರಿ ಹಾಗೂ ಗೋಣಿಕೊಪ್ಪದಲ್ಲಿ ನಡೆಸಿದರು. ಇನ್ವಿಟೇಶನ್ ಟೂರ್ನಮೆಂಟ್‌ಗಳಾದ ಜನರಲ್ ತಿಮ್ಮಯ್ಯ ಹಾಗೂ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಆಲ್ ಇಂಡಿಯಾ ಟೂರ್ನಮೆಂಟ್‌ಗಳನ್ನು ಮಡಿಕೇರಿಯಲ್ಲಿ ನಡೆಸಿದರು. ಇವರ ಸಮಯದಲ್ಲಿ ಮಡಿಕೇರಿಗೆ ಆಸ್ಟ್ರೋ ಟರ್ಫ್ ಅಳವಡಿಸಲಾಯಿತು. ನೆಸ್ಲೆ ಕಪ್ ಕೊಡಗಿನಾದ್ಯಂತ ನಡೆಸಿದರು. 5 ಅತಿಥೇಯ ಆಟಗಾರರನ್ನು ಆಡಿಸುವ ನಿಯಮವನ್ನು ಕಾರ್ಯರೂಪಕ್ಕೆ ತಂದರು. ಹಾಕಿ ತೀರ್ಪುಗಾರರಿಗೆ ಶಿಬಿರಗಳನ್ನು ಏರ್ಪಡಿಸಲಾಯಿತು.

ಸರಳ–ಸಜ್ಜನ ವ್ಯಕ್ತಿ, ಎಲ್ಲರ ಕಷ್ಟ ಸುಖಗಳನ್ನು ಹಂಚಿಕೊಳ್ಳುವ ಹಾಗೂ ಪ್ರತಿಯೊಬ್ಬ ಆಟಗಾರರಿಗೂ ಗೌರವ ನೀಡುವ ಅದ್ಭುತ ವ್ಯಕ್ತಿ. ಇವರ ಪತ್ನಿ ಕುಸುಮ (ತಾಮನೆ ಅಜ್ಜಿಕುಟ್ಟೀರ), ಮಕ್ಕಳಾದ ಶೀತಲ್ ಹಾಗೂ ಅಪ್ಪಣ್ಣ ಅವರೊಂದಿಗೆ ಹೊಸೂರು ಗ್ರಾಮದಲ್ಲಿ ನೆಲೆಸಿದ್ದಾರೆ. ಇವರ ವ್ಯಕ್ತಿತ್ವವನ್ನು ಬಹಳಷ್ಟು ಆಟಗಾರರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲಿ ಹಾಗೂ ಭಗವಂತನು ಇವರಿಗೆ ಒಳ್ಳೆಯ ಆರೋಗ್ಯ ಕೊಡಲಿ.

– ಚೆಪ್ಪುಡೀರ ಕಾರ್ಯಪ್ಪ, ಬಾಸ್ಕೆಟ್ ಬಾಲ್ ಕ್ಲಬ್, ಗೋಣಿಕೊಪ್ಪ

ಗೋಣಿಕೊಪ್ಪ ಬಾಸ್ಕೆಟ್ ಬಾಲ್ ಕ್ಲಬ್‌ನಲ್ಲಿ ಸ್ನೇಹ ಮಿಲನ

ಸುಮಾರು 49 ವರ್ಷಗಳ ಹಿಂದೆ ಬಾಸ್ಕೆಟ್ ಬಾಲ್ ಕ್ಲಬ್ ಸಂಸ್ಥೆಯು ಗೋಣಿಕೊಪ್ಪದಲ್ಲಿ ಪ್ರಾರಂಭವಾಯಿತು. ಅದನ್ನು ಸ್ಥಾಪಿಸಿದ ಚೆಪ್ಪುಡೀರ ಸುಭಾಷ್ ಮುತ್ತಣ್ಣನವರು ಹಲವಾರು ಕೌಶಲಭರಿತ ಬಾಸ್ಕೆಟ್ ಬಾಲ್ ಹಾಗೂ ಹಾಕಿ ಆಟಗಾರರನ್ನು ತಯಾರು ಮಾಡುತ್ತಾ ಬಂದರು. Lt.Col. ಬಾಳೆಯಡ ಸುಬ್ರಮಣಿ, ಬುಟ್ಟಿಯಂಡ ಚಂಗಪ್ಪ ಹಾಗು ಕುಪ್ಪಂಡ ನಾಚಪ್ಪ ಅವರಂತಹ ರಾಜ್ಯ ಹಾಗೂ ರಾಷ್ಟ್ರೀಯ ತಂಡಕ್ಕೆ ಆಡುವಂತಹ ಪ್ರತಿಭಾವಂತ ಆಟಗಾರರನ್ನು ಹೊರತಂದರು. ಅಂತಹ ಆಟಗಾರರೆಲ್ಲ ಇಂದು ಗೋಣಿಕೊಪ್ಪದ ಅಂತೂರ್ ಸಭಾಂಗಣದಲ್ಲಿ ಸೇರಿ ಹಳೆಯ ನೆನಪುಗಳನ್ನು ಮೆಲುಕು ಹಾಕುತ್ತಾ, ಈ ಸಂಸ್ಥೆಯನ್ನು ಇಷ್ಟು ವರ್ಷಗಳ ಕಾಲ ನಡೆಸುತ್ತಾ ಸುದೀರ್ಘ ಸೇವೆ ಸಲ್ಲಿಸಿದ ಚೆಪ್ಪುಡೀರ ಸುಭಾಷ್ ಮುತ್ತಣ್ಣನವರಿಗೆ ಶುಭ ಹಾರೈಸಿ ಸನ್ಮಾನಿಸಿದರು. ಈ ಬೆಳವಣಿಗೆಗೆ ಉತ್ತೇಜನ ಕೊಟ್ಟ ಈರ್ವರು ಮಹಾನ್ ವ್ಯಕ್ತಿಗಳಾದ ಪುಚ್ಚಿಮಾಡ ಹರೀಶ್ ದೇವಯ್ಯ, ಮುಂಡುಮಾಡ ರಾಮು ಅವರು ಹಾಗೂ ಬಾಸ್ಕೆಟ್ ಬಾಲ್ ಕ್ಲಬ್ ಉಸ್ತುವಾರಿಗಳಾದ ಮನೆಯಪಂಡ ಸುಬ್ಬಯ್ಯ, ಮೋತಿ, ಕೊಳುವಂಡ ಸುಬ್ರಮಣಿ, ಕಂಜಿತಂಡ ಪೂನ್ನು, ಒಲಿಂಪಿಯನ್ ರಘುನಾಥ್ ಅವರ ತಂದೆ ರಾಮಚಂದ್ರ, ಚೆಪ್ಪುಡೀರ ಸುಭಾಷ್ ಮುತ್ತಣ್ಣನವರ ಪತ್ನಿ ಕುಸುಮ ಸುಭಾಷ್ ಹಾಗೂ ದಿ.ಚೆಪ್ಪುಡೀರ ತಮ್ಮಿ ಮಾದಯ್ಯನವರ ಪತ್ನಿ ಅಕ್ಕವ್ವ ಮಾದಯ್ಯನವರು ಉಪಸ್ಥಿತರಿದ್ದರು.



ಗೋಣಿಕೊಪ್ಪ ಬಾಸ್ಕೆಟ್ ಬಾಲ್ ಕ್ಲಬ್ ಸದಸ್ಯರು (ಫೈಲ್ ಚಿತ್ರ).

ಈ ಸ್ನೇಹ ಮಿಲನ ಕಾರ್ಯಕ್ರಮದಲ್ಲಿ ಚೆಪ್ಪುಡೀರ ಸುಭಾಷ್ ಮುತ್ತಣ್ಣನವರು ನಡೆದು ಬಂದ ಹಾದಿ, ಹಾಕಿ ಹಾಗೂ ಬಾಸ್ಕೆಟ್ ಬಾಲ್‌ಗೆ ಸಲ್ಲಿಸಿದ ಸೇವೆ ಎಲ್ಲವನ್ನೂ ಸ್ಮರಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು Lt.Col.ಬಾಳೆಯಡ ಸುಬ್ರಮಣಿ ವಹಿಸಿದ್ದರು. ಅದ್ಭುತ ಬಾಸ್ಕೆಟ್ ಬಾಲ್ ಆಟಗಾರರಾದ ರವಿ, ವಾಣಿ, ಗೌರು, ವಿಶ್ವನಾಥ್ ಹಾಗೂ ಜ್ಯೋತಿ, ಕಲಿಯಂಡ ರಾಣಿ, ಪಳಂಗಂಡ ಸುರೇಶ್, ದೇವಯ್ಯ ಹಾಗೂ ವೀಕ್ಷಕ ವಿವರಣೆಗಾರರಾದ ಚೆಪ್ಪುಡೀರ ಕಾರ್ಯಪ್ಪ, ಮಾಲೆಟೀರ ಶ್ರೀನಿವಾಸ್ ಹಾಗೂ ಬಹಳಷ್ಟು ಯುವ ಬಿಬಿಸಿ ಆಟಗಾರರು ಉಪಸ್ಥಿತರಿದ್ದರು.

ಈ ವರ್ಷ ಕೊಡಗಿನ ಬಿರುನಾಣಿಯಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಿದ್ದರು. ಮುಂದಿನ ವರ್ಷ 50ನೇ ವಾರ್ಷಿಕೋತ್ಸವದ ಪ್ರಯುಕ್ತ ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ಬೇಸಿಗೆ ಶಿಬಿರವನ್ನು ಆಯೋಜಿಸಬೇಕು ಎಂಬುದು ಬಿಬಿಸಿ ಹಂಬಲ. ಇದು ದಕ್ಷಿಣ ಭಾರತದಲ್ಲೇ ಪುರಾತನ ಹಾಕಿ ಸಂಸ್ಥೆಯಾಗಿರುವುದು ಹೆಮ್ಮೆಯ ವಿಷಯ ಎಂದು ಮುಕ್ತ ಕಂಠದಿಂದ ಎಲ್ಲರೂ ಶ್ಲಾಘಿಸಿದರು.

–ಬಾಳೆಯಡ ಸುಬ್ರಮಣಿ, ಚೆಪ್ಪುಡೀರ ಅಪ್ಪಣ್ಣ, ಅಧ್ಯಕ್ಷರು ಮತ್ತು ಕಾರ್ಯದರ್ಶಿ, ಬಿಬಿಸಿ ಗೋಣಿಕೊಪ್ಪ

ಬಾಂಗ್ಲಾ ಹಿಂದೂಗಳ ರಕ್ಷಣೆಗೆ ಆಗ್ರಹಿಸಿ ಪ್ರತಿಭಟನೆ

ಮಡಿಕೇರಿ, ಕುಶಾಲನಗರದಲ್ಲಿ ಹಿಂದೂಪರ ಸಂಘಟನೆ ಕಾರ್ಯಕರ್ತರಿಂದ ಮಾನವ ಸರಪಳಿ

ಮಡಿಕೇರಿ, ಆ.12–ಬಾಂಗ್ಲಾದಲ್ಲಿ ನಡೆಯುತ್ತಿರುವ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ಮತ್ತು ಹಿಂದೂಗಳ ಸುರಕ್ಷತೆಗೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಹಿಂದೂ ಹಿತ ರಕ್ಷಣಾ ಸಮಿತಿ ಹಾಗೂ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಸೋಮವಾರ ಮಡಿಕೇರಿ ಹಾಗೂ ಕುಶಾಲನಗರದಲ್ಲಿ ಪ್ರತಿಭಟನೆ ನಡೆಸಿದರು.



ಬಾಂಗ್ಲಾ ಹಿಂದೂಗಳ ರಕ್ಷಣೆಗೆ ಆಗ್ರಹಿಸಿ ಮಡಿಕೇರಿಯಲ್ಲಿ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಡಿಕೇರಿ: ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಮಾನವ ಸರಪಳಿ ರಚಿಸಿದ ಪ್ರತಿಭಟನಾಕಾರರು, ಹಿಂದೂಗಳ ರಕ್ಷಣೆ ನಮ್ಮೆಲ್ಲರ ಹೊಣೆ. ಬಾಂಗ್ಲಾ ಅಕ್ರಮ ವಲಸಿಗರನ್ನು ದೇಶದಿಂದ ಹೊರ ಹಾಕಬೇಕು. ಇಲ್ಲವಾದಲ್ಲಿ ಬಾಂಗ್ಲಾದಲ್ಲಿ ನಡೆದಂತಹ ಅರಾಜಕತೆ ಮಾದರಿಯ ದಂಗೆ ದೇಶದಲ್ಲೂ ನಡೆಯಬಹುದು ಎಂದು ಆತಂಕ ವ್ಯಕ್ತಪಡಿಸಿದರು.

ಬಾಂಗ್ಲಾದಲ್ಲಿ ಹಿಂದೂ ಸಮುದಾಯವನ್ನು ಗುರಿಯಾಗಿಸಿಕೊಂಡು ನಡೆಸಲಾಗುತ್ತಿರುವ ದೌರ್ಜನ್ಯ ಹತ್ತಿಕ್ಕಲು ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕ ಕೆ.ಜಿ. ಬೋಪಯ್ಯ, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ನಗರಸಭಾ ಮಾಜಿ ಅಧ್ಯಕ್ಷೆ ಅನಿತಾ ಪೂವಯ್ಯ, ಪಕ್ಷ ಪ್ರಮುಖರಾದ ಮಹೇಶ್ ಜೈನಿ, ಮನು ಮಂಜುನಾಥ್, ಸತೀಶ್ ಪೈ ಹಾಗೂ ಹಿಂದೂಪರ ಸಂಘಟನೆಗಳ ಪ್ರಮುಖರು ಭಾಗವಹಿಸಿದ್ದರು.

ಕುಶಾಲನಗರ: ಬಾಂಗ್ಲಾ ಕಿಡಿಗೇಡಿಗಳ ವಿರುದ್ಧ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಪಟ್ಟಣದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ಪ್ರತಿಭಟನೆ ನಡೆಸಿದರು.

ಇದೇ ವೇಳೆ ಬಾಂಗ್ಲಾದಲ್ಲಿ ಮೃತಪಟ್ಟ ಹಿಂದೂಗಳಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಮಾಜಿ ಶಾಸಕ ಅಪ್ಪಚ್ಚು ರಂಜನ್, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಬಿ.ಬಿ.ಭಾರತೀಶ್, ಮುಖಂಡರಾದ ವಿ.ಕೆ.ಲೋಕೇಶ್, ಸಂತೋಷ್, ಆರ್.ಕೆ. ಚಂದ್ರು, ರಕ್ಷಿತ್ ಮಾವಾಜಿ, ಚರಣ್, ಮಧುಸೂದನ್, ಭಾಸ್ಕರ್ ನಾಯಕ್ ಮತ್ತಿತರರು ಭಾಗವಹಿಸಿದ್ದರು.

ಅಖಂಡ ಭಾರತ ಸಂಕಲ್ಪ ಸಂದೇಶದ ಜಾಥಾ

ಗೋಣಿಕೊಪ್ಪ, ಆ.12–ಪೊನ್ನಂಪೇಟೆ ತಾಲೂಕು ಹಿಂದೂ ಜಾಗರಣ ವೇದಿಕೆ ವತಿಯಿಂದ ಪೊನ್ನಂಪೇಟೆಯಿಂದ ಗೋಣಿಕೊಪ್ಪವರೆಗೆ ಸೋಮವಾರ ನಡೆದ ಜಾಥಾದಲ್ಲಿ 400ಕ್ಕೂ ಹೆಚ್ಚು ವಾಹನಗಳ ಮೂಲಕ ಅಖಂಡ ಭಾರತ ಸಂಕಲ್ಪ ಸಂದೇಶ ಸಾರಲಾಯಿತು.

ಪೊನ್ನಂಪೇಟೆ ಕೊಡವ ಸಮಾಜದಿಂದ ಆರಂಭಗೊಂಡ ಜಾಥಾದಲ್ಲಿ ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನಗಳು ಪಾಲ್ಗೊಂಡಿದ್ದವು. ಗೋಣಿಕೊಪ್ಪ ಬೈಪಾಸ್ ಮಾರ್ಗವಾಗಿ ಉಮಾಮಹೇಶ್ವರಿ ದೇವಸ್ಥಾನ ವೃತ್ತದಿಂದ ಮುಖ್ಯರಸ್ತೆಯಲ್ಲಿ ಸಾಗಿದ ಜಾಥಾ, ಹರಿಶ್ಚಂದ್ರಪುರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಲ್ಲಿ ಮುಕ್ತಾಯವಾಯಿತು. ಇದೇ ವೇಳೆ ಕೇಸರಿ ಧ್ವಜ ರಾರಾಜಿಸಿದವು. ತಿತಿಮತಿ, ಹಾತೂರು, ಪಾಲಿಬೆಟ್ಟ, ಪೊನ್ನಂಪೇಟೆ ರಸ್ತೆಯಲ್ಲಿ ವಾಹನಗಳ ಸಂಚಾರ ಸ್ಥಗಿತಗೊಳಿಸಲಾಗಿತ್ತು. ಇದರಿಂದ ವಾಹನಗಳು ಸಾಲು ಸಾಲಾಗಿ ನಿಂತಿದ್ದವು. ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು.



ಗೋಣಿಕೊಪ್ಪದಲ್ಲಿ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ವಾಹನ ಜಾಥಾ ನಡೆಸಿದರು.

ನಂತರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಸಭಾಂಗಣದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ವಿಎಚ್‌ಪಿ ನಿಕಟಪೂರ್ವ ಪ್ರಾಂತ ಗೋರಕ್ಷಕ ಪ್ರಮುಖ್ ಮುರಳಿಕೃಷ್ಣ ಹಸಂತಡ್ಕ ಮಾತನಾಡಿದರು. ನಿವೃತ್ತ ಬ್ಲ್ಯಾಕ್ ಕ್ಯಾಟ್ ಕಮಾಂಡೊ ಕ್ಯಾಪ್ಟನ್ ಮಲ್ಲೇಂಗಡ ಎಂ.ಪೂಣಚ್ಚ, ಆರ್‌ಎಸ್‌ಎಸ್ ಚಾಲಕ ಚೆಕ್ಕೇರ ಮನು ಕಾವೇರಪ್ಪ, ಹಿಂದೂ ಜಾಗರಣ ವೇದಿಕೆ ಜಿಲ್ಲಾ ಸಹ ಪ್ರಮುಖ್ ಅಲ್ಲುಮಾಡ ಶರತ್ ಪೆಮ್ಮಯ್ಯ, ತಾಲೂಕು ಸಂಯೋಜಕ ಸುಳ್ಳಿಮಾಡ ಪಿ.ಸಂಪತ್, ಲೋಹಿತ್ ಭೀಮಯ್ಯ ಇದ್ದರು.

ಬ್ಯಾಂಕ್ ಗ್ರಾಹಕರಿಗೆ ಜಾಗೃತಿ ಜಾಥಾ



ಚಾಮರಾಜನಗರದಲ್ಲಿ ಇಂಡಿಯನ್ ಬ್ಯಾಂಕ್ ಶಾಖೆಯಿಂದ ಗ್ರಾಹಕರ ಜಾಗೃತಿ ಜಾಥಾ ನಡೆಯಿತು.

ಚಾಮರಾಜನಗರ, ಆ.12– ಇಂಡಿಯನ್ ಬ್ಯಾಂಕ್ ಸ್ಥಾಪನೆಗೊಂಡು 118 ವರ್ಷ ತುಂಬಿದ ಹಿನ್ನೆಲೆಯಲ್ಲಿ ನಗರದಲ್ಲಿ ಬ್ಯಾಂಕ್ ಸಿಬ್ಬಂದಿ ಗ್ರಾಹಕರ ಜಾಗೃತಿ ಜಾಥಾ ನಡೆಸಿದರು.

ಮ್ಯಾನೇಜರ್ ಕೆ.ಅಭಿಲಾಷ್ ನೇತೃತ್ವದಲ್ಲಿ ಚಾಮರಾಜೇಶ್ವರ ದೇವಸ್ಥಾನ ಮುಂಭಾಗದಿಂದ ಹೊರಟ ಜಾಥಾ, ಬಿ.ರಾಚಯ್ಯ ಜೋಡಿರಸ್ತೆ ಮಾರ್ಗವಾಗಿ ಬ್ಯಾಂಕ್ ತಲುಪಿತು. ಸಾರ್ವಜನಿಕರಿಗೆ ಕರಪತ್ರ ವಿತರಿಸಿ, ಬ್ಯಾಂಕ್ ಸೇವೆ ಬಗ್ಗೆ ಅರಿವು ಮೂಡಿಸಲಾಯಿತು.

ಕೆ.ಅಭಿಲಾಷ್ ಮಾತನಾಡಿ, ಇಂಡಿಯನ್ ಬ್ಯಾಂಕ್ ಸ್ಥಾಪನೆಯಾಗಿ 118 ವಸಂತ ಪೂರೈಸುವ ಮೂಲಕ ಗ್ರಾಹಕರಿಗೆ ಉತ್ತಮ ಸೇವೆ ನೀಡುತ್ತಿದೆ. ಅದೇ ರೀತಿ ಚಾಮರಾಜನಗರ ಶಾಖೆ ಆರಂಭಗೊಂಡು 50 ವರ್ಷ ಪೂರ್ಣಗೊಂಡಿದೆ. ಸಾರ್ವಜನಿಕರು ಬ್ಯಾಂಕ್‌ನಲ್ಲಿ ಖಾತೆ ತೆರೆದು ಉತ್ತಮ ಸೇವೆ ಪಡೆದುಕೊಳ್ಳಿ. ಕೃಷಿ, ಮನೆ, ಚಿನ್ನದ ಮೇಲೆ ಕಡಿಮೆ ಬಡ್ಡಿ ಸಾಲ, ವಾಹನ, ಶಿಕ್ಷಣ ಸಾಲ ಸೇರಿದಂತೆ ಸರ್ಕಾರಿ ಸವಲತ್ತುಗಳನ್ನು ಪಡೆದುಕೊಳ್ಳಲು ಬ್ಯಾಂಕ್ ಶಾಖೆ ಸಂಪರ್ಕಿಸುವಂತೆ ಮನವಿ ಮಾಡಿದರು.

ಜಾಥಾದಲ್ಲಿ ನಾಗವಳ್ಳಿ ಶಾಖೆ ವ್ಯವಸ್ಥಾಪಕ ಎಂ. ಅರುಣ್‌ಕುಮಾರ್, ಚಾ.ನಗರ ಶಾಖೆ ಸಹಾಯಕ ವ್ಯವಸ್ಥಾಪಕ ಸಂಜಯ್ ಕುಮಾರ್ ಕಾಸಿಯಪ್, ಗ್ರಾಮೀಣ ಕ್ಷೇತ್ರಾಧಿಕಾರಿ ಎಚ್.ಜ್ಯೋತಿ, ಕ್ಯಾಷಿಯರ್ ಎ.ಆರ್.ಶ್ರೀದೇವಿ ಅರಸು, ಆದಿತ್ಯ ಬಿರ್ಲಾ ಸನ್‌ಲೈಫ್ ಇನ್ಸೂರೆನ್ಸ್ ಕಂಪನಿಯ ಎಚ್.ಇಂದುಮತಿ, ಶಿವಶಂಕರ ಕುಮಾರ್, ಸಿಬ್ಬಂದಿ ಶಿವಕುಮಾರ್ ಆರ್.ನಟರಾಜು, ಎಸ್.ನಟರಾಜು, ಎನ್.ಕುಮಾರ್ ಉತ್ತುವಳ್ಳಿ, ಬಿ.ಕಮಲ ಮೊದಲಾದವರು ಇದ್ದರು.

ಯುವಕರು ದೇಶದ ಸತ್ಪ್ರಜೆಗಳಾಗಬೇಕು

ಅಂತಾರಾಷ್ಟ್ರೀಯ ಯುವ ದಿನಾಚರಣೆಯಲ್ಲಿ ನ್ಯಾಯಾಧೀಶ ಈಶ್ವರ್ ಸಲಹೆ

ಚಾಮರಾಜನಗರ, ಆ.12–ದೇಶದ ಬೆನ್ನೆಲುಬಾದ ಯುವಕರು ಸತ್ಪ್ರಜೆಗಳಾಗಿ ರೂಪುಗೊಳ್ಳಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಈಶ್ವರ್ ಸಲಹೆ ನೀಡಿದರು.

ನಗರದ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಆರೋಗ್ಯ ಇಲಾಖೆ, ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ಯುವಜನ ಮತ್ತು ಕ್ರೀಡಾ ಇಲಾಖೆ, ನೆಹರು ಯುವ ಕೇಂದ್ರ, ರೆಡ್ ರಿಬ್ಬನ್ ಕ್ಲಬ್ ಹಾಗೂ ಯುವ ರೆಡ್‌ಕ್ರಾಸ್ ಘಟಕದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಯುವ ದಿನಾಚರಣೆ ಹಾಗೂ ಹೆಚ್‌ಐವಿ, ಏಡ್ಸ್ ಅರಿವು ಮಾಸಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಯುವಕರನ್ನು ಜಾಗೃತಗೊಳ್ಳಿಸುವ ಸಲುವಾಗಿ ಪ್ರತಿವರ್ಷ ಆ.12ರಂದು ಅಂತಾರಾಷ್ಟ್ರೀಯ ಯುವ ದಿನ ಆಚರಿಸಲಾಗುತ್ತಿದೆ. ಸಮಾಜ ಕಟ್ಟುವ ಕಾಯಕಕ್ಕೆ ಯುವಕರು ಭದ್ರ ಬುನಾದಿಯಾಗಿದ್ದಾರೆ. ಇಂದಿನ ಯುವಕರು ಯಾವುದೇ ದುಶ್ಚಟಗಳಿಗೆ ಒಳಗಾಗದೆ ಉತ್ತಮ ಶಿಕ್ಷಣ, ಆರೋಗ್ಯ ಹೊಂದಬೇಕು. ಸ್ವಾಮಿ ವಿವೇಕಾನಂದರು ಹೇಳಿರುವಂತೆ ಏಳಿ, ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ ಎಂಬ ಘೋಷಣೆಯಂತೆ ಯುವಕರು ಗುರಿ ಕಡೆ ಛಲದಿಂದ ಮುನ್ನಡೆಯಬೇಕು ಎಂದರು. ಹೆಚ್‌ಐವಿಯಿಂದ ದೇಹದಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆಯಾಗಿ ಅನಾರೋಗ್ಯ ಉಂಟಾಗಲಿದೆ. ಹೆಚ್‌ಐವಿ ಸೋಂಕಿತರನ್ನು ಸಮಾಜದಲ್ಲಿ ಮಾನವೀಯತೆಯಿಂದ ನೋಡಿಕೊಳ್ಳಬೇಕು. ಬದುಕುವ ಹಕ್ಕು ಅವರಿಗೂ ಇದ್ದು, ಎಲ್ಲರಂತೆ ಅವರನ್ನು ಸಮಾನವಾಗಿ ಕಾಣಬೇಕು. ಹೆಚ್‌ಐವಿ ಸೋಂಕಿತರು ಉತ್ತಮ ಜೀವನ ಶೈಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.



ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಯುವ ದಿನಾಚರಣೆಯನ್ನು ನ್ಯಾಯಾಧೀಶ ಈಶ್ವರ್ ಉದ್ಘಾಟಿಸಿದರು.

> “ಯುವ ಜನಾಂಗಕ್ಕೆ ಹೆಚ್‌ಐವಿ ಏಡ್ಸ್ ಬಗ್ಗೆ ಅರಿವು ಮೂಡಿಸುವುದರಿಂದ ಸೋಂಕು ಹರಡುವುದನ್ನು ತಡೆಗಟ್ಟಬಹುದು. ಹೆಚ್‌ಐವಿ ಮತ್ತು ಏಡ್ಸ್ ಬಗ್ಗೆ ಯುವಕರು ಸಂಪೂರ್ಣ ಜಾಗೃತರಾಗಿ ಇತರರಿಗೂ ಅರಿವು ಮೂಡಿಸಬೇಕು.
>
> –ಎಸ್.ಚಿದಂಬರ, ಜಿಲ್ಲಾ ಆರೋಗ್ಯಾಧಿಕಾರಿ.

ಜಿಲ್ಲಾ ಕ್ಷಯ ರೋಗ ನಿರ್ಮೂಲನಾ ಹಾಗೂ ಏಡ್ಸ್ ನಿಯಂತ್ರಣಾಧಿಕಾರಿ ಡಾ.ಎಂ.ಎಸ್.ರವಿಕುಮಾರ್, ಜೆಎಸ್‌ಎಸ್ ಮಹಿಳಾ ಕಾಲೇಜಿನ ಪ್ರಾಂಶುಪಾಲ ಡಾ.ಎನ್.ಮಹದೇವಸ್ವಾಮಿ ಮಾತನಾಡಿದರು.

ಯುವ ರೆಡ್‌ಕ್ರಾಸ್ ಸಂಸ್ಥೆ ನಿರ್ದೇಶಕ ಉಮೇಶ್, ಸಂಚಾಲಕ ಮಹೇಶ್, ನೆಹರು ಯುವ ಕೇಂದ್ರದ ಸತೀಶ್ ಪಡುಓಲೆ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ದೊರೆಸ್ವಾಮಿ ನಾಯಕ್ ಇನ್ನಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮಹಂತಾಳಪುರದಲ್ಲಿ ಬೋನಿಗೆ ಬಿದ್ದ ಚಿರತೆ

ಚಾಮರಾಜನಗರ, ಆ.12–ತಾಲೂಕಿನ ಸಂತೇಮರಹಳ್ಳಿ ಸಮೀಪದ ಮಹಂತಾಳಪುರ ಗ್ರಾಮದ ಬಳಿಯ ಕ್ವಾರಿ ಬಳಿ ಅರಣ್ಯ ಇಲಾಖೆಯವರು ಇಟ್ಟಿದ್ದ ಬೋನಿನಲ್ಲಿ ಚಿರತೆ ಸೆರೆಯಾಗಿದೆ.

ಗ್ರಾಮದ ಕರಿಕಲ್ಲು ಕ್ವಾರಿ ಬಳಿ 3 ದಿನಗಳ ಹಿಂದೆ ಜೋಡಿ ಚಿರತೆಗಳು ಕಾಣಿಸಿಕೊಂಡಿದ್ದವು. ಈ ಹಿನ್ನೆಲೆಯಲ್ಲಿ ಗ್ರಾಮಸ್ಥರು ಆತಂಕಗೊಂಡು ಅರಣ್ಯ ಇಲಾಖೆಯವರಿಗೆ ಮಾಹಿತಿ ನೀಡಿದ್ದರು. ಬಳಿಕ ಬೋನು ಇಡಲಾಗಿತ್ತು. ಭಾನುವಾರ ರಾತ್ರಿ ಬೋನಿಗೆ ಚಿರತೆಯೊಂದು ಬಿದ್ದಿದ್ದು, ಮತ್ತೊಂದು ಚಿರತೆ ತಪ್ಪಿಸಿಕೊಂಡಿದೆ. ಮತ್ತೊಂದು ಚಿರತೆಗೆ ಅರಣ್ಯ ಸಿಬ್ಬಂದಿ ಕ್ರಮ ವಹಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.



ಪ್ಲಾಸ್ಟಿಕ್ ಬಳಕೆ: ಬಾರ್, ರೆಸ್ಟೋರೆಂಟ್‌ಗಳಿಗೆ ದಂಡ

ಚಾಮರಾಜನಗರ, ಆ.12– ನಗರಸಭೆ ಪೌರಾಯುಕ್ತ ಎಸ್.ವಿ. ರಾಮದಾಸ್ ನೇತೃತ್ವದ ಅಧಿಕಾರಿಗಳ ತಂಡ ಸೋಮವಾರ ದಾಳಿ ನಡೆಸಿ, ಸ್ವಚ್ಛತೆ ಕಾಪಾಡದ ಹಾಗೂ ಪ್ಲಾಸ್ಟಿಕ್ ಬಳಕೆ ಮಾಡುತ್ತಿದ್ದ ನಗರದ ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ದಂಡ ವಿಧಿಸಿದೆ.

ಬೆಳಗ್ಗೆಯಿಂದಲೇ ದಾಳಿ ನಡೆಸಿದ ಅಧಿಕಾರಿಗಳು ಬಾರ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಲಾಗಿದೆಯೇ, ನಗರಸಭೆಯಿಂದ ಪರವಾನಗಿ ಹೊಂದಿದ್ದಾರೆಯೇ, ಪರವಾನಗಿ ನವೀಕರಿಸಲಾಗಿದೆಯೇ ಕುರಿತು ಪರಿಶೀಲಿಸಿದರು. ಈ ವೇಳೆ ಪರವಾನಗಿ ಪಡೆಯದ, ಪ್ಲಾಸ್ಟಿಕ್ ಲೋಟ ಹಾಗೂ ಕವರ್‌ಗಳನ್ನು ಬಳಸುತ್ತಿದ್ದ ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ 7 ಸಾವಿರ ರೂ. ದಂಡ ವಿಧಿಸಿ ನೋಟಿಸ್ ನೀಡಿದರು.

ಪರವಾನಗಿ ಪಡೆಯದ ಬಾರ್ ಮತ್ತು ರೆಸ್ಟೋರೆಂಟ್ ಮಾಲೀಕರು ಶೀಘ್ರ ನಗರಸಭೆಯಿಂದ ಪರವಾನಗಿ ಪಡೆದುಕೊಳ್ಳಬೇಕು. ಇಲ್ಲದಿದ್ದಲ್ಲಿ ಅಬಕಾರಿ ಇಲಾಖೆಗೆ ಮಾಹಿತಿ ನೀಡಿ ಕ್ರಮಕ್ಕೆ ಶಿಫಾರಸು ಮಾಡಲಾಗುವುದೆಂದು ನಗರಸಭೆ ಪೌರಾಯುಕ್ತ ಎಸ್.ವಿ. ರಾಮದಾಸ್ ಎಚ್ಚರಿಕೆ ನೀಡಿದರು.



ಪ್ಲಾಸ್ಟಿಕ್ ಬಳಸುತ್ತಿದ್ದ ಬಾರ್‌ಗಳಿಗೆ ನಗರಸಭೆ ಅಧಿಕಾರಿಗಳು ದಂಡ ವಿಧಿಸಿದರು.

ವೇತನ ಹೆಚ್ಚಳಕ್ಕೆ ಆಗ್ರಹಿಸಿ ಕಿರಿಯ ವೈದ್ಯರಿಂದ ಪ್ರತಿಭಟನೆ



ಚಾಮರಾಜನಗರ ಸಿಮ್ಸ್ ಆಸ್ಪತ್ರೆ ಮುಂಭಾಗ ವೇತನ ಹೆಚ್ಚಳಕ್ಕೆ ಆಗ್ರಹಿಸಿ ವೈದ್ಯರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಆ.12–ವೇತನ ಹೆಚ್ಚಳಕ್ಕೆ ಆಗ್ರಹಿಸಿ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ ಕಿರಿಯ ವೈದ್ಯರ ಸಂಘದಿಂದ ನಗರದ ಯಡಪುರ ಸಮೀಪದ ಸಿಮ್ಸ್ ಆಸ್ಪತ್ರೆ ಮುಂಭಾಗ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಹಲವು ವರ್ಷಗಳಿಂದ ಸಿಮ್ಸ್‌ನಲ್ಲಿ ಕಿರಿಯ ಹಾಗೂ ನಿವಾಸಿ ವೈದ್ಯರಾಗಿ ಸೇವಾ ಮನೋಭಾವದೊಂದಿಗೆ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಲಾಗುತ್ತಿದೆ. ಆದರೆ, ಸಕಾಲಕ್ಕೆ ವೇತನ ನೀಡುತ್ತಿಲ್ಲ. ಜೊತೆಗೆ ವೇತನ ಹೆಚ್ಚಳ ಮಾಡುತ್ತಿಲ್ಲ. ಇದರಿಂದ ಕಾರ್ಯನಿರ್ವಹಿಸುತ್ತಿರುವ ಕಿರಿಯ ವೈದ್ಯರಿಗೆ ತೊಂದರೆಯಾಗುತ್ತಿದೆ ಎಂದು ಸಂಘದ ಅಧ್ಯಕ್ಷ ಡಾ.ಪವನ್ ದೂರಿದರು.

ಕರ್ನಾಟಕ ನಿವಾಸಿ ವೈದ್ಯರ ಸಂಘ ಹಾಗೂ ವೈದ್ಯ ಸಮುದಾಯ ಪರವಾಗಿ ಈಗಾಗಲೇ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಇದೀಗ ಶಾಂತಿಯುತ ಪ್ರತಿಭಟನೆ ಮೂಲಕ ಸರ್ಕಾರದ ಗಮನ ಸೆಳೆಯಲಾಗುತ್ತಿದೆ. ನಮ್ಮ ಆರ್ಥಿಕ ಬಿಕ್ಕಟ್ಟು ಹಾಗೂ ಹಲವು ಸಮಸ್ಯೆಗಳು ಸರ್ಕಾರಕ್ಕೆ ಮನವರಿಕೆ ಮಾಡಲಾಗಿದೆ ಎಂದು ಪ್ರತಿಭಟನಾಕಾರರು ತಿಳಿಸಿದರು.

ಪ್ರತಿಭಟನೆಯಲ್ಲಿ ಡಾ.ಸ್ನೇಹಾ, ಡಾ. ನಂದಕಿಶೋರ್, ಡಾ. ತರುಣ್, ಡಾ. ದೀಪಾ ಮಿಶ್ರ, ಡಾ. ಚೇತನ್, ಡಾ. ಗೌತಮ್, ಡಾ. ಸಂಜು ಮತ್ತಿತರರು ಇದ್ದರು.

ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ಪ್ರತಿಭಟನೆ

ಚಾಮರಾಜನಗರ, ಆ.12–ಬಾಂಗ್ಲಾದಲ್ಲಿ ನಡೆಯುತ್ತಿರುವ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ನಗರದಲ್ಲಿ ಸೋಮವಾರ ಹಿಂದೂ ಹಿತರಕ್ಷಣಾ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಚಾಮರಾಜೇಶ್ವರ ದೇವಸ್ಥಾನ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು, ಅಲ್ಲಿಂದ ಭುವನೇಶ್ವರಿ ವೃತ್ತದವರೆಗೆ ಮೆರವಣಿಗೆ ನಡೆಸಿದರು. ನಂತರ ಭುವನೇಶ್ವರಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಪ್ರತಿಭಟಿಸಿದರು.

ಬಾಂಗ್ಲಾದಲ್ಲಿ ನಡೆಯುತ್ತಿರುವ ಹಿಂದೂಗಳ ಮೇಲಿನ ದೌರ್ಜನ್ಯ ತಕ್ಷಣ ನಿಲ್ಲಿಸಬೇಕು. ಅವರ ರಕ್ಷಣೆಗೆ ಮುಂದಾಗಬೇಕು. ಬಾಂಗ್ಲಾ ಅಕ್ರಮ ಲಕ್ಷಾಂತರ ವಲಸಿಗರು ಭಾರತದಲ್ಲಿ ಇದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಪಶ್ಚಿಮಬಂಗಾಳ ಮತ್ತು ಅಸ್ಸಾಂನಲ್ಲಿ ಇದರ ಅನುಭವಗಳು ಆಗಿವೆ. ಸಿಎಎಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಎಂದು ಆಗ್ರಹಿಸಿದರು.



ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ಚಾಮರಾಜನಗರದಲ್ಲಿ ಹಿಂದೂ ಹಿತರಕ್ಷಣಾ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ಸಮಿತಿಯ ಶ್ರೀಕಂಠು, ಕೃಷ್ಣಪ್ಪ, ಮಂಜುನಾಥಗೌಡ, ವಿರಾಟ್ ಶಿವು, ಬಾಲಸುಬ್ರಹ್ಮಣ್ಯಂ, ರಾಜು, ರಾ.ಸತೀಶ್, ಕುಮಾರ್, ಶ್ರೀನಿವಾಸ್ ಮಂಜುನಾಥ್, ಬಂಗಾರು, ವಿಜಯೇಂದ್ರ, ಗುರು ಇತರರು ಭಾಗವಹಿಸಿದ್ದರು.

ಮೂರನೇ ಪುಟದಿಂದ

ಅದ್ಧೂರಿ ದಸರಾ ಆಚರಣೆ

ಸಂಗೀತ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸ್ಥಳೀಯ ಕಲಾವಿದರಿಗೆ ಹೆಚ್ಚು ಆದ್ಯತೆ ನೀಡಿ, ಸ್ತಬ್ಧಚಿತ್ರಗಳನ್ನು ಅನಗತ್ಯವಾಗಿ ತುಂಬ ಬೇಡಿ. ರಾಜ್ಯದ ಸಂಸ್ಕೃತಿ, ಅಭಿವೃದ್ಧಿ ಬಿಂಬಿಸುವಂತಹ ಸ್ತಬ್ಧಚಿತ್ರಗಳು ಇರಬೇಕು, ಪ್ರತಿ ಸ್ತಬ್ಧಚಿತ್ರ ಜನರಿಗೆ ಸಂದೇಶ ನೀಡುವಂತಿರಬೇಕು ಈ ಬಗ್ಗೆ ಎಚ್ಚರ ವಹಿಸಿ.

ಎಲ್ಲಿಯೂ ಲೋಪಗಳು ಉಂಟಾಗಬಾರದು, ದಸರಾ ಆಚರಣೆ ಸಂಬಂಧ ಅವಶ್ಯಕತೆಗೆ ಅನುಗುಣವಾಗಿ ಉಪಸಮಿತಿಗಳನ್ನು ರಚಿಸಿ ಕಾರ್ಯಕ್ರಮಗಳನ್ನು ಆಯೋಜಿಸಿ. ದಸರಾ, ವಿಜಯದಶಮಿ, ಅರಮನೆ ಆವರಣದಲ್ಲಿ ಜಂಬೂ ಸವಾರಿ ಹಾಗೂ ಬನ್ನಿಮಂಟಪದಲ್ಲಿ ಪಂಜಿನ ಕವಾಯತು ಕಾರ್ಯಕ್ರಮ ವೀಕ್ಷಣೆಗೆ ಈ ಹಿಂದಿನಂತೆ ಟಿಕೆಟ್ ಹಾಗೂ ಗೋಲ್ಡ್ ಕಾರ್ಡ್ ವಿತರಿಸಿ.

ಗಣ್ಯರಿಗೆ ಅಗತ್ಯಕ್ಕೆ ತಕ್ಕಂತೆ ಪಾಸ್‌ಗಳನ್ನು ವಿತರಿಸಿ, ನೂಕು ನುಗ್ಗಲಿಗೆ ಅವಕಾಶ ಮಾಡಿಕೊಡಬೇಡಿ. ಏನೇ ಮಾಡಿದರೂ ಎಚ್ಚರಿಕೆಯಿಂದ ಮುಂದಿನ ಹೆಜ್ಜೆಗಳನ್ನು ಇಡಿ. ಚಾಮುಂಡಿ ತಾಯಿ ಕೃಪೆಯಿಂದ ಉತ್ತಮ ಮಳೆಯಾಗಿ ಬರಗಾಲದ ಛಾಯೆ ಅಳಿಸಿದೆ, ಮುಂದಿನ ದಿನಗಳಲ್ಲಿ ಉತ್ತಮ ಬೆಳೆಯಾಗಿ ರಾಜ್ಯದ ಸಂಪನ್ಮೂಲವೂ ವೃದ್ಧಿಸಲಿದೆ. ಈ ನಾಡ ಹಬ್ಬವನ್ನು ಸಡಗರ, ಸಂಭ್ರಮ ದಿಂದ ಆಚರಿಸೋಣ, ಪ್ರವಾಸಿಗರ ಆಕರ್ಷಣೆಗಾಗಿ ಮೈಸೂರು ನಗರವನ್ನು ಮತ್ತಷ್ಟು ಸೌಂದರ್ಯಗೊಳಿಸುವುದು ಹಾಗೂ ಜಿಲ್ಲೆಯ ಸುತ್ತಮುತ್ತಲಿನ ಪ್ರವಾಸಿ ತಾಣಗಳಿಗೆ ಸಂಪರ್ಕ ಕಲ್ಪಿಸುವಲ್ಲಿ ಆದ್ಯತೆ ಕೊಡಿ ಎಂದು ತಿಳಿಸಿದ್ದಾರೆ.

ಪ್ರಾಧಿಕಾರ ರಚನೆ ಅಸಂವಿಧಾನಿಕ

ಅವರು, ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಮತ್ತು ಚಾಮುಂಡಿ ಬೆಟ್ಟದ ಇತರ ದೇವಾಲಯಗಳು ಹಿಂದಿನ ರಾಜಮನೆತನದ ಖಾಸಗಿ ಆಸ್ತಿಗಳಾಗಿವೆ ಆದಾಗ್ಯೂ ದೇವಸ್ಥಾನ ಮತ್ತು ಅದರ ಆಸ್ತಿಗಳನ್ನು ಮುಜರಾಯಿ ಇಲಾಖೆ ವ್ಯಾಪ್ತಿಗೆ ತಂದು ಕಾನೂನು ಬಾಹಿರವಾಗಿ ಸ್ವಾಧೀನಪಡಿಸಿಕೊಳ್ಳಲು ರಾಜ್ಯ ಸರ್ಕಾರ ನಡೆಸಿದ ಪ್ರಯತ್ನಗಳನ್ನು ಮಹಾರಾಜರು ವಿರೋಧಿಸಿ, 2001ರಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ಹೈಕೋರ್ಟ್‌ನಲ್ಲಿ ಬಾಕಿ ಇದೆ. ಹೀಗಿರುವಾಗ ಸರ್ಕಾರವು ಮಾಲೀಕತ್ವ ಹೊಂದಲು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ–2024 ಜಾರಿಗೊಳಿಸಿರುವುದು ಅಸಂವಿಧಾನಿಕ ಎಂದು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ ಎಂದು ತಿಳಿಸಿದರು.

ರಾಜ್ಯ ಸರ್ಕಾರ ಕಳೆದ ಮಾ.7ರಂದು ಶ್ರೀಕ್ಷೇತ್ರ ಚಾಮುಂಡೇಶ್ವರಿ ಬೆಟ್ಟ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಹೊಸ ಕಾಯಿದೆ ಜಾರಿಗೆ ತಂದಿದೆ. ಆ ಮೂಲಕ ಚಾಮುಂಡೇಶ್ವರಿ ದೇವಾಲಯದ ಮೇಲೆ ರಾಜಮನೆತನದ ಅಧಿಕಾರ ಮೊಟಕುಗೊಳಿಸುವ ಪ್ರಯತ್ನ ನಡೆಸಿದೆ. ಇದನ್ನು ಪ್ರಶ್ನಿಸಿ ನಾವು ಜುಲೈ 19ರಂದು ಹೈಕೋರ್ಟ್‌ಗೆ ರಿಟ್ ಸಲ್ಲಿಸಿದ್ದು, ಇದಕ್ಕೆ ತಡೆಯಾಜ್ಞೆ ನೀಡಿ ಜು.26ರಂದು ಆದೇಶ ಪ್ರಕಟಿಸಲಾಗಿತ್ತು. ಆಗಸ್ಟ್ 2ರಂದು ಆ ಆದೇಶವನ್ನು ನ್ಯಾಯಾಲಯ ದೃಢೀಕರಿಸಿದೆ. ಅದರನ್ವಯ ಶ್ರೀ ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಪ್ರಸ್ತುತ ಅಸ್ತಿತ್ವವಿಲ್ಲ ಎಂದು ಹೇಳಿದರು.

ಚಾಮುಂಡಿಬೆಟ್ಟ ಖಾಸಗಿ ಆಸ್ತಿ: ಮೈಸೂರು ಮಹಾರಾಜರು ಮತ್ತು ಭಾರತ ಸರ್ಕಾರದ ನಡುವಿನ 1950ರ ಒಪ್ಪಂದದಲ್ಲಿ ಪಟ್ಟಿ ಮಾಡಲಾಗಿರುವ ಖಾಸಗಿ ಆಸ್ತಿಗಳ ಪಟ್ಟಿಯಲ್ಲಿ ಚಾಮುಂಡಿಬೆಟ್ಟವೂ ಸೇರಿದೆ. 1972ರಲ್ಲಿ ಸಂವಿಧಾನದ 26ನೇ ತಿದ್ದುಪಡಿಯಲ್ಲಿ ರಾಜಮನೆತನಗಳು ಸಲ್ಲಿಸಿದ್ದ ಆಸ್ತಿಯ ವಿವರಗಳ ಪಟ್ಟಿಯನ್ನು ಉರ್ಜಿತಗೊಳಿಸಲು ಅಂದಿನ ಕೇಂದ್ರ ಸರ್ಕಾರದ ಸಚಿವಾಲಯ ದೇಶದ ಎಲ್ಲಾ ರಾಜ್ಯ ಸರ್ಕಾರಗಳಿಗೆ ಸುತ್ತೋಲೆ ಹೊರಡಿಸಿದೆ. ಮೈಸೂರು ಮಹಾರಾಜರ ಖಾಸಗಿ ಆಸ್ತಿಗಳ ಪಟ್ಟಿಯಲ್ಲಿ ಚಾಮುಂಡಿಬೆಟ್ಟ ಶೀರ್ಷಿಕೆಯಡಿ ಚಾಮುಂಡೇಶ್ವರಿ ದೇವಸ್ಥಾನ ಹಾಗೂ ಹೊಂದಿಕೊಂಡಂತಿರುವ ನಿರ್ಮಾಣಗಳು, ರಾಜೇಂದ್ರ ವಿಲಾಸ ಅರಮನೆ ಹಾಗೂ ಹೊಂದಿಕೊಂಡ ಇತರೆ ಕಟ್ಟಡಗಳು, ನಾರಾಯಣಸ್ವಾಮಿ ದೇವಸ್ಥಾನ, ಜ್ವಾಲಾಮುಖಿ ದೇವಸ್ಥಾನ, ಮಹಾಬಲೇಶ್ವರ ದೇವಸ್ಥಾನ, ದೇವಿಕೆರೆ, ಬಸವ, 3 ಪಂಪ್ ಹೌಸ್‌ಗಳು ಹೀಗೆ ಹಲವು ಆಸ್ತಿಗಳ ವಿವರ ನೀಡಲಾಗಿದೆ. ಖಾಸಗಿ ಆಸ್ತಿ ಪಟ್ಟಿಗೆ ಅಂದಿನ ಸರ್ಕಾರದ ಮುಖ್ಯ ಕಾರ್ಯದರ್ಶಿಗಳೂ ಸಹಿ ಹಾಕಿ ಅನುಮೋದಿಸಿದ್ದಾರೆ. ಚಾಮುಂಡಿಬೆಟ್ಟ ಖಾಸಗಿ ಆಸ್ತಿ ಎಂದು ಸರ್ಕಾರಕ್ಕೂ ಗೊತ್ತಿದೆ. ಆದ್ದರಿಂದಲೇ ಪ್ರಾಧಿಕಾರ ರಚನೆ ಮಾಡಲಾಗಿದೆ. ಈ ಕಾಯ್ದೆಯ ಮೂಲಕ ಸಂವಿಧಾನದ 14, 19, 21, 25 ಮತ್ತು 26ನೇ ವಿಧಿಗಳ ಉಲ್ಲಂಘಿಸಲಾಗಿದೆ ಎಂದರು.

ಕಾಯ್ದೆ ನಿಯಮ ಕಳವಳಕಾರಿ: ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ವಿಶಿಷ್ಟ ಹಾಗೂ ವಿಶೇಷವಾದ ಸಂಪ್ರದಾಯ ಅನುಸರಿಸುತ್ತಿದ್ದು, ರಾಜಮನೆತನದವರೊಂದಿಗೆ ಈ ಕ್ಷೇತ್ರ ಅವಿಭಾಜ್ಯವಾಗಿದೆ. ಆದರೆ ಪ್ರಾಧಿಕಾರ ಕಾಯ್ದೆ ಮೂಲಕ ಸರ್ಕಾರ ದೇವಾಲಯದ ಮಾಲೀಕತ್ವ, ನಿಯಂತ್ರಣ ಮತ್ತು ನಿರ್ವಹಣೆ ಹಾಗೂ ದೇವಾಲಯದ ಚರ ಮತ್ತು ಸ್ಥಿರ ಆಸ್ತಿಗಳನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದೆ. ದೇವಾಲಯಗಳನ್ನು ಪ್ರವಾಸಿ ಕೇಂದ್ರಗಳಾಗಿ ಪರಿವರ್ತಿಸಲು ಪ್ರಯತ್ನಿಸುತ್ತಿದೆ. ಆ ಮೂಲಕ ಧಾರ್ಮಿಕ ಭಾವನೆಗಳನ್ನು ಕಡೆಗಣಿಸಲಾಗಿದೆ. ಕಾಯಿದೆಯಲ್ಲಿನ ನಿಬಂಧನೆಗಳು ಹೆಚ್ಚು ನಿರಂಕುಶ, ಅಸಮಂಜಸವಾಗಿವೆ. ಅಧಿಕಾರಿಗಳಿಗೆ ಅಂತಿಮ ಅಧಿಕಾರವನ್ನು ನೀಡುವುದು ಸಮರ್ಥನೀಯವಲ್ಲ. ದೇವಾಲಯದ ಕಾಣಿಕೆಗಳು ಇತರೆ ಕಾಣಿಕೆಗಳನ್ನು ಸರ್ಕಾರ ಅಥವಾ ಅಧಿಕಾರಿಗಳು ತಮ್ಮ ಇಚ್ಛೆ ಮತ್ತು ಅಭಿಲಾಷೆಗಳಿಗೆ ಅನುಗುಣವಾಗಿ ಸ್ವಾಧೀನಪಡಿಸಿಕೊಳ್ಳಲು ಕಾಯ್ದೆ ಅನುಮತಿ ನೀಡುತ್ತದೆ ಎಂಬುದು ಅತ್ಯಂತ ಕಳವಳಕಾರಿಯಾಗಿದೆ ಎಂದು ಹೇಳಿದರು.

ಎಲ್ಲಾ ಸರಕಾರದಿಂದಲೂ ತೊಂದರೆ: ಇಡೀ ಮೈಸೂರು ನಮ್ಮದೆಂದು ಹೇಳುತ್ತಿಲ್ಲ. ಒಪ್ಪಂದದ ವೇಳೆ ಖಾಸಗಿ ಆಸ್ತಿಗಳೆಂದು ಪಟ್ಟಿ ಮಾಡಿದ್ದರ ಆಧಾರದಲ್ಲಿ ಮುಂದುವರೆದಿದ್ದೇವೆ. ನಮ್ಮ ಮನೆ ದೇವರ ಕ್ಷೇತ್ರವನ್ನು ಬೇರೊಬ್ಬರು ನಮ್ಮದೆಂದರೆ ಒಪ್ಪಲಾಗದು. ನಾನು ವೈಯಕ್ತಿಕವಾಗಿ ಹಾಗೂ ರಾಜಕೀಯವಾಗಿ ಯಾರನ್ನೂ ದೂರುವುದಿಲ್ಲ. ಸ್ವಾತಂತ್ರ್ಯ ಬಂದಾಗಿನಿಂದ ಈವರೆಗಿನ ಎಲ್ಲಾ ಸರ್ಕಾರಗಳಿಂದಲೂ ಒಂದಿಲ್ಲೊಂದು ರೀತಿಯಲ್ಲಿ ತೊಂದರೆಯಾಗಿದೆ. ನಮ್ಮ ಕುಟುಂಬವನ್ನು ಸರ್ಕಾರಗಳು ಒಂದು ರೀತಿ ವೈರಿಯ ರೀತಿ ಕಾಣಲು ಕಾರಣವೇನೆಂದು ತಿಳಿದಿಲ್ಲ. ನಮಗೆ ಅನ್ಯಾಯವಾದರೆ ಅಥವಾ ತೊಂದರೆಯಾದರೆ ರಕ್ಷಣೆ ಮಾಡಿಕೊಳ್ಳುವ ಕೆಲಸವನ್ನು ಮಾಡುತ್ತಿದ್ದೇನೆ. ನಾಲ್ಕು ಲೀಗಲ್ ಟೀಂಗಳ ಮೂಲಕ ಕಾನೂನು ಹೋರಾಟ ನಡೆಸಲಾಗುತ್ತಿದೆ. ತಿಂಗಳಲ್ಲಿ ನಾಲ್ಕೈದು ಬಾರಿ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೇನೆ ಎಂದು ಬಾವುಕರಾಗಿ ನುಡಿದರು.

ನಮಗೂ ಪರಿಹಾರ ನೀಡಲಿ: ಸರ್ವೆ ನಂ.4ಕ್ಕೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟ್‌ನಲ್ಲೂ ನಮ್ಮ ಪರವಾಗಿ ತೀರ್ಪು ಬಂದಿದೆ. ಆದರೆ ನ್ಯಾಯಾಲಯದ ಆದೇಶ ಅನುಷ್ಠಾನ ಮಾಡಿಲ್ಲ. ಭೂಮಿ ಮಾಲೀಕರ ಗಮನಕ್ಕೆ ಬಾರದೆ ಬಡಾವಣೆ ನಿರ್ಮಾಣ ಮಾಡಿರುವ ಪ್ರಕರಣಗಳಲ್ಲಿ ಪರ್ಯಾಯ ಭೂಮಿ ಅಥವಾ ಪರಿಹಾರ ನೀಡಬೇಕೆಂಬ ನಿಯಮ ಇದೆ. ನಮಗೆ ಆ ಕಾನೂನು ಅನ್ವಯವಾಗುವುದಿಲ್ಲವೇ. ಒಂದು ಕಡೆ ನಮ್ಮ 225 ಎಕರೆ ಭೂಮಿಯಲ್ಲಿ ಬಡಾವಣೆ ಇದೆ. ಹಾಗಾದರೆ ನಮಗೆ ನಷ್ಟ ತುಂಬಿಸುವವರು ಯಾರು? ಎಂದು ಪ್ರಶ್ನಿಸಿದರು.

ತಜ್ಞರಿಂದ ಪರಿಶೀಲನಾ ವರದಿ

ರಚಿಸಿ ವರದಿ ಪಡೆಯಲಾಗುವುದು. ಸಮಿತಿಯು ಅಣೆಕಟ್ಟುಗಳ ಸ್ಥಿತಿಗತಿ, ಏನಾದರೂ ಲೋಪಗಳಿದ್ದಲ್ಲಿ, ದುರಸ್ತಿ ಕೈಗೊಳ್ಳಬೇಕಿದ್ದಲ್ಲಿ, ಬದಲಾವಣೆಗಳೂ ಸೇರಿದಂತೆ ಎಲ್ಲ ಮಾಹಿತಿಯನ್ನು ವರದಿಯಲ್ಲಿ ನೀಡಲಿದೆ ಇದರ ಆಧಾರದ ಮೇಲೆ ನಾವು ಅಣೆಕಟ್ಟುಗಳ ಸುರಕ್ಷತೆಗೆ ಮತ್ತಷ್ಟು ಕ್ರಮ ತೆಗೆದುಕೊಳ್ಳುತ್ತೇವೆ. ಅಣೆಕಟ್ಟೆಗಳ ನಿರ್ವಹಣೆ ಮಾಡುತ್ತಿರುವ ಅಧಿಕಾರಿಗಳಿಂದ ತಾತ್ಕಾಲಿಕವಾಗಿ ಅಲ್ಲಿನ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಪಡೆದಿರುವುದಾಗಿ ಶಿವಕುಮಾರ್ ತಿಳಿಸಿದರು. ಕೃಷ್ಣರಾಜ ಅಣೆಕಟ್ಟೆಯಲ್ಲಿ ಯಾವುದೇ ಲೋಪವಿಲ್ಲ, ನಾನೇ ಖುದ್ದಾಗಿ ಎಲ್ಲವನ್ನೂ ಪರಿಶೀಲಿಸಿದ್ದೇನೆ, ಕೆಲವರು ರೈತರನ್ನು ಆತಂಕಕ್ಕೆ ಈಡು ಮಾಡಲು ಇಲ್ಲಸಲ್ಲದ ಹೇಳಿಕೆ ನೀಡುತ್ತಿದ್ದಾರೆ ಎಂದರು.

ತುಂಗಭದ್ರಾ ಡ್ಯಾಂನ ಒಂದು ಗೇಟ್‌ನ ಸರಪಳಿ ತುಂಡಾಗಿದ್ದರಿಂದ ಅನಾಹುತ ಸಂಭವಿಸಿದೆ, ದುರಸ್ತಿ ಕಾರ್ಯ ಮತ್ತು ಹೊಸ ಕ್ರೆಸ್ಟ್‌ಗೇಟ್ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಜಿಂದಾಲ್ ಕಂಪನಿ ಸಹಕಾರದೊಂದಿಗೆ ಗೇಟ್ ನಿರ್ಮಾಣ ಕಾರ್ಯ ತ್ವರಿತಗತಿಯಲ್ಲಿ ನಡೆಯುತ್ತಿದೆ, ಅಣೆಕಟ್ಟೆಯಿಂದ 40 ಟಿಎಂಸಿಯಷ್ಟು ನೀರು ಹರಿದ ನಂತರವೇ ನಾವು ಹೊಸ ಕ್ರೆಸ್ಟ್‌ಗೇಟ್ ಕೂಡಿಸಲು ಸಾಧ್ಯ, ಸದ್ಯಕ್ಕೆ ಏನೂ ಮಾಡಲಾಗದು, ಒಂದಷ್ಟು ನೀರು ಹರಿದುಹೋಗಲಿದೆ ಆದರೆ, ಕನಿಷ್ಠ ಒಂದು ಬೆಳೆಗಾದರೂ ನೀರನ್ನು ಉಳಿಸುವ ಪ್ರಯತ್ನ ಮಾಡುತ್ತಿದ್ದೇವೆ. ತುಂಗಾಭದ್ರಾ ಅಣೆಕಟ್ಟೆಯ ಪರಿಶೀಲನೆ ಖುದ್ದಾಗಿ ವೀಕ್ಷಿಸಿದ್ದು 70 ವರ್ಷ ಹಳೆಯದಾದ ಸರಪಳಿ ತುಂಡಾಗಿದ್ದರಿಂದ ಕ್ರೆಸ್ಟ್‌ಗೇಟ್ ಮುರಿದಿದೆ, ಬೇರೆ ಅಣೆಕಟ್ಟೆಗಳಲ್ಲಿ ಪ್ರತಿ ಕ್ರೆಸ್ಟ್‌ಗೇಟ್‌ಗೆ ಎರಡು ಸರಪಳಿಗಳಿರುತ್ತವೆ, ಇಲ್ಲಿ ಒಂದೇ ಸರಪಳಿ ಮೇಲೆ ನಿಂತಿದ್ದರಿಂದ ಈ ಅನಾಹುತ ಸಂಭವಿಸಿದೆ ಎಂದರು. ಘಟನೆಗೆ ಯಾರನ್ನೂ ಹೊಣೆ ಮಾಡುವುದಿಲ್ಲ, ಮೊದಲು ಕ್ರೆಸ್ಟ್‌ಗೇಟ್ ಕೂರಿಸುವ ಕೆಲಸ ಮಾಡಲಾಗುವುದು ಎಂದರು.

ನಿರ್ದೇಶಕರಾಗಿ ಸತೀಶ್ ತಿಪಟೂರು

ಜಿಲ್ಲೆ ತಿಪಟೂರಿನವರಾಗಿದ್ದು, ಇಂಜಿನಿಯರಿಂಗ್ ಪದವೀಧರರಾದರೂ ರಂಗಭೂಮಿ ಮೇಲಿನ ಆಸಕ್ತಿಯಿಂದಾಗಿ ಬೆಂಗಳೂರಿನ 'ಅಭಿನಯ ತರಂಗ' ಕಲಾ ಶಾಲೆಯಲ್ಲಿ ಒಂದು ವರ್ಷದ ರಂಗ ತರಬೇತಿ ಪಡೆದುಕೊಂಡರು. ನಂತರ ಹೆಗ್ಗೋಡಿನ ನೀನಾಸಂನಲ್ಲಿ ಡಿಪ್ಲೊಮಾ ಮಾಡಿದ ಅವರು, ಕಳೆದ 25 ವರ್ಷದಿಂದ ತಿಪಟೂರನ್ನು ಕೇಂದ್ರವಾಗಿರಿಸಿಕೊಂಡು ತಮ್ಮದೇ 'ಭೂಮಿ ಥಿಯೇಟರ್' ಮೂಲಕ ನಟನೆ, ನಿರ್ದೇಶನ, ಶಿಕ್ಷಣ, ಸಂಘಟನೆ ಚಟುವಟಿಕೆಗಳನ್ನು ನಿರ್ವಹಿಸಿಕೊಂಡು ಬರುತ್ತಿದ್ದಾರೆ.

'ಚಮ್ಮಾರನ ಚಾಲುಕಿ ಹೆಂಡತಿ', 'ಚಿತ್ರದ ಬೆನ್ನು', 'ಗೋಡೆಗಳು', 'ಆಮನಿ', 'ನೀಲಿ ಕುದುರೆ', 'ಹಕ್ಕಿಹಾಡು', 'ಪಂಜರ ಶಾಲೆ', 'ಹುಡುಕಾಟ', 'ಮೈನ ಹಕ್ಕಿ ಹಾಡು', 'ಸಾಹೇಬರು ಬರುತ್ತಾರೆ', 'ಮಣ್ಣಿನ ಮನೆ' ಮುಂತಾದ ನಾಟಕಗಳನ್ನು ನಿರ್ದೇಶನ ಮಾಡಿರುವ ಸತೀಶ್ ತಿಪಟೂರು, ಹಗ್ಗದ ಕೊನೆ, ಆಷಾಢಭೂತಿ, ಬೆಕ್ಕುಬಾವಿ, ಸಾಂಬಶಿವ ಪ್ರಹಸನ, ಒಂದು ಪಯಣದ ಕಥೆ, ಸಾಹೇಬರು ಬರುತ್ತಾರೆ, ಭಟ್ಟರ ಮಗಳು ಮತ್ತು ಮಾಸತಿ ಸೇರಿದಂತೆ ಹಲವು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಹಾಗೆಯೇ 'ಮಣ್ಣಿನ ಬಂಡಿಯಲಿ' ಕುವೋಕಾ', 'ಮಣ್ಣಿನ ಮನೆ' ನಾಟಕ ಪುಸ್ತಕಳು ಪ್ರಕಟಗೊಂಡಿದ್ದು, ಇವರ 'ನಮ್ಮೂರಿನ ಸ್ಮತಿ ಕಥನಗಳಲ್ಲಿ ರಂಗಭೂಮಿಯ ವಿಕಾಸದ ನೆಲೆಗಳು' ಸಂಶೋಧನಾ ಪ್ರಬಂಧಕ್ಕೆ ನಾಟಕ ಅಕಾಡೆಮಿಯ ಫೆಲೋಷಿಪ್ ದೊರೆತಿದೆ.

ಬೃಹತ್ ಮೈಸೂರು ಮಹಾನಗರ ಪಾಲಿಕೆಯನ್ನಾಗಿ ಮೇಲ್ದರ್ಜೆಗೇರಿಸಿ

ಮುಖ್ಯಮಂತ್ರಿಗಳಿಗೆ ಶಾಸಕ ಜಿ.ಟಿ.ದೇವೇಗೌಡರಿಂದ ಮನವಿ ಸಲ್ಲಿಕೆ

ಮೈಸೂರು,ಆ.12(ಪಿಎಂ)–ಮೈಸೂರು ಮಹಾನಗರ ಪಾಲಿಕೆಯನ್ನು ಬೃಹತ್ ಮೈಸೂರು ಮಹಾನಗರ ಪಾಲಿಕೆಯನ್ನಾಗಿ ಮೇಲ್ದರ್ಜೆಗೇರಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶಾಸಕ ಜಿ.ಟಿ.ದೇವೇಗೌಡರು ಮನವಿ ಸಲ್ಲಿಸಿದರು.

ಬೆಂಗಳೂರಿನ ವಿಧಾನಸೌಧದಲ್ಲಿ ಸೋಮವಾರ ನಡೆದ ದಸರಾ ಮಹೋತ್ಸವ 2024ರ ಉನ್ನತ ಸಮಿತಿ ಸಭೆಯಲ್ಲಿ ಭಾಗವಹಿಸಿದ್ದ ಶಾಸಕರು ಇದೇ ವೇಳೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು. ಮೈಸೂರು ನಗರಕ್ಕೆ ಹೊಂದಿಕೊಂಡಿರುವ ಬಡಾವಣೆಗಳನ್ನು ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡಿಸಿ, ಮೇಲ್ದರ್ಜೆಗೇರಿಸಬೇಕೆಂದು ಗೌಡರು ತಮ್ಮ ಮನವಿಯಲ್ಲಿ ಕೋರಿದ್ದಾರೆ.

ಮೈಸೂರು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರ. ಇದರ ಹೊರ ವರ್ತುಲ ರಸ್ತೆ ಒಳಗೆ ಬರುವ ಮೈಸೂರು ತಾಲೂಕಿನ ಗ್ರಾಮಗಳಲ್ಲಿ ಹೆಚ್ಚಿನ ಪ್ರಮಾಣದ ಜನಸಂಖ್ಯೆ ಇದ್ದು, ಈ ವ್ಯಾಪ್ತಿಯ ಹೆಚ್ಚಿನ ಬಡಾವಣೆಗಳು ಸಹ ಅಭಿವೃದ್ಧಿಗೊಂಡಿವೆ. ಇಲ್ಲಿನ ನಿವಾಸಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಿದ್ದು, ಈ ನಿಟ್ಟಿನಲ್ಲಿ ಸದರಿ ಬಡಾವಣೆಗಳನ್ನು ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡಿಸುವುದು ಅಗತ್ಯವಾಗಿದೆ. ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಅಧಿನಿಯಮ–1976ರ ಸೆಕ್ಷನ್ 4 ಮತ್ತು ಸೆಕ್ಷನ್ 500ರಲ್ಲಿ ದೊಡ್ಡ ನಗರ ಪ್ರದೇಶಗಳಲ್ಲಿ ಕೆಲವೊಂದು ನಗರಸಭೆ, ಪಟ್ಟಣ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಪ್ರದೇಶಗಳನ್ನು ಸೇರಿಸಿಕೊಳ್ಳಲು ಮತ್ತು ಕೈಬಿಡಲು ಅವಕಾಶ ಕಲ್ಪಿಸಲಾಗಿದೆ.

ಮೈಸೂರು ನಗರಪಾಲಿಕೆಯನ್ನು ಮೇಲ್ದರ್ಜೆಗೇರಿಸುವ ಸಂಬಂಧ ಎಲ್ಲೆಯನ್ನು ಗುರುತಿಸಿ, 2018ರ ವಾರ್ಡ್‌ಗಳ ಪುನರ್ ವಿಂಗಡಣೆಯನ್ನು (Delimitaion) ಪರಿಗಣನೆಗೆ ತೆಗೆದುಕೊಂಡು



ಬೆಂಗಳೂರಿನ ವಿಧಾನಸೌಧದಲ್ಲಿ ಸೋಮವಾರ ನಡೆದ ದಸರಾ ಉನ್ನತ ಸಮಿತಿ ಸಭೆಯಲ್ಲಿ ಬೃಹತ್ ಮೈಸೂರು ಮಹಾನಗರ ಪಾಲಿಕೆಯನ್ನಾಗಿ ಮೇಲ್ದರ್ಜೆಗೇರಿಸುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಶಾಸಕ ಜಿ.ಟಿ.ದೇವೇಗೌಡರು ಮನವಿ ಸಲ್ಲಿಸಿದರು.

ಹಾಲಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಗ್ರಾಪಂ, ಪಪಂ, ಮತ್ತು ನಗರಸಭೆ ಸೇರಿದಂತೆ 9 ಸ್ಥಳೀಯ ಸಂಸ್ಥೆಗಳನ್ನು ಸೇರಿಸಿಕೊಳ್ಳಬೇಕಿದೆ.

ಹಾಲಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯು 86.31 ಕಿ.ಮೀ. ಇದ್ದು, ಹೂಟಗಳ್ಳಿ ನಗರಸಭೆ (29.70 ಚ.ಕಿ.ಮೀ.), ಶ್ರೀರಾಂಪುರ ಪಪಂ (17.84 ಚ.ಕಿ.ಮೀ.), ರಮ್ಮನಹಳ್ಳಿ ಪಪಂ (22.11 ಚ.ಕಿ.ಮೀ.), ಕಡಕೋಳ ಪಪಂ (34.71 ಚ.ಕಿ.ಮೀ.), ಬೋಗಾದಿ ಪಪಂ (35.50 ಚ.ಕಿ.ಮೀ.), ಚಾಮುಂಡಿಬೆಟ್ಟ ಗ್ರಾಪಂ (6.00 ಚ.ಕಿ.ಮೀ.), ಸಿದ್ದಲಿಂಗಪುರ ಗ್ರಾಪಂ (14.70 ಚ.ಕಿ.ಮೀ.), ಇಲವಾಲ ಗ್ರಾಪಂ (20.76 ಚ.ಕಿ.ಮೀ.) ಮತ್ತು ಆಲನಹಳ್ಳಿ ಗ್ರಾಪಂ (5.69 ಚ.ಕಿ.ಮೀ.)ಗಳನ್ನು ಪಾಲಿಕೆ ವ್ಯಾಪ್ತಿ ಸೇರ್ಪಡೆ ಮಾಡಿಕೊಳ್ಳಬೇಕಿದೆ.

ಮೇಲ್ಕಂಡ ಪ್ರದೇಶಗಳ ಪೈಕಿ ಸರ್ಕಾರದಿಂದ ಅನುಮೋದನೆಗೊಂಡಿರುವ 2018ರ ವಾರ್ಡ್‌ಗಳ ಪುನರ್ ವಿಂಗಡಣೆ (Delimitaion) ಅನ್ವಯ ಹೂಟಗಳ್ಳಿ, ರಮ್ಮನಹಳ್ಳಿ ಮತ್ತು ಶ್ರೀರಾಂಪುರ ಪ್ರದೇಶದ ಭಾಗಶಃ ಗ್ರಾಮಗಳು ಪಾಲಿಕೆ ಎಲ್ಲೆಯೊಳಗೆ ಬರುತ್ತಿದ್ದು, ಸರ್ಕಾರದ ಅಧಿಸೂಚನೆ ಅನ್ವಯ ಪಾಲಿಕೆಯ ವಾರ್ಡ್ ನಂ. 1, 2, 3, 4, 5, 20ರ ಹೆಬ್ಬಾಳು ಪ್ರದೇಶವು ಹೂಟಗಳ್ಳಿ ನಗರಸಭೆ ವ್ಯಾಪ್ತಿಗೆ ಸೇರಿದೆ. ವಾರ್ಡ್ ನಂ.35ರ ಸಾತಗಳ್ಳಿ ಪ್ರದೇಶವು ರಮ್ಮನಹಳ್ಳಿ ಪಪಂಗೆ ಹಾಗೂ ವಾರ್ಡ್ ನಂ. 65ರ ಶ್ರೀರಾಂಪುರ ಪ್ರದೇಶವು ಶ್ರೀರಾಂಪುರ ಪಪಂಗೆ ಸೇರಿದೆ.

ಈ ಸಂಬಂಧ ಸರ್ಕಾರದಿಂದ ಅನುಮೋದನೆಗೊಂಡಿರುವ–2018ರ ವಾರ್ಡ್ ಪುನರ್ ವಿಂಗಡಣೆ (Delimitaion) ಅನ್ವಯ ಪಾಲಿಕೆ ವ್ಯಾಪ್ತಿಯೊಳಗೆ ಸೇರಿರುವ ಪ್ರದೇಶಗಳನ್ನು ಕೈಬಿಡುವಂತೆ ಹೂಟಗಳ್ಳಿ ನಗರಸಭೆ, ರಮ್ಮನಹಳ್ಳಿ ಪಪಂ ಹಾಗೂ ಶ್ರೀರಾಂಪುರ ಪಪಂ ಕಚೇರಿಗಳಿಂದ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದಾಗಿ ಸದರಿ ಕಚೇರಿಗಳಿಂದ ತಿಳಿದುಬಂದಿದೆ.

ಸರ್ಕಾರದ ಅಧಿಸೂಚನೆ ಮತ್ತು 2018ರ ವಾರ್ಡ್‌ಗಳ ಪುನರ್ ವಿಂಗಡಣೆಯಂತೆ ಸಮಗ್ರ ನಕ್ಷೆ ತಯಾರಿಸಿದ್ದು, ಅದರಂತೆ ಪಾಲಿಕೆಯ ಹಾಲಿ ವಿಸ್ತೀರ್ಣ 86.31 ಚ.ಕಿ.ಮೀ. ಪ್ರದೇಶಕ್ಕೆ ಚಾಮುಂಡಿ ಬೆಟ್ಟ ಗ್ರಾಪಂ, ಆಲನಹಳ್ಳಿ ಗ್ರಾಪಂ, ಸಿದ್ದಲಿಂಗಪುರ ಗ್ರಾಪಂ, ಹೂಟಗಳ್ಳಿ ನಗರಸಭೆ, ಬೋಗಾದಿ ಪಪಂ, ಶ್ರೀರಾಂಪುರ ಪಪಂ, ರಮ್ಮನಹಳ್ಳಿ ಪಪಂ, ಇಲವಾಲ ಗ್ರಾಪಂ ಒಳಗೊಂಡಂತೆ ಒಟ್ಟು 187.01 ಚ.ಕಿ.ಮೀ. ಪ್ರದೇಶವನ್ನು ಪಾಲಿಕೆಯ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗಿ ಪ್ರಸ್ತಾವಿತ ಬೃಹತ್ ಮೈಸೂರು ಮಹಾನಗರ ಪಾಲಿಕೆ ಒಟ್ಟಾರೆ ವಿಸ್ತೀರ್ಣವು 273.32 ಚ.ಕಿ.ಮೀ. ಆಗುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟ ಗ್ರಾಪಂ, ಆಲನಹಳ್ಳಿ ಗ್ರಾಪಂ, ಸಿದ್ದಲಿಂಗಪುರ ಗ್ರಾಪಂ, ಹೂಟಗಳ್ಳಿ ನಗರಸಭೆ, ಬೋಗಾದಿ ಪಪಂ, ಶ್ರೀರಾಂಪುರ ಪಪಂ, ರಮ್ಮನಹಳ್ಳಿ ಪಪಂ, ಇಲವಾಲ ಗ್ರಾಪಂ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಜನರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರ ಜೊತೆಗೆ ಮೈಸೂರು ಯೋಜನಾಬದ್ಧ ನಗರವಾಗಿ ಬೆಳವಣಿಗೆಯಾಗಲು ಅವಕಾಶ ಕಲ್ಪಿಸಲು ಮೈಸೂರು ಮಹಾನಗರ ಪಾಲಿಕೆಗೆ ಉಲ್ಲೇಖಿತ ಪ್ರದೇಶಗಳನ್ನು ಸೇರಿಸಿಕೊಂಡು ಬೃಹತ್ ಮೈಸೂರು ಮಹಾನಗರ ಪಾಲಿಕೆಯನ್ನಾಗಿ ಮೇಲ್ದರ್ಜೇಗೇರಿಸುವಂತೆ ಶಾಸಕರು ತಮ್ಮ ಮನವಿಯಲ್ಲಿ ಕೋರಿದ್ದಾರೆ.

ಸಾಮೂಹಿಕ ಹಿಂಬಡ್ತಿ ಖಂಡಿಸಿ ಬೆಂಗಳೂರಲ್ಲಿ ಶಿಕ್ಷಕರ ಪ್ರತಿಭಟನೆ

ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಮನವಿ ಸಲ್ಲಿಕೆ



ಪ್ರಾಥಮಿಕ ಶಾಲಾ ಶಿಕ್ಷಕರಿಗೆ(ಪಿಎಸ್‌ಟಿ) ಸೇವೆಯಲ್ಲಿ ಸಾಮೂಹಿಕ ಹಿಂಬಡ್ತಿ ಆಗಿರುವುದನ್ನು ಸರಿಪಡಿಸುವಂತೆ ಒತ್ತಾಯಿಸಿ ಶಿಕ್ಷಣ ತಜ್ಞರ ನಿಯೋಗ, ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಮನವಿ ಸಲ್ಲಿಸಿದರು.

ಮೈಸೂರು, ಆ.12(ಎಸ್‌ಪಿಎನ್)– ಪ್ರಾಥಮಿಕ ಶಾಲಾ ಶಿಕ್ಷಕರಿಗೆ(ಪಿಎಸ್‌ಟಿ) ಸೇವೆಯಲ್ಲಿ ಸಾಮೂಹಿಕ ಹಿಂಬಡ್ತಿ ಆಗಿರುವುದನ್ನು ಸರಿಪಡಿಸುವಂತೆ ಒತ್ತಾಯಿಸಿ ಬೆಂಗಳೂರು ಫ್ರೀಡಂ ಪಾರ್ಕ್‌ನಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳು ಸೋಮವಾರ ಪ್ರತಿಭಟನೆ ನಡೆಸಿದರು.

ನಂತರ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಕೆ.ನಾಗೇಶ್, ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ನುಗ್ಗಲಿ, ಇತರೆ ಪದಾಧಿಕಾರಿಗಳು, ಹಿರಿಯ ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ, ಶಿಕ್ಷಣ ತಜ್ಞ ವಿ.ಪಿ.ನಿರಂಜನಾರಾಧ್ಯ ಹಾಗೂ ವಿಧಾನ ಪರಿಷತ್ ಸದಸ್ಯರ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿತು.

ಇದಕ್ಕೂ ಮುನ್ನ ಹಿರಿಯ ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ, ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ರಾಮೋಜಿಗೌಡ ಸೇರಿದಂತೆ ಇತರೆ ಮುಖಂಡರು ಬೆಂಗಳೂರು ಫ್ರೀಡಂ ಪಾರ್ಕ್‌ನಲ್ಲಿ ಜಮಾಯಿಸಿ, 2017ರಲ್ಲಿ ಸಿ ಅಂಡ್ ಆರ್ ನಿಯಮ ತಿದ್ದುಪಡಿಯಿಂದಾಗಿ ಲಕ್ಷಾಂತರ ಪಿಎಸ್‌ಟಿ ಶಿಕ್ಷಕರಿಗೆ ಅನ್ಯಾಯವಾಗಿದೆ. ಪಿಎಸ್‌ಟಿ ಶಿಕ್ಷಕರು ಸೇವೆಯಲ್ಲಿರುವಾಗಲೇ ಪದವಿ, ಸ್ನಾತಕೋತ್ತರ ಪದವಿ, ಬಿಇಡಿ ಮುಗಿಸಿ, 10,15 ಹಾಗೂ 20 ವರ್ಷ ಸೇವೆ ಸಲ್ಲಿಸಿದವರಿಗೂ ವೃತ್ತಿಯಲ್ಲಿ ಒಂದೇ ಒಂದು ಬಡ್ತಿ ಸಿಗದಂತಾಗಿದೆ ಎಂದು ಆರೋಪಿಸಿದ್ದಾರೆ.

ಪಿಎಸ್‌ಟಿ ಶಿಕ್ಷಕರು ನೇಮಕಗೊಂಡಾಗ 1–7ನೇ ತರಗತಿ ಬೋಧನೆಗಾಗಿ ಎಂದು ರಾಜ್ಯ ಸರ್ಕಾರವೇ ಆದೇಶಿಸಿದೆ. ಈಗ ಕಿರಿಯ ಪ್ರಾಥಮಿಕ ಶಾಲೆಗೆ ಪಿಎಸ್‌ಟಿ ಶಿಕ್ಷಕರು, ಹಿರಿಯ ಪ್ರಾಥಮಿಕ ಶಾಲೆಗೆ ಜಿಪಿಟಿ ವೃಂದ ವಿಭಜಿಸಿ, ಹಲವಾರು ವರ್ಷಗಳಿಂದ ಸೇವೆ ಸಲ್ಲಿಸಿರುವ ಪಿಎಸ್‌ಟಿ ಶಿಕ್ಷಕರಿಗೆ ಹಿಂಬಡ್ತಿ ನೀಡಿರುವುದು ಖಂಡನೀಯ, ಸೇವಾ ಜೇಷ್ಠತೆ, ವರ್ಗಾವಣೆ ಪ್ರಕ್ರಿಯೆಯಲ್ಲಿ ಅನ್ಯಾಯ ಸೇರಿದಂತೆ ಇತರೆ ಸಮಸ್ಯೆಗಳಿಗೆ ಎಂದು ಪ್ರತಿಭಟನಾಕಾರರು ಆರೋಪಿಸಿದ್ದು, ಈ ಅನ್ಯಾಯವನ್ನು ಸರಿಪಡಿಸುವಂತೆ ಒತ್ತಾಯಿಸಿ ಮುಖ್ಯಮಂತ್ರಿ ಮನವಿ ಸಲ್ಲಿಸಿದ್ದಾರೆ. ಈ ಪ್ರತಿಭಟನೆಯಲ್ಲಿ ಮೈಸೂರು ಜಿಲ್ಲೆಯ ನೂರಾರು ಶಿಕ್ಷಕರು ಪಾಲ್ಗೊಂಡಿದ್ದರು.

ದಸರಾ ; 130 ಕಿ.ಮೀ. ವ್ಯಾಪ್ತಿಯಲ್ಲಿ ವಿದ್ಯುತ್ ದೀಪಾಲಂಕಾರ

ಮೈಸೂರು,ಆ.12(ಪಿಎಂ)– ಈ ಬಾರಿಯ ದಸರಾ ಮಹೋತ್ಸವದಲ್ಲಿ 130 ಕಿ.ಮೀ. ವ್ಯಾಪ್ತಿ ವಿದ್ಯುತ್ ದೀಪಗಳನ್ನು ಅಳವಡಿಸಲು ಹಾಗೂ 84 ವೃತ್ತಗಳು, ಉದ್ಯಾನವನ ಸೇರಿದಂತೆ ಪ್ರಮುಖ 64 ಸ್ಥಳಗಳಲ್ಲಿ ವಿದ್ಯುತ್ ದೀಪಾಲಂಕಾರಕ್ಕೆ ಕ್ರಮ ವಹಿಸಲು ನಿರ್ಧರಿಸಲಾಗಿದೆ.

ಬೆಂಗಳೂರಿನ ಬೆಳಕು ಭವನದಲ್ಲಿ ಇಂಧನ ಸಚಿವ ಕೆ.ಜೆ.ಜಾರ್ಜ್ ನೇತೃತ್ವದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು. ಅಲ್ಲದೆ, ದಸರಾ ಉತ್ಸವ ಆರಂಭಕ್ಕೆ ಒಂದು ದಿನ ಮೊದಲು ಅ.2ರಿಂದ 21 ದಿನಗಳ ಕಾಲ ದೀಪಾಲಂಕಾರ ಮಾಡಲೂ ತೀರ್ಮಾನಿಸಲಾಯಿತು.

ಇದೇ ವೇಳೆ ಮಾತನಾಡಿದ ಸಚಿವರು, ವಿದ್ಯುತ್ ದೀಪಾಲಂಕಾರ ಈ ಬಾರಿಯ ದಸರಾಗೆ ಮತ್ತಷ್ಟು ಕಳೆ ಕಟ್ಟಬೇಕು. ಈ ವಿಚಾರವಾಗಿ ಸೆಸ್ಕ್ ಅಧಿಕಾರಿಗಳು ವಿಶೇಷ ಗಮನ ಹರಿಸಬೇಕು. ಹಸಿರು ಚಪ್ಪರ, ಸುಸ್ವಾಗತ ಸೇರಿದಂತೆ ವಿವಿಧ ಕಮಾನುಗಳು, ನಿಗಮದ ಕಚೇರಿಗಳ ದೀಪಾಲಂಕಾರ, ಛಾಯಾಗ್ರಹಣ ಮತ್ತು ಸಮಾರಂಭಗಳ ವೇದಿಕೆ ಮತ್ತಿತರೆಡೆ ವಿದ್ಯುತ್ ದೀಪಾಲಾಂಕಾರಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ ಸೇರಿದಂತೆ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಈ ಬಾರಿ ಸುತ್ತೂರು ಶ್ರೀಗಳಿಂದ ದಸರಾ ಉದ್ಘಾಟನೆ ಮಾಡಿಸಿ

ಶಾಸಕ ಶ್ರೀವತ್ಸ ಮತ್ತೊಮ್ಮೆ ಸರ್ಕಾರಕ್ಕೆ ಮನವಿ

ಮೈಸೂರು, ಆ.12(ಎಸ್‌ಬಿಡಿ)– ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರಿಂದ ಈ ಬಾರಿ ಮೈಸೂರು ದಸರಾ ಮಹೋತ್ಸವ ಉದ್ಘಾಟನೆ ನೆರವೇರಿಸುವಂತೆ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಸರ್ಕಾರಕ್ಕೆ ಮತ್ತೆ ಮನವಿ ಮಾಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ಬಾರಿಯೇ ಸುತ್ತೂರು ಶ್ರೀಗಳನ್ನು ದಸರಾ ಉದ್ಘಾಟನೆಗೆ ಆಹ್ವಾನಿಸುವಂತೆ ಮನವಿ ಮಾಡಿದ್ದೆ. ಈ ಬಾರಿಯಾದರೂ ಶ್ರೀಗಳಿಂದ ಉದ್ಘಾಟನೆ ನೆರವೇರಿಸಬೇಕು ಎಂದು ಒತ್ತಾಯಿಸಿದರು.

ಈ ಬಾರಿ ದಸರಾದಲ್ಲಿ ಕಾಡಾ ಕಚೇರಿ ಸಂಕೀರ್ಣದಲ್ಲಿ ರೇಷ್ಮೆ ಕಾರ್ಖಾನೆ, ಗಂಧದ ಎಣ್ಣೆ ಕಾರ್ಖಾನೆ ಸೇರಿದಂತೆ ಸರ್ಕಾರಿ ಸ್ವಾಮ್ಯದ ಉತ್ಪನ್ನಗಳು ಹಾಗೂ ನಂಜನಗೂಡು ರಸಬಾಳೆ, ವೀಳ್ಯೆ ಎಲೆ ಸೇರಿದಂತೆ ಭೌತಿಕ ಹೆಗ್ಗುರುತುಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ತೆರೆಯಬೇಕು. ಯೋಗ ದಸರಾ ಅಡಿಯಲ್ಲಿ ಇಡೀ ಮೈಸೂರು ನಗರದಲ್ಲಿ ಏಕಕಾಲದಲ್ಲಿ ಯೋಗ ಪ್ರದರ್ಶಿಸುವ ಮೂಲಕ ಗಿನ್ನಿಸ್ ದಾಖಲೆಗೆ ಯೋಜನೆ ರೂಪಿಸಬೇಕು. ಚಾಮುಂಡಿ ಬೆಟ್ಟದಲ್ಲಿ ವಾಹನ ಪಾರ್ಕಿಂಗ್ ಹಾಗೂ ಪಾದರಕ್ಷೆ ಸ್ಟ್ಯಾಂಡ್‌ಗೆ ಶುಲ್ಕ ಪಡೆಯಬಾರದು. ಭಕ್ತರು ದೇವಾಲಯದ ಹುಂಡಿಗೆ ಕಾಣಿಕೆ ಸಲ್ಲಿಸುವುದರಿಂದ ಈ ಎರಡೂ ಸೇವೆಯನ್ನು ಉಚಿತಗೊಳಿಸಬೇಕು ಎಂದು ಸಭೆಯಲ್ಲಿ ಮನವಿ ಮಾಡಿದರು.



ಸುತ್ತೂರು ಶ್ರೀಗಳು



ಶ್ರೀವತ್ಸ

ವೀರಶೈವ ಮಹಾಸಭಾದ ರಾಷ್ಟ್ರೀಯ ಕಾರ್ಯಕಾರಿಣಿಗೆ ಬಸವರಾಜ್ ಅವಿರೋಧ ಆಯ್ಕೆ



ಮೈಸೂರು, ಆ.12– ಅಖಿಲ ಭಾರತ ವೀರಶೈವ ಮಹಾಸಭಾದ ಹುಣಸೂರು ತಾಲೂಕು ಮಾಜಿ ಅಧ್ಯಕ್ಷ ಯು.ಎಸ್.ಬಸವರಾಜ್ ಅವರು ಮಹಾಸಭಾದ ರಾಷ್ಟ್ರೀಯ ಕಾರ್ಯಕಾರಿಣಿ ಸಮಿತಿ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಆಯ್ಕೆಗೆ ಕಾರಣಕರ್ತರಾದ ರಾಜ್ಯ ಘಟಕದ ಮಾಜಿ ಕೋಶಾಧ್ಯಕ್ಷ ವರುಣ ಮಹೇಶ್ ಹಾಗೂ ತಂಡದವರು ಮತ್ತು ತಮ್ಮ ಸಹೋದರರಾದ ಉದ್ಯಮಿ ಯು.ಎಸ್.ಶೇಖರ್ ಅವರಿಗೆ ಬಸವರಾಜ್ ಅವರು ಕೃತಜ್ಞತೆ ಸಲ್ಲಿಸಿದ್ದಾರೆ.

ಬಿಹಾರ ಬಳಿ ಕಾಲ್ತುಳಿತ: 7 ಮಂದಿ ಸಾವು

ಜೆಹನಾಬಾದ್: ಬಿಹಾರದ ಜೆಹಾನಾಬಾದ್ ಜಿಲ್ಲೆಯ ಬಾಬಾ ಸಿದ್ಧೇಶ್ವರ ನಾಥ ದೇವಸ್ಥಾನದಲ್ಲಿ ಕಾಲ್ತುಳಿತ ಸಂಭವಿಸಿದ್ದು, ಆರು ಮಹಿಳೆಯರು ಸೇರಿದಂತೆ ಕನಿಷ್ಠ ಏಳು ಜನರು ಮೃತಪಟ್ಟಿದ್ದಾರೆ. ಹಾಗೂ ಸುಮಾರು 16 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೃತರನ್ನು ಪ್ಯಾರೆ ಪಾಸ್ವಾನ್ (30), ನಿಶಾ ದೇವಿ (30), ಪುನಮ್ ದೇವಿ (30), ನಿಶಾ ಕುಮಾರಿ (21), ಮತ್ತು ಸುಶೀಲಾ ದೇವಿ (64) ಎಂದು ಗುರುತಿಸಲಾಗಿದೆ. ಒಬ್ಬ ಮಹಿಳೆಯ ಗುರುತು ಇನ್ನೂ ಸಿಕ್ಕಿಲ್ಲ. ನಿನ್ನೆ ಭಾನುವಾರ ರಾತ್ರಿ 11.30 ರ ಸುಮಾರಿಗೆ ದೇವಸ್ಥಾನದಲ್ಲಿ ಕಾಲ್ತುಳಿತ ಸಂಭವಿಸಿದೆ ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ಅಲಂಕೃತಾ ಪಾಂಡೆ ತಿಳಿಸಿದ್ದಾರೆ.

ಸಿದ್ದರಾಮಯ್ಯ ಹುಟ್ಟುಹಬ್ಬದ ಹಿನ್ನೆಲೆ

ಕೆ.ಆರ್.ಆಸ್ಪತ್ರೆ ಆವರಣದಲ್ಲಿ ಕೆ.ಹರೀಶ್‌ಗೌಡರ ನೇತೃತ್ವದಲ್ಲಿ ಸ್ವಚ್ಛತೆ

ಮೈಸೂರು,ಆ.12(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 77ನೇ ಜನ್ಮ ದಿನದ ಅಂಗವಾಗಿ ಕಾಂಗ್ರೆಸ್ ಕಾರ್ಯಕರ್ತರು ಮೈಸೂರಿನ ಕೆ.ಆರ್.ಆಸ್ಪತ್ರೆಯ ಆವರಣದಲ್ಲಿ ಸ್ವಚ್ಛತಾ ಕಾರ್ಯ ನಡೆಸಿ, ಆಸ್ಪತ್ರೆಯ ಪರಿಸರವನ್ನು ಶುಚಿಗೊಳಿಸಿದರು.

ಮೈಸೂರು ನಗರ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಿದ್ದ ಸ್ವಚ್ಛತಾ ಅಭಿಯಾನದಲ್ಲಿ 150 ಮಂದಿ ಕಾಂಗ್ರೆಸ್‌ನ ವಿವಿಧ ಸಮಿತಿಯ ಪದಾಧಿಕಾರಿಗಳು, ಕಾರ್ಯಕರ್ತರು, ನಗರ ಪಾಲಿಕೆ ಹಾಗೂ ಕೆ.ಆರ್.ಆಸ್ಪತ್ರೆ 40 ಸ್ವಚ್ಛತಾ ಸಿಬ್ಬಂದಿ ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 2:30ರವರೆಗೂ ಸ್ವಚ್ಛತಾ ಕಾರ್ಯ ನಡೆಸಿ, 6 ಟಿಪ್ಪರ್ ಕಸ ಸಂಗ್ರಹಿಸಿ ತೆರವುಗೊಳಿಸಿದರು. ಅಭಿಯಾನವು ಕೆ.ಆರ್.ಆಸ್ಪತ್ರೆಯ ಹೊರರೋಗಿಗಳ ವಿಭಾಗದ ಮುಂಭಾಗದಿಂದ ಆರಂಭಿಸಿ, ಹಳೆಯ ಜಯದೇವ ಕಟ್ಟಡ, ಕಲ್ ಬಿಲ್ಡಿಂಗ್, ಬ್ಲಡ್ ಬ್ಯಾಂಕ್ ಆವರಣ, ಕ್ಯಾಂಟೀನ್ ಆವರಣ, ಚೆಲುವಾಂಬ ಆಸ್ಪತ್ರೆ , ಮಕ್ಕಳ ಆಸ್ಪತ್ರೆ ಆವರಣದವರೆಗೂ ಸ್ವಚ್ಛತೆ ನಡೆಸಲಾಯಿತು. ಕಾಂಗ್ರೆಸ್ ಕಾರ್ಯಕರ್ತರು ನಡೆಸಿದ ಸ್ವಚ್ಛತಾ ಅಭಿಯಾನಕ್ಕೆ ಸಾರ್ವಜನಿಕರು, ಆಸ್ಪತ್ರೆಯಲ್ಲಿರುವ ರೋಗಿಗಳ ಪೋಷಕರು, ಆಸ್ಪತ್ರೆಯ ಸಿಬ್ಬಂದಿ ಶ್ಲಾಘಿಸಿದ್ದಾರೆ.

ಇದಕ್ಕೂ ಮುನ್ನ ಶಾಸಕ ಕೆ.ಹರೀಶ್‌ಗೌಡ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ನಮ್ಮೆಲ್ಲರಿಗೂ ಆದರ್ಶ ವ್ಯಕ್ತಿತ್ವದ ರಾಜಕಾರಣಿಯಾಗಿದ್ದು, ಬಡವರು, ಶೋಷಿತರ ಪರ ಕಾಳಜಿಯುಳ್ಳ ರಾಜಕಾರಣಿಯನ್ನು ಪಡೆದ ಈ ನಾಡು ಧನ್ಯ. ಸಿದ್ದರಾಮಯ್ಯ ಅವರ 77ನೇ ವರ್ಷದ ಹುಟ್ಟು ಹಬ್ಬದ ಅಂಗವಾಗಿ ಕೆ.ಆರ್.ಆಸ್ಪತ್ರೆಯ ಆವರಣವನ್ನು ಸ್ವಚ್ಛ ಮಾಡುವ ಮೂಲಕ ಆಚರಿಸುತ್ತಿರುವುದು ಶ್ಲಾಘನೀಯ. ಜನಪರ ಯೋಜನೆಗಳನ್ನು ಜಾರಿಗೆ ತಂದು ಎಲ್ಲಾ ವರ್ಗದ ಜನರ ಹಿತ ಕಾಪಾಡಿದ್ದಾರೆ. ಅವರ ನೇರ ನುಡಿ ನಡೆ ಮತ್ತು ಆಡಳಿತ ವೈಖರಿ ಯುವ ರಾಜಕಾರಣಿಗಳಿಗೆ ಗ್ರಂಥಾಲಯವಿದ್ದಂತೆ ಎಂದರು.

ಇದೇ ವೇಳೆ ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಮಾತನಾಡಿ, ಸಮಾಜವಾದಿ ಮತ್ತು ಜಾತ್ಯಾತೀತ ಹಿನ್ನೆಲೆಯಿಂದ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜಕೀಯ ಜೀವನ ತೆರೆದ ಪುಸ್ತಕವಿದ್ದಂತೆ. ಸುದೀರ್ಘ ರಾಜಕೀಯ ಜೀವನದಲ್ಲಿ ಒಂದೇ ಒಂದು ಕಪ್ಪು ಚುಕ್ಕೆಯನ್ನು ಅಂಟಿಸಿಕೊಳ್ಳದೆ ಸ್ವಚ್ಛ ರಾಜಕಾರಣ ಮಾಡಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಕರ್ನಾಟಕದ ಇತಿಹಾಸದಲ್ಲಿ ಸಿದ್ದರಾಮಯ್ಯ ಅವರ ಯುಗವನ್ನು ಸುವರ್ಣಾಕ್ಷರದಲ್ಲಿ ಬರೆದಿಡಬೇಕಾಗಿದೆ. ಭವಿಷ್ಯದ ರಾಜಕಾರಣಿಗಳಿಗೆ ಇವರ ಅನುಭವ ಮತ್ತು ಸಾಧನೆ ಆದರ್ಶನೀಯ ಎಂದು ಅಭಿಪ್ರಾಯಪಟ್ಟರು.

ಅಭಿಯಾನದಲ್ಲಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ. ಶೋಭಾ, ಮಾಜಿ ಸಂಸದ ಕಾಗಲ ವಾಡಿ ಶಿವಣ್ಣ, ಮಾಜಿ ಸಚಿವ ಕೋಟೆ ಶಿವಣ್ಣ, ಮಾಜಿ ಶಾಸಕ ಮರಿತಿಬ್ಬೆಗೌಡ, ಮಾಜಿ ಮೇಯರ್ ಗಳಾದ ಪುಷ್ಪಲತಾ ಟಿ.ಬಿ.ಚಿಕ್ಕಣ್ಣ, ಮೋದಾಮಣಿ, ಟಿ.ಬಿ.ಚಿಕ್ಕಣ್ಣ, ಮುಖಂಡರಾದ ಭಾಸ್ಕರ್, ಅಕ್ಬರ್ ಅಲಿ, ಜೇಸುದಾಸ್, ಎಡತಲೆ ಮಂಜುನಾಥ್, ಶಿವಪ್ರಸಾದ್, ಪ್ರವೀಣ್ ಸಿದ್ದಲಿಂಗಪುರ, ಭಾಸ್ಕರ್ ಗೌಡ, ಉಮಾಶಂಕರ್, ನಾಗೇಶ್, ಚಂದ್ರು, ಡೈರಿ ವೆಂಕಟೇಶ್, ಹುಣಸೂರು ಬಸವಣ್ಣ, ಪುಟ್ಟಸ್ವಾಮಿ, ಇಲವಾಲ ಮಹೇಶ್, ಕೋಟೆ ಮಲ್ಲೇಶ್, ಕೋಟೆ ಮಂಜುನಾಥ್, ಸಂತೋಷ್ ಮಳಿಯೂರ್, ತೊರೆಮಾವು ಗಿರೀಶ್, ಶಿವಶಂಕರಮೂರ್ತಿ, ಲೇಖ ವೆಂಕಟೇಶ್, ಶಶಿಕಲಾ ನಾಗರಾಜ್, ಮಂಜುಳ ಮಂಜುನಾಥ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜನ್ಮ ದಿನದ ಅಂಗವಾಗಿ ಕಾಂಗ್ರೆಸ್ ಕಾರ್ಯಕರ್ತರು ಮೈಸೂರಿನ ಕೆ.ಆರ್.ಆಸ್ಪತ್ರೆಯ ಆವರಣದಲ್ಲಿ ಸ್ವಚ್ಛತಾ ಅಭಿಯಾನ ನಡೆಸಿದರು.

ಭಾರಿ ಮಳೆಗೆ ದೇಗುಲದ ಗೋಪುರ ಕುಸಿತ



ಮೂಗೂರಲ್ಲಿ ಭಾರಿ ಮಳೆಗೆ ದೇವಾಲಯದ ಗೋಪುರ ಕುಸಿದಿರುವುದು.

ಮೂಗೂರು, ಆ.12– ಭಾನುವಾರ ತಡರಾತ್ರಿ ಸುರಿದ ಗುಡುಗು ಸಹಿತ ಭಾರಿ ಮಳೆಗೆ ಗ್ರಾಮದ ಶ್ರೀಲಕ್ಷ್ಮಿ ನಾರಾಯಣಸ್ವಾಮಿ ದೇಗುಲದ ಗೋಪುರ ಕುಸಿದು ಬಿದ್ದಿದೆ.

ಅಳಿವಿನಂಚಿನಲ್ಲಿದ್ದ ಚೋಳರ ಕಾಲದ ಶ್ರೀಲಕ್ಷ್ಮಿ ನಾರಾಯಣಸ್ವಾಮಿ ದೇಗುಲ ಪಾಳು ಬಿದ್ದು ಶಿಥಿಲಗೊಂಡಿದ್ದ ಹಿನ್ನೆಲೆಯಲ್ಲಿ ಸ್ಥಳೀಯ ದಾನಿಗಳು ಹಾಗೂ ಸೇವಾರ್ಥದಾರರ ಸಹಕಾರದಿಂದ ಲಕ್ಷಾಂತರ ರೂ.ಗಳ ಮೂಲಕ ಸಾಧಾರಣವಾಗಿ ದುರಸ್ತಿ ಮಾಡಿ ಜೀರ್ಣೋದ್ಧಾರಗೊಳಿಸಿ ದೇವಾಲಯಕ್ಕೆ ಸುಣ್ಣ ಬಣ್ಣ ಬಳಿದು ಭಕ್ತರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಆದರೆ ಇದೀಗ ಗೋಪುರ ಸಹಿತ ಗೋಡೆ ಕುಸಿದಿದೆ. ಅಲ್ಲದೇ ಈ ಹಿಂದೆ ಭಾರಿ ಮಳೆಗೆ ದೇವಾಲಯದ ಬಲಭಾಗದ ಗೋಡೆ ಕುಸಿದು ಬಿದ್ದಿತ್ತು ಅದನ್ನು ದುರಸ್ತಿಗೊಳಿಸುವಂತೆ ಈ ಭಾಗದ ಎಲ್ಲಾ ಜನಪ್ರತಿನಿಧಿಗಳಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿರಲಿಲ್ಲ ಇದೀಗ ಮತ್ತೆ ಗೋಪುರ ಹಾಗೂ ಗೋಡೆ ಕುಸಿದಿರುವುದರಿಂದ ಈಗಲಾದರೂ ಜನಪ್ರತಿನಿಧಿಗಳು ಗಮನ ಹರಿಸಿ ದೇಗುಲ ಉಳಿವಿಗೆ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ತಿ.ನರಸೀಪುರ ಪುರಸಭೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಮೀಸಲಾತಿ ಪ್ರಕಟ

ಅಧಿಕಾರಕ್ಕಾಗಿ 'ಕೈ' ಮಹಿಳಾ ಸದಸ್ಯರ ತೀವ್ರ ಕಸರತ್ತು



ರೂಪ



ಮಹದೇವಮ್ಮ



ವಸಂತ



ಎಂ.ರಾಜೇಶ್ವರಿ



ನಾಗರತ್ನ

ತಿ.ನರಸೀಪುರ, ಆ.12– ಪಟ್ಟಣದ ಪುರಸಭೆ 2ನೇ ಅವಧಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಮೀಸಲಾತಿ ಪ್ರಕಟಗೊಂಡಿದ್ದು, ರಾಜಕೀಯ ಚಟುವಟಿಕೆ ಗರಿಗೆದರಿದ್ದು, ಕಾಂಗ್ರೆಸ್ ಪ್ರಾಬಲ್ಯವಿರುವ ಪುರಸಭೆಯಲ್ಲಿ ಅಧಿಕಾರದ ಗದ್ದುಗೆ ಏರಲು ಪಕ್ಷೇತರರು ಸೇರಿದಂತೆ ಕಾಂಗ್ರೆಸ್‌ನ ಮಹಿಳಾ ಸದಸ್ಯರು ಕಸರತ್ತು ನಡೆಸುತ್ತಿದ್ದಾರೆ.

ಪುರಸಭೆ ಅಧ್ಯಕ್ಷ ಸ್ಥಾನ ಹಿಂದುಳಿದ ವರ್ಗ 'ಎ' ಮಹಿಳೆ, ಉಪಾಧ್ಯಕ್ಷ ಸ್ಥಾನ ಪರಿಶಿಷ್ಟ ಪಂಗಡ ಮಹಿಳೆಗೆ ಮೀಸಲಾಗಿದೆ. ಈ ಹಿನ್ನೆಲೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ವಾರ್ಡ್ 10ರ ಕಾಂಗ್ರೆಸ್ ಸದಸ್ಯೆ ಮಹದೇವಮ್ಮ, ವಾರ್ಡ್ 12ರ ಪಕ್ಷೇತರ ಸದಸ್ಯೆ ಬಿ.ವಸಂತ ಶ್ರೀಕಂಠ ಹಾಗೂ ವಾರ್ಡ್ 21ರ ಕಾಂಗ್ರೆಸ್ ಸದಸ್ಯೆ ನಾಗರತ್ನ ಮಾದೇಶ ಪ್ರಬಲ ಆಕಾಂಕ್ಷಿಗಳಾಗಿದ್ದರೇ, ಉಪಾಧ್ಯಕ್ಷ ಸ್ಥಾನದ ಮೇಲೆ ವಾರ್ಡ್ 1ರ ಪಕ್ಷೇತರ ಸದಸ್ಯೆ ರೂಪ ಕರಿಯಪ್ಪ ಹಾಗೂ ವಾರ್ಡ್ 17ರ ಕಾಂಗ್ರೆಸ್ ಸದಸ್ಯೆ ಎಂ.ರಾಜೇಶ್ವರಿ ರಾಘವೇಂದ್ರ ಕಣ್ಣಿಟ್ಟಿದ್ದಾರೆ. 23 ಸದಸ್ಯರ ಸಂಖ್ಯಾಬಲ ಹೊಂದಿರುವ ಪುರಸಭೆಯಲ್ಲಿ 10 ಕಾಂಗ್ರೆಸ್, ಮೂವರು ಜೆಡಿಎಸ್, ನಾಲ್ವರು ಬಿಜೆಪಿ ಹಾಗೂ 6 ಪಕ್ಷೇತರ ಸದಸ್ಯರಿದ್ದಾರೆ. ಪಕ್ಷೇತರ ಸದಸ್ಯರಾಗಿರುವ ಬಿ. ವಸಂತ ಶ್ರೀಕಂಠ ಮತ್ತು ರೂಪ ಕರಿಯಪ್ಪ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡಿದ್ದು, ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನದ ಪ್ರಬಲ ಆಕಾಂಕ್ಷಿಗಳಾಗಿದ್ದಾರೆ. ಕಾಂಗ್ರೆಸ್ ಸದಸ್ಯರಾಗಿರುವ ಉಪಾಧ್ಯಕ್ಷರಾಗಿದ್ದ ನಾಗರತ್ನ ಮಾದೇಶ ಮತ್ತು ಮಹದೇವಮ್ಮ ಅಧ್ಯಕ್ಷರಾಗುವ ತವಕದಲ್ಲಿದ್ದರೆ, ರಾಜೇಶ್ವರಿ ರಾಘವೇಂದ್ರ ಅವರು ನಿಷ್ಠೆ ಪರಿಗಣಿಸಿ ಉಪಾಧ್ಯಕ್ಷರಾಗಲು ವರಿಷ್ಠರನ್ನು ಅವಕಾಶ ಕೇಳುತ್ತಿದ್ದಾರೆ.

ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದ ಮೊದಲ ಅವಧಿಯಲ್ಲಿ ಎನ್.ಸೋಮಣ್ಣ ಸೇರಿದಂತೆ ಎಸ್.ಮದನ್‌ರಾಜ್ ಹಾಗೂ ಟಿ.ಎಂ.ನಂಜುಂಡಸ್ವಾಮಿ ಅಧ್ಯಕ್ಷರಾಗಿದ್ದರು. ಸಾಮಾನ್ಯ ಮಹಿಳೆಗೆ ಮೀಸಲಾಗಿದ್ದ ಉಪಾಧ್ಯಕ್ಷ ಸ್ಥಾನದಲ್ಲಿ ಪ್ರೇಮ ಮತ್ತು ನಾಗರತ್ನ ಮಾದೇಶ ಕಾರ್ಯ ನಿರ್ವಹಿಸಿದ್ದರು. ವರುಣ ಮತ್ತು ತಿ.ನರಸೀಪುರ 2 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿರುವ ಪುರಸಭೆಯಲ್ಲಿ ಅಧಿಕಾರದ ಬಹುಪಾಲನ್ನು ವರುಣ ಕ್ಷೇತ್ರದ ವ್ಯಾಪ್ತಿಯ ವಾರ್ಡ್‌ಗಳ ಚುನಾಯಿತ ಸದಸ್ಯರು ಪಡೆದಿರುವುದರಿಂದ ಈ ಬಾರಿ ತಿ.ನರಸೀಪುರ ಟೌನ್ ವ್ಯಾಪ್ತಿಗೆ ನೀಡುವಂತೆ ವರಿಷ್ಠರ ಮುಂದೆ ನಾಗರತ್ನ ಮಾದೇಶ ಅವರು ಪ್ರಸ್ತಾಪಿಸುತ್ತಿದ್ದಾರೆ.

ಚುನಾವಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಎಂಎಲ್‌ಸಿ ಯತೀಂದ್ರ ಹಾಗೂ ಸಂಸದ ಸುನೀಲ್ ಬೋಸ್ ತೀರ್ಮಾನ ಅಂತಿಮವಾಗಿರುವುದರಿಂದ ಯಾರನ್ನು ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಸೂಚಿಸುವರು ಮತ್ತು ಸದಸ್ಯರು ಯಾರನ್ನು ಬೆಂಬಲಿಸುವರು ಎಂಬುದನ್ನು ಕಾದು ನೋಡಬೇಕಿದೆ.

ಕಾಂಗ್ರೆಸ್‌ಗೆ ಪ್ರತಿಸ್ಪರ್ಧಿಗಳೇ ಇಲ್ಲ

ಪುರಸಭೆ ಅಧ್ಯಕ್ಷ ಸ್ಥಾನ ಹಿಂದುಳಿದ ವರ್ಗ 'ಎ'ಗೆ ಮೀಸಲಾಗಿರುವುದರಿಂದ ಕಾಂಗ್ರೆಸ್ ವಿರುದ್ಧ ಸ್ಪರ್ಧಿಸಲು ಪ್ರತಿಸ್ಪರ್ಧಿಗಳೇ ಇಲ್ಲದಂತಾಗಿದೆ. 6 ಮಂದಿ ಪಕ್ಷೇತರರು ಹಾಗೂ ಜೆಡಿಎಸ್‌ನಿಂದ ಆಯ್ಕೆಗೊಂಡಿರುವ ಸಿ.ಪ್ರಕಾಶ್ ಮತ್ತು ವಿ.ಮೋಹನ್ ಕೂಡ ಕಾಂಗ್ರೆಸ್‌ನಲ್ಲೇ ಗುರುತಿಸಿ ಕೊಂಡಿರುವುದು ಕಾಂಗ್ರೆಸ್ ಅಧಿಕಾರ ಗದ್ದುಗೆ ಏರಲು ಸರಾಗವಾಗಿದೆ. ಬಿಜೆಪಿಯ ನಾಲ್ವರು ಸದಸ್ಯರಲ್ಲಿ ಪರಿಶಿಷ್ಟ ಪಂಗಡ ಮೀಸಲಿನಡಿ ಆಯ್ಕೆಯಾಗಿರುವ ಮಹದೇವಿ ಅವರೊಬ್ಬರನ್ನು ಬಿಟ್ಟರೆ, ಇನ್ನುಳಿದ ಮೂವರು ಹಿಂದುಳಿದ ವರ್ಗ 'ಎ' ಮೀಸಲು ವ್ಯಾಪ್ತಿಯಿಂದ ಹೊರಗಿದ್ದಾರೆ.

ಹೈನುಗಾರಿಕೆ ಅಭಿವೃದ್ಧಿಗೆ ಶ್ರಮಿಸುತ್ತೇನೆ

ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜ್ ಭರವಸೆ



ಮೈಮುಲ್ ಅಧ್ಯಕ್ಷ ಆರ.ಚೆಲುವರಾಜು ಅವರನ್ನು ಮುಖಂಡರು ಸನ್ಮಾನಿಸಿದರು.

ತಿ.ನರಸೀಪುರ, ಆ.12– ಹೈನುಗಾರಿಕೆ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜ್ ಭರವಸೆ ನೀಡಿದರು.

ತಾಲೂಕಿನ ಹಿರಿಯ ಕಾಂಗ್ರೆಸ್ ಮುಖಂಡರಾದ ತಾಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಸೋಸಲೆ ಪ್ರಾಥಮಿಕ ಸಹಕಾರ ಸಂಘದ ಅಧ್ಯಕ್ಷ ಎಂ.ಪರಶಿವಮೂರ್ತಿ ಅವರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ತಮ್ಮ ಅಧಿಕಾರವಧಿಯಲ್ಲಿ ರೈತರಿಗೆ ಬೇಕಾಗುವ ಎಲ್ಲಾ ಸವಲತ್ತುಗಳನ್ನು ನೀಡುವ ಜೊತೆಗೆ ಹೈನುಗಾರಿಗೆ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಸೋಸಲೆ ಪ್ರಾಥಮಿಕ ಸಹಕಾರ ಸಂಘದ ಅಧ್ಯಕ್ಷ ಎಂ.ಪರಶಿವಮೂರ್ತಿ ಮಾತನಾಡಿ, ರಾಜಕೀಯ, ಸಹಕಾರ ಕ್ಷೇತ್ರ ಸೇರಿದಂತೆ ಸಾರ್ವಜನಿಕವಾಗಿ ಇರುವವರನ್ನು ಜನರು ಸೂಕ್ಷ್ಮವಾಗಿ ಗಮನಿಸುತ್ತಾರೆ. ಹೀಗಾಗಿ ನಾವು ಪ್ರಾಮಾಣಿಕರಾಗಿ ಕರ್ತವ್ಯ ನಿರ್ವಹಿಸಿದರೆ ಜನ ನಮ್ಮನ್ನು ಗುರುತಿಸುತ್ತಾರೆ. ಸರ್ಕಾರದ ಸವಲತ್ತುಗಳನ್ನು ರೈತರಿಗೆ ಸಮರ್ಪಕವಾಗಿ ತಲುಪಿಸಬೇಕು. ಹೈನುಗಾರಿಕೆಯನ್ನು ಉದ್ಯಮದಂತೆ ಅಭಿವೃದ್ಧಿಪಡಿಸಲು ಪೂರಕ ಕೆಲಸ ಮಾಡಬೇಕು ಎಂದರು. ಹೈನುಗಾರಿಕೆ ಅವಲಂಬಿಸಿರುವ ರೈತರ ಬದುಕು ಮತ್ತು ಬವಣೆ ಅರಿತು, ರೈತರಿಗೆ ತರಬೇತಿನೀಡಿ ಹಾಲು ಉತ್ಪಾದನೆ ಹೆಚ್ಚಿಸುವ ಮೂಲಕ ರೈತರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಲು ಶ್ರಮಿಸಬೇಕೆಂದು ಸಲಹೆ ನೀಡಿದರು.

ಈ ವೇಳೆ ಚೌಹಳ್ಳಿ ಮಲ್ಲೇಶ್, ಕನ್ನಾಯಕನಹಳ್ಳಿ ಮಧು, ಪ್ರಭು, ಚರಣ್, ಪ್ರದೀಪ್, ಸಂಪತ್ ಮತ್ತಿತರರಿದ್ದರು.

ದೌರ್ಜನ್ಯ ಖಂಡಿಸಿ ಪ್ರತಿಭಟನೆ...



ಬಾಂಗ್ಲಾ ದೇಶದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರ ಮತ್ತು ಹೊಮ್ಮರಗಳ್ಳಿಯಲ್ಲಿ ಹಿಂದೂ ಹಿತ ರಕ್ಷಣಾ ವೇದಿಕೆ ವತಿಯಿಂದ ಮೌನ ಪ್ರತಿಭಟನೆ ನಡೆಸಲಾಯಿತು.

ಹುಣಸೂರು ನಗರಸಭೆಗೆ ಮೀಸಲಾತಿ ಪ್ರಕಟ

ಮೂರು ಪಕ್ಷಗಳಲ್ಲೂ ಗರಿಗೆದರಿದ ರಾಜಕೀಯ ಚಟುವಟಿಕೆ



ಹುಣಸೂರು ನಗರಸಭೆ ಕಾರ್ಯಾಲಯ

ಹುಣಸೂರು, ಆ.12– ಇಲ್ಲಿನ ನಗರಸಭೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಮೀಸಲಾತಿ ಪ್ರಕಟವಾಗುತ್ತಿದ್ದಂತೆ ಅಧಿಕಾರ ಹಿಡಿಯಲು ಪ್ರಮುಖ 3 ಪಕ್ಷಗಳಲ್ಲಿ ರಾಜಕೀಯ ಚಟುವಟಿಕೆ ಬಿರುಸುಗೊಂಡಿದ್ದು, ಕಳೆದ 15 ತಿಂಗಳಿಂದ ತಟಸ್ಥರಾಗಿದ್ದ ಸದಸ್ಯರಲ್ಲಿ ಇದೀಗ ಸಂಚಲನ ಉಂಟಾಗಿದೆ.

ನಗರಸಭೆ ಅಧ್ಯಕ್ಷ ಸ್ಥಾನ ಬಿಸಿಎಂ 'ಎ' ಹಾಗೂ ಉಪಾಧ್ಯಕ್ಷ ಸ್ಥಾನ ಎಸ್‌ಟಿ ಮಹಿಳೆ ವರ್ಗಕ್ಕೆ ಮೀಸಲಾಗಿದೆ. ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಸೇರಿದಂತೆ 3 ಪಕ್ಷಗಳಲ್ಲೂ ಆಕಾಂಕ್ಷಿಗಳಿದ್ದು, ಉಪಾಧ್ಯಕ್ಷ ಸ್ಥಾನಕ್ಕೆ 2ನೇ ವಾರ್ಡ್‌ನ ಆಶಾ ಏಕೈಕ ಅರ್ಹ ಅಭ್ಯರ್ಥಿಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್‌ನಿಂದ 5ನೇ ವಾರ್ಡ್‌ನ ಸ್ವಾಮಿಗೌಡ, 4ನೇ ವಾರ್ಡ್‌ನ ಭವ್ಯ ಚಂದ್ರಶೇಖರ್, 22ನೇ ವಾರ್ಡ್‌ನ ಜಬಿಉಲ್ಲಾ (ಅಂಡಿ ಅಸ್ಲಾಂ), ಬಿಜೆಪಿಯಿಂದ ಹುಡಾ ಮಾಜಿ ಅಧ್ಯಕ್ಷ, 26ನೇ ವಾರ್ಡ್‌ನ ಗಣೇಶ ಕುಮಾರಸ್ವಾಮಿ, 12ನೇ ವಾರ್ಡ್‌ನ ವಿವೇಕ, 11ನೇ ವಾರ್ಡ್‌ನ ಹರೀಶ, ಜೆಡಿಎಸ್‌ನಿಂದ 7ನೇ ವಾರ್ಡ್‌ನ ಸರವಣ, 14ನೇ ವಾರ್ಡ್‌ನ ಸಾಯಿನ್ ತಾಜ್ ಹಾಗೂ ಪಕ್ಷೇತರ ಸದಸ್ಯ 13ನೇ ವಾರ್ಡ್‌ನ ಮಾಲೀಕ್ ಪಾಷ ಅಕಾಂಕ್ಷಿಗಳಾಗಿದ್ದಾರೆ.

ನಗರಸಭೆಯಲ್ಲಿ ಕಾಂಗ್ರೆಸ್ 14, ಜೆಡಿಎಸ್ 7, ಬಿಜೆಪಿ 3, ಪಕ್ಷೇತರರು 5, ಎಸ್‌ಡಿಪಿಐ 2 ಶಾಸಕ, ಸಂಸದ ಸೇರಿದಂತೆ 33 ಮತಗಳಿವೆ. ಕಾಂಗ್ರೆಸ್‌ನ 14 ಸದಸ್ಯರ ಪೈಕಿ ಓರ್ವ ಸದಸ್ಯ ಜೆಡಿಎಸ್‌ನಲ್ಲಿ ಗುರ್ತಿಸಿಕೊಂಡಿದ್ದು, ಜೆಡಿಎಸ್ 7, ಬಿಜೆಪಿಯಲ್ಲಿ 3 ಸದಸ್ಯರಿದ್ದು ಮೈತ್ರಿಯಾದರೆ 10 ಸದಸ್ಯರಾಗಲಿದ್ದಾರೆ. ಐವರು ಪಕ್ಷೇತರರು ಈಗಾಗಲೇ ಜೆಡಿಎಸ್‌ನಿಂದಿಗೆ ಗುರ್ತಿಸಿಕೊಂಡಿರುವುದರಿಂದ ಇವರೊಂದಿಗೆ ಶಾಸಕರು ಮತ್ತು ಸಂಸದರ ಮತಗಳು ಸೇರಿ ಜೆಡಿಎಸ್, ಬಿಜೆಪಿ ನಡುವಿನ ಮೈತ್ರಿ ಇಲ್ಲೂ ಮುಂದುವರೆದರೆ ನಗರಸಭೆ ಅಧಿಕಾರ ಮೈತ್ರಿ ಪಕ್ಷಗಳ ಪಾಲಾಗುವುದು ಬಹುತೇಕ ಖಚಿತ ಎನ್ನಲಾಗಿದೆ. ಈ ಸಂಬಂಧ ಶಾಸಕ ಜಿ.ಡಿ.ಹರೀಶ್‌ಗೌಡರ ನೇತೃತ್ವದಲ್ಲಿ ಇತ್ತೀಚೆಗೆ 2 ಪಕ್ಷಗಳ ಸದಸ್ಯರೊಂದಿಗೆ ಮೊದಲ ಸುತ್ತಿನ ಸಭೆ ನಡೆದಿದ್ದು, ಸದ್ಯದಲ್ಲೇ ಎಲ್ಲವೂ ಅಂತಿಮವಾಗಲಿದೆ ಎಂದು ಸದಸ್ಯರೊಬ್ಬರು ತಿಳಿಸಿದ್ದಾರೆ.

ಮತ್ತೊಂದೆಡೆ ಕಾಂಗ್ರೆಸ್, ಎಸ್‌ಡಿಪಿಐ ಹೊಂದಾಣಿ ಮಾಡಿಕೊಂಡಿದ್ದು, ಜೆಡಿಎಸ್, ಬಿಜೆಪಿ ಮೈತ್ರಿಯಾದರೆ ಪಕ್ಷೇತರರೇ ನಿರ್ಣಾಯಕರಾಗಲಿದ್ದು, ಈ ನಿಟ್ಟಿನಲ್ಲಿ ಚುನಾವಣಾ ಕಣ ರಂಗೇರಿದೆ.

ಜೆಡಿಎಸ್ ಸದಸ್ಯ ಸರವಣ ಮಾತನಾಡಿ, ನಾನು ಕಾಲೇಜು ದಿನಗಳಿಂದ ಜೆಡಿಎಸ್‌ನಲ್ಲಿದ್ದು, ಇದೀಗ ಅಧ್ಯಕ್ಷ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದೇನೆ. ರಾಜ್ಯದಲ್ಲಿ ಜೆಡಿಎಸ್, ಬಿಜೆಪಿ ಮೈತ್ರಿಯಾಗಿರುವುದರಿಂದ ನಮಗೆ ಹೊರಗಿನವರ ಆತಂಕ ಇಲ್ಲ. ಅಲ್ಲದೇ ನಾನು ಎಲ್ಲಾ ಪಕ್ಷದವರೊಂದಿಗೆ ಪಕ್ಷಾತೀತವಾಗಿ ಗುರ್ತಿಸಿಕೊಂಡಿದ್ದೇನೆ. ಅಲ್ಲದೇ ಸಮಾಜ ಸೇವೆಯಲ್ಲಿ ಗುರ್ತಿಸಿಕೊಂಡಿದ್ದೇನೆ ಎಂದರು.

ಟಿಎಪಿಸಿಎಂಎಸ್ ಇತಿಹಾಸದಲ್ಲಿ ದಲಿತರಿಗೆ ಅವಕಾಶ ಸಿಕ್ಕಿರಲಿಲ್ಲ. ಜಿ.ಡಿ.ಹರೀಶ್‌ಗೌಡರು ಶಾಸಕರಾದ ಮೇಲೆ ದಲಿತರಿಗೆ ಅವಕಾಶ ನೀಡಿ ಇತಿಹಾಸ ನಿರ್ಮಿಸಿದರು. ಅದೇ ರೀತಿ ಇದೀಗ ಗಾಣಿಗ ಸಮುದಾಯಕ್ಕೆ ನಗರಸಭೆಯಲ್ಲಿ ಪ್ರಾತಿನಿಧ್ಯ ನೀಡಿದರೆ ಮತ್ತೊಂದು ಇತಿಹಾಸ ನಿರ್ಮಿಸಿದಂತಾಗುತ್ತದೆ ಎಂದರು. 26ನೇ ವಾರ್ಡ್‌ನ ಗಣೇಶ್ ಕುಮಾರಸ್ವಾಮಿ ಮಾತನಾಡಿ ನಾನು ಮೈತ್ರಿ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದು, ಜೆಡಿಎಸ್, ಬಿಜೆಪಿ ಸದಸ್ಯರು, ಶಾಸಕರು ಮತ್ತು ಸಂಸದರು ಸಹಕರಿಸುವ ವಿಶ್ವಾಸವಿದೆ ಎಂದರು.

ಐವರು ಪಕ್ಷೇತರರು ಮೈತ್ರಿ ಪಕ್ಷದೊಂದಿಗೆ ಗುರುತಿಸಿಕೊಂಡಿದ್ದೇವೆ. ನಮ್ಮ ಷರತ್ತು ಒಪ್ಪಿಗೆಯಾಗುವ ಅಧ್ಯಕ್ಷರಿಗೆ ಪೂರ್ಣಾವಧಿ ಕೆಲಸ ಮಾಡಲು ಅವಕಾಶ ಮಾಡಿಕೊಡುವುದು. ನಗರಸಭೆ ಆಸ್ತಿ ರಕ್ಷಣೆಗೆ ಒತ್ತು ನೀಡುವುದು. ಸಾರ್ವಜನಿಕ ಕೆಲಸಗಳಿಗೆ ಪಾರದರ್ಶಕವಾಗಿ ನಡೆದುಕೊಳ್ಳಲಾಗುವುದು ಎಂದು 10 ವಾರ್ಡ್ ಸದಸ್ಯ ರಮೇಶ್, 12ನೇ ವಾರ್ಡ್ ಸದಸ್ಯ ವಿವೇಕ್ ತಿಳಿಸಿದ್ದಾರೆ.

ಎಸ್‌ಡಿಪಿಐನಿಂದ ನಾವು ಗೆದ್ದು ಈವರೆಗೆ ಕಾಂಗ್ರೆಸ್ ಪಕ್ಷಕ್ಕೆ ಸಹಕರಿಸಿದ್ದೇವೆ. ಕಳೆದ ಸಾಲಿನಲ್ಲಿ 4 ಜನರಿಗೆ ಪಕ್ಷ ಅಧ್ಯಕ್ಷ ಸ್ಥಾನ ಕಲ್ಪಿಸಿದೆ. ನಾವು ಸಹಕರಿಸಿದ್ದೇವೆ. ಈ ಬಾರಿ ಕಾಂಗ್ರೆಸ್ ನಮಗೂ ಅವಕಾಶ ನೀಡುವ ವಿಶ್ವಾಸವಿದ್ದು, ನಾನೂಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದೇನೆ ಎಂದು ಯೂನಸ್ ತಿಳಿಸಿದ್ದಾರೆ.

ಕಾಂಗ್ರೆಸ್, ಎಸ್‌ಡಿಪಿಐ ಸೇರಿ 16 ಸದಸ್ಯರಿದ್ದು, ಕಾಂಗ್ರೆಸ್ ಪಕ್ಷದ ಪ್ರಬಲ ಅಕಾಂಕ್ಷಿಯಾಗಿದ್ದೇನೆ.ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರೊಂದಿಗೆ ಚರ್ಚೆ ನಡೆಸಿದ್ದು ಶೀಘ್ರ ಅಭ್ಯರ್ಥಿ ಹೆಸರು ಅಂತಿಮಗೊಳ್ಳಲಿದೆ ಎಂದು 5ನೇ ವಾರ್ಡ್ ಸದಸ್ಯ ಸ್ವಾಮಿಗೌಡ ತಿಳಿಸಿದರು.

ನಾಲೆ, ಕೆರೆಕಟ್ಟೆಗೆ ನೀರು ತುಂಬಿಸಲು ಆಗ್ರಹ



ನಾಲೆ, ಕೆರೆಕಟ್ಟೆಗಳಿಗೆ ನೀರು ತುಂಬಿಸುವಂತೆ ಆಗ್ರಹಿಸಿ ರೈತರು ರಸ್ತೆ ತಡೆದರು.

ಬನ್ನೂರು, ಆ.12– ನಾಲೆ, ಕೆರೆಕಟ್ಟೆಗಳಿಗೆ ನೀರು ತುಂಬಿಸುವಂತೆ ಆಗ್ರಹಿಸಿ ರೈತರು ಪಟ್ಟಣದಲ್ಲಿ ಸೋಮವಾರ ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಪಟ್ಟಣದ ಸಂತೆಮಾಳದ ಬಳಿ ಜಮಾಯಿಸಿದ ರೈತರು ಮೈಸೂರು, ಮಳವಳ್ಳಿ, ತಿ.ನರಸೀಪುರ, ಮಂಡ್ಯ ವರ್ತುಲ ರಸ್ತೆ ತಡೆದು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯ ರೈತ ಸಂಘ ಮೂಲ ಸಂಘಟನೆ ಅಧ್ಯಕ್ಷ ನಾರಾಯಣ ಮಾತನಾಡಿ, ರಾಜ್ಯದಲ್ಲಿ ಉತ್ತಮ ಮಳೆಯಾಗಿ ಎಲ್ಲಾ ಅಣೆಕಟ್ಟುಗಳು ತುಂಬಿದ್ದರೂ ಇಲ್ಲಿನ ಅಧಿಕಾರಿಗಳು ನಾಲೆ ಮತ್ತು ಕೆರೆಕಟ್ಟೆಗಳಿಗೆ ನೀರು ತುಂಬಿಸದೇ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ. ತುರಗನೂರು ಬ್ರಾಂಚ್ ಉಕ್ಕಲಗೆರೆ ನಾಲೆ ಹಾಗೂ ಕೆರೆಕಟ್ಟೆಗಳಿಗೆ ನೀರು ತುಂಬಿಸುವಂತೆ ಸಂಬಂಧಪಟ್ಟ ನೀರಾವರಿ ಅಧಿಕಾರಿಗಳಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಇದರಿಂದ ರೈತರು ಕೃಷಿ ಚಟುವಟಿಕೆ ಕೈಗೊಳ್ಳಲು ಸಾಧ್ಯವಾಗಿಲ್ಲ ಅಲ್ಲದೇ ನಾಲೆ ದುರಸ್ತಿ ಪಡಿಸದ ಹಿನ್ನಲೆಯಲ್ಲಿ ಜೊಂಡು ಸೇರಿದಂತೆ ಕಸ, ಹೂಳು ತುಂಬಿಕೊಂಡು ನೀರು ನಾಲೆ ಕೊನೆ ಭಾಗಕ್ಕೆ ತಲುಪದೇ ರೈತರು ಪರಿತಪಿಸುವಂತಾಗಿದೆ. ಹೀಗಾಗಿ ನೀವು ವ್ಯವಸಾಯಕ್ಕೆ ನೀರು ಕೊಡಿ ಇಲ್ಲವಾದರೆ ವಿಷ ಕೊಡಿ ಎಂದು ಕಿಡಿಕಾರಿದರು.

ಈ ವೇಳೆ ಸ್ಥಳಕ್ಕಾಗಮಿಸಿದ ಕಾರ್ಯಪಾಲಕ ಅಭಿಯಂತರ ವಾಸುದೇವ್ ಮಾತನಾಡಿ, ವ್ಯವಸಾಯಕ್ಕೆ ಕೂಡಲೇ ನೀರು ನೀಡಲಾಗುವುದು ಎಂದು ಭರವಸೆ ನೀಡಿದರು. ಅಲ್ಲದೇ ಕಾಲುವೆಯಲ್ಲಿ ಜೊಂಡು ತೆರವು ಕಾರ್ಯ ಪ್ರಗತಿಯಲ್ಲಿದ್ದು, ಕೊನೆ ಭಾಗಕ್ಕೂ ನೀರು ತಲುಪಲಿದೆ ಎಂದು ತಿಳಿಸಿದ ಹಿನ್ನಲೆಯಲ್ಲಿ ರೈತರು ಪ್ರತಿಭಟನೆ ಹಿಂಪಡೆದರು.

ಪ್ರತಿಭಟನೆಯಲ್ಲಿ ರೈತರಾದ ರಂಗಸ್ವಾಮಿ, ಶಿವರಾಮು, ಲಿಂಗರಾಜು, ಪ್ರಕಾಶ್, ಕುಮಾರ್, ವೆಂಟಕರಂಗಶೆಟ್ಟಿ, ಚಿಕ್ಕಸ್ವಾಮಿ, ರಾಜಣ್ಣ, ರಾಜಕುಮಾರ, ನಾಗೇಶ್, ಪಾರ್ಥ, ಕೃಷ್ಣೇಗೌಡ ಸೇರಿದಂತೆ ಇನ್ನಿತರರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ



ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ಸರಗೂರು, ಆ.12– ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪಟ್ಟಣದಲ್ಲಿ ಕರ್ನಾಟಕ ದಸಂಸ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಿಂದ ತಾಲೂಕು ಕಚೇರಿವರೆಗೆ ಮೆರವಣಿಗೆಯಲ್ಲಿ ತೆರಳಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ದಸಂಸ ಜಿಲ್ಲಾ ಉಪ ಪ್ರಧಾನ ಸಂಚಾಲಕ ದೊಡ್ಡ ಸಿದ್ದು, ಜಿಲ್ಲಾ ಸಂಚಾಲಕ ನಾರಾಯಣ್ ಮಾತನಾಡಿ, ಸರಗೂರು ತಾಲೂಕು ಕೇಂದ್ರವಾಗಿ ಘೋಷಣೆಯಾಗಿ 9 ವರ್ಷ ಕಳೆದರೂ ರೈತರು ತಮ್ಮ ಕೆಲಸಗಳಿಗಾಗಿ ಬೇರೆ ತಾಲೂಕುಗಳಿಗೆ ಅಲೆದಾಡುವುದು ತಪ್ಪಿಲ್ಲ. ಹೀಗಾಗಿ ತಾಲೂಕು ಕೇಂದ್ರದಲ್ಲಿ ಸರ್ಕಾರದ ಎಲ್ಲಾ ಕಚೇರಿಗಳು ಕಾರ್ಯ ನಿರ್ವಹಿಸುವಂತೆ ಕ್ರಮ ಕೈಗೊಳ್ಳಬೇಕು. ಬಗರ್ ಹುಕುಂ ಜಮೀನಿನಲ್ಲಿ ಕೃಷಿ ಮಾಡುತ್ತಾ ಕಳೆದ 50–60 ವರ್ಷಗಳಿಂದ ಸ್ವಾಧೀನಾನುಭವದಲ್ಲಿ ರುವ ರೈತರಿಗೆ ಅರಣ್ಯ ಹಾಗೂ ಕಂದಾಯ ಇಲಾಖಾಧಿಕಾರಿಗಳು ನೀಡುತ್ತಿರುವ ಕಿರುಕುಳ ತಪ್ಪಿಸಬೇಕು. ಕಂದಾಯ, ಅರಣ್ಯ ಇಲಾಖೆ ಜಂಟಿ ಸರ್ವೇ ನಡೆಸಿ ರೈತರಿಗೆ ಸಾಗುವಳಿ ಪತ್ರ ನೀಡಬೇಕು ಎಂದು ಆಗ್ರಹಿಸಿದರು.

ಸರಗೂರು ತಾಲೂಕಿನಲ್ಲಿ ಪ್ರಕೃತಿ ವಿಕೋಪದಿಂದ ಮನೆ ಕಳೆದುಕೊಂಡವರಿಗೆ ಸರ್ಕಾರಿ ಮನೆ ಮಂಜೂರು ಮಾಡಬೇಕು. ತಾಲೂಕಿನ ಗ್ರಾಮಗಳಲ್ಲಿ ಒತ್ತುವರಿಯಾಗಿರುವ ಗ್ರಾಮ ಠಾಣಾ ಜಾಗಗಳನ್ನು ತೆರವುಗೊಳಿಸಬೇಕು. ತಾಲೂಕಿನ ಕಲ್ಲಂಬಾಳು, ಬಾವಿಕೆರೆ ಗ್ರಾಮಗಳಲ್ಲಿ ಮನೆ ಕಟ್ಟಿಕೊಂಡು ವಾಸಿಸುವ ನಿರ್ಗತಿಕ ಬಡವರಿಗೆ ಸರ್ಕಾರದಿಂದ ಹಕ್ಕು ಪತ್ರ ನೀಡಬೇಕು. ಬಹುತೇಕ ಗ್ರಾಮಗಳಲ್ಲಿ ಸ್ಮಶಾನ ಇಲ್ಲದೆ ಅಂತ್ಯಸಂಸ್ಕಾರ ಮಾಡಲು ಜನರು ಪರದಾಡುತ್ತಿದ್ದಾರೆ. ಅಂತಹ ಗ್ರಾಮಗಳಿಗೆ ಸ್ಮಶಾನ ಕಲ್ಪಿಸಿಕೊಡಬೇಕು ಎಂದು ಒತ್ತಾಯಿಸಿದರು.

ತಾಲೂಕು ಸಂಚಾಲಕ ಗೋವಿಂದ ರಾಜು, ಹೆಚ್.ಡಿ.ಕೋಟೆ ತಾಲೂಕು ಸಂಚಾಲಕ ಸಣ್ಣ ಕುಮಾರ್, ರೈತ ಸಂಘದ ಕಾರ್ಯಾಧ್ಯಕ್ಷ ಮಹಾಲಿಂಗು, ಸರಗೂರು ಅಭಿವೃದ್ಧಿ ಹೋರಾಟ ಸಮಿತಿ ಸಂಚಾಲಕ ಕೃಷ್ಣ, ಗ್ರಾಪಂ ಸದಸ್ಯ ಶಿವಲಿಂಗಯ್ಯ ಮಾತನಾಡಿದರು. ತಹಸೀಲ್ದಾರ್ ರುಕಿಯಾ ಬೇಗಂ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ತಾಲೂಕು ಸಂಚಾಲಕ ಚಂದ್ರ, ಮಹದೇವಸ್ವಾಮಿ, ನಾಗೇಂದ್ರ, ಮಣಿಕಂಠ, ಮಹೇಶ್, ವೆಂಕಟರಾಮು, ಕೆಂಪರಾಜು, ಚನ್ನನಾಯಕ, ಮಹೇಂದ್ರ, ಮೂರ್ತಿ, ಶಿವಣ್ಣ, ನಾಗರಾಜು, ಲೋಕೇಶ್, ನವೀನ್, ಮಹೇಶ್, ಆನಂದ, ಮಹಾದೇವಮ್ಮ, ಮಹಿಳಾ ಜಿಲ್ಲಾ ಅಧ್ಯಕ್ಷೆ ಅನುಷಾ, ಮಹೇಶ್ ಇನ್ನಿತರರಿದ್ದರು.

ಆಮ್ ಆದ್ಮಿ ಪಕ್ಷದ ಅಧ್ಯಕ್ಷ, ಪದಾಧಿಕಾರಿಗಳ ನೇಮಕ



ಸುದ್ದಿಗೋಷ್ಠಿಯಲ್ಲಿ ಆಮ್ ಆದ್ಮಿ ಜಿಲ್ಲಾಧ್ಯಕ್ಷ ರಂಗಯ್ಯ ಮಾತನಾಡಿದರು.


ಹೆಚ್.ಡಿ.ಕೋಟೆ, ಆ.12– ತಾಲೂಕಿನಲ್ಲಿ ಆಮ್ ಆದ್ಮಿ ಪಕ್ಷದ ನೂತನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷ ರಂಗಯ್ಯ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ ಮುಂದಿಟ್ಟುಕೊಂಡು ಈ ಬಾರಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗುತ್ತಿದೆ. ಮುಂದಿನ ಚುನಾವಣೆಯಲ್ಲಿ ನಮ್ಮ ಪಕ್ಷ ಖಾತೆ ತೆರೆಯಲಿದೆ ಎಂದರು.

ತಾಲೂಕು ಆಮ್ ಆದ್ಮಿ ಪಕ್ಷದ ನೂತನ ಅಧ್ಯಕ್ಷರಾಗಿ ಮಣಿಕಂಠ, ಕಾರ್ಯದರ್ಶಿಯಾಗಿ ಕೆ.ಎಂ.ನಾಗರಾಜು, ಸಂಘಟನಾ ಕಾರ್ಯದರ್ಶಿಗಳಾಗಿ ಕಾಳಪ್ಪ, ನಿಂಗಮ್ಮ, ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಸೀತಮ್ಮ, ಯುವ ಘಟಕದ ಅಧ್ಯಕ್ಷರಾಗಿ ಮಹದೇವ, ಕಾರ್ಯದರ್ಶಿಯಾಗಿ ಶಾಂತಿ, ಮೀನಾ, ಕಾಳಿಯಮ್ಮ, ಹಾಡಿಗಳ ಉಸ್ತುವಾರಿಯಾಗಿ ಲಲಿತಾ ಶಿವಣ್ಣ, ಸಂಘಟನಾ ಕಾರ್ಯದರ್ಶಿಯಾಗಿ ಜೆ.ಆರ್.ಲಲಿತಾ, ಮಹಿಳಾ ಕಾರ್ಯದರ್ಶಿಯಾಗಿ ಗಂಗು, ಸರಗೂರು ಸಂಘಟನಾ ಕಾರ್ಯದರ್ಶಿಯಾಗಿ ರತ್ನಮ್ಮ ಅವರನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದರು.

ಈ ವೇಳೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಐಶ್ವರ್ಯ, ಸಂಘಟನಾ ಕಾರ್ಯದರ್ಶಿ ಕುಲಕರ್ಣಿ, ಸದಸ್ಯ ಮಹದೇವಸ್ವಾಮಿ ಇದ್ದರು.


ಕಮಲಮ್ಮ ನಿಧನ



ಹನಗೋಡು, ಆ.12– ನೇರಳಕುಪ್ಪೆ ಗ್ರಾಪಂ ಮಾಜಿ ಸದಸ್ಯೆ ಕಚುವನಹಳ್ಳಿ ಗ್ರಾಮದ ಕಮಲಮ್ಮ (64) ಸೋಮವಾರ ಮುಂಜಾನೆ ನಿಧನರಾದರು.

ಮೃತರು ಪತಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಲಿಡಿಯಾ



ಹುಣಸೂರು, ಆ.12– ನಗರದ ಕಲ್ಕುಣಿಕೆ ಹೌಸಿಂಗ್ ಬೋರ್ಡ್ ಕಾಲೋನಿ ನಿವಾಸಿ, ಕ್ರೈಸ್ತ ಸಭಾ ಪಾಲಕರ ಸಂಘದ ಅಧ್ಯಕ್ಷ ವೈ.ಕೆ.ಸುರೇಶ್ ಅವರ ಪತ್ನಿ ಲಿಡಿಯಾ (41) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ತಾಲೂಕಿನ ವೀರನಹೊಸಹಳ್ಳಿ ಗ್ರಾಮದಲ್ಲಿರುವ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಾಂಗ್ಲಾದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ

ನಂಜನಗೂಡು, ಸರಗೂರಲ್ಲಿ ಮೌನ ಪ್ರತಿಭಟನೆ





ಬಾಂಗ್ಲಾ ದೇಶದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ನಂಜನಗೂಡು, ಸರಗೂರಲ್ಲಿ ಹಿಂದೂ ಹಿತರಕ್ಷಣಾ ಸಮಿತಿ ವತಿಯಿಂದ ಮೌನ ಪ್ರತಿಭಟನೆ ನಡೆಸಲಾಯಿತು.

ನಂಜನಗೂಡು/ಸರಗೂರು, ಆ.12– ಬಾಂಗ್ಲಾ ದೇಶದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ನಂಜನಗೂಡು, ಸರಗೂರಲ್ಲಿ ಹಿಂದೂ ಹಿತರಕ್ಷಣಾ ಸಮಿತಿ ವತಿಯಿಂದ ಮೌನ ಪ್ರತಿಭಟನೆ ನಡೆಸಲಾಯಿತು.

ನಂಜನಗೂಡು: ನಗರದ ನೆಹರು (ಗೀತಾ ಮೆಡಿಕಲ್) ವೃತ್ತದ ಬಳಿ ಜಮಾಯಿಸಿದ ಹಿಂದೂ ಹಿತರಕ್ಷಣಾ ಸಮಿತಿ ಕಾರ್ಯಕರ್ತರು ಮಾನವ ಸರಪಳಿ ನಿರ್ಮಿಸಿ, ಹಿಂದೂಗಳೇ ಎದೆಗುಂದದಿರಿ ನಿಮ್ಮೊಂದಿಗೆ ನಾವಿದ್ದೇವೆ ಧೈರ್ಯವಾಗಿರಿ ಎಂಬ ಬಿತ್ತಿಪತ್ರಗಳನ್ನು ಪ್ರದರ್ಶನ ಮಾಡುವ ಮೂಲಕ ಮೌನ ಪ್ರತಿಭಟನೆ ನಡೆಸಿದರು.

ಹಿಂದೂ ಹಿತರಕ್ಷಣಾ ಸಮಿತಿಯ ಗಿರೀಶ್ ಮಾತನಾಡಿ, ನೆರೆಯ ರಾಷ್ಟ್ರ ಬಾಂಗ್ಲಾ ದೇಶದಲ್ಲಿ ವಿದ್ಯಾರ್ಥಿ ಸಂಘಟನೆಗಳ ಅರಾಜಕತೆ ಎಲ್ಲೆ ಮೀರಿದೆ. ದಿನನಿತ್ಯ ಹಿಂದೂಗಳ ಕೊಲೆ, ಹಿಂಸೆ, ಅತ್ಯಾಚಾರದಂತಹ ದೌರ್ಜನ್ಯ ಪ್ರಕರಣಗಳು ನಡೆಯುತ್ತಿವೆ. ಇದರಿಂದ ಹಿಂದೂಗಳಿಗೆ ರಕ್ಷಣೆ ಇಲ್ಲದಂತಾಗಿದೆ. ಇಂದು ಖ್ಯಾತ ಗಾಯಕ ರಾಹುಲ್ ಮನೆಗೆ ಬೆಂಕಿ ಇಟ್ಟು ತಮ್ಮ ಕ್ರೌರ್ಯ ಮುಂದುವರಿಸಿದ್ದಾರೆ. ಬಾಂಗ್ಲಾದಲ್ಲಿ ಅಧಿಕಾರಕ್ಕೆ ಬಂದಿರುವ ಮಧ್ಯಂತರ ಸರ್ಕಾರ ಹಿಂದೂಗಳಿಗೆ ರಕ್ಷಣೆ ನೀಡಲು ವಿಫಲವಾಗಿದೆ. ಪ್ರಧಾನಿ ಮೋದಿ ಮಧ್ಯಸ್ಥಿಕೆ ವಹಿಸಿ ಹಿಂದೂಗಳ ರಕ್ಷಣೆಗೆ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ನಿಗಮ ಮಂಡಳಿ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ನಗರಸಭಾ ಸದಸ್ಯರಾದ ಹೆಚ್.ಎಸ್.ಮಹದೇವ ಸ್ವಾಮಿ, ಮಹೇಶ್ ಅತ್ತಿಖಾನೆ, ಮಧುರಾಜ್, ರಾಕೇಶ್, ನಿತಿನ್, ಶ್ರೀನಿವಾಸರೆಡ್ಡಿ ಸೇರಿದಂತೆ ಹಲವರಿದ್ದರು.

ಸರಗೂರು: ಬಾಂಗ್ಲಾ ದೇಶದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ಸರಗೂರು ಪಟ್ಟಣದಲ್ಲೂ ಹಿಂದೂ ಹಿತರಕ್ಷಾ ಸಮಿತಿಯಿಂದ ಮೌನ ಪ್ರತಿಭಟನೆ ನಡೆಸಲಾಯಿತು. ಪಟ್ಟಣದ ವಿವಿಧೆಡೆ ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು, ಹಿಂದೂಗಳ ಮೇಲೆ ದೌರ್ಜನ್ಯ ತಡೆಗೆ ಮುಂದಾಗಬೇಕು. ಅಲ್ಲದೇ ದೌರ್ಜನ್ಯ ನಡೆಸಿದವರ ಪ್ರಕರಣ ದಾಖಲಿಸಬೇಕು. ವಿಚಾರಣೆ ತ್ವರಿತಗೊಳಿಸಲು ವಿಶೇಷ ನ್ಯಾಯಮಂಡಳಿ ರಚಿಸಬೇಕು. ಅಲ್ಪ ಸಂಖ್ಯಾತ ಸಮುದಾಯದವರಿಗೆ ಶೇ.10ರಷ್ಟು ಸಂಸದೀಯ ಸ್ಥಾನ ನೀಡಬೇಕು ಎಂಬುದು ಸೇರಿದಂತೆ ಇನ್ನಿತರ ಭಿತ್ತಿಪತ್ರ ಹಿಡಿದು ಪ್ರತಿಭಟನಾಕಾರರು ಮೌನ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ಪಪಂ ಸದಸ್ಯರಾದ ನೂರಾಳಸ್ವಾಮಿ, ಜಿಲ್ಲಾ ಕಾರ್ಯಕಾರಿಣಿ ಸದಸ್ಯೆ ಸುನಂದರಾಜು, ತಾಲೂಕು ಬಿಜೆಪಿ ಮಾಜಿ ಅಧ್ಯಕ್ಷ ಗುರುಸ್ವಾಮಿ, ಮುಖಂಡರಾದ ಗೋಪಾಲಕೃಷ್ಣ ರಾಮು, ರವಿಕುಮಾರ್, ಲೋಕೇಶ್, ರವಿಗೌಡ, ಶ್ರೀವತ್ಸ ನಾಗರಾಜು, ಅಭಿ, ಅನಿಲ್, ರಮೇಶ್ ಇನ್ನಿತರರಿದ್ದರು.

ಮೈಸೂರು ಮಿತ್ರ

ಬಾಂಗ್ಲಾದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ಮೈಸೂರಿನಲ್ಲಿ ಪ್ರತಿಭಟನೆ

ಹಿಂದೂ ಹಿತರಕ್ಷಣಾ ಸಮಿತಿಯ ಜಾಗೃತಿ ಅಭಿಯಾನ

ಮೈಸೂರು, ಆ.12(ಬಿಎಲ್‌ಯು)– ಬಾಂಗ್ಲಾ ದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ ಖಂಡಿಸಿ ಹಿಂದೂ ಹಿತರಕ್ಷಣಾ ಸಮಿತಿಯವರು ಮೈಸೂರಿನ ವಿವಿಧೆಡೆ ಇಂದು ಮೌನ ಪ್ರತಿಭಟನೆ ನಡೆಸಿದರು.

ನಗರದ ಚಾಮುಂಡಿಬೆಟ್ಟದಲ್ಲಿ ಬೆಳಿಗ್ಗೆ 6.30 ಗಂಟೆಗೆ ಆರಂಭವಾದ ಮೌನ ಪ್ರತಿಭಟನೆ ಸಂಜೆ ತನಕ ನಗರದ ವಿವಿಧೆಡೆ ನಡೆಸಿದರು.

ಬಾಂಗ್ಲಾದೇಶದಲ್ಲಿ ಹಿಂದೂ ಧರ್ಮಿಯರ ಮೇಲೆ ದೌರ್ಜನ್ಯ ನಡೆಯುತ್ತಿದ್ದು, ಭಾರತ ಸರ್ಕಾರ ಅವರಿಗೆ ರಕ್ಷಣೆ ನೀಡುವ ನಿಟ್ಟಿನಲ್ಲಿ ರಾಜತಾಂತ್ರಿಕ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಹಿಂದೂ ಧರ್ಮಿಯರ ಮೇಲೆ ಹೀಗೆ ನಿರಂತರ ದೌರ್ಜನ್ಯ ನಡೆಯುತ್ತಿದ್ದರೆ ಕೆಲವೇ ವರ್ಷದಲ್ಲಿ ಭಾರತ ಕೂಡ ಇಸ್ಲಾಂ ರಾಷ್ಟ್ರವಾಗುವುದರಲ್ಲಿ ಸಂಶಯ ವಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ನಗರ ಬಸ್ ನಿಲ್ದಾಣದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಹಲವರು ಭಾಗವಹಿಸಿದ್ದರು. ಹಿಂದೂ ಧರ್ಮಿಯರ ಮೇಲೆ ಹಲ್ಲೆ ನಡೆಸಿ ಅಮಾನವೀಯವಾಗಿ ನಡೆದುಕೊಳ್ಳುತ್ತಿರುವುದು ಖಂಡನೀಯ ಎಂದು ಈ ವೇಳೆ ಶ್ರೀವತ್ಸ ಹೇಳಿದರು.

ಹಿಂದೂಗಳು ಕಡಿಮೆಯಾದರೆ, ಭಾರತ ಕಾಣೆಯಾಗುತ್ತದೆ, ಬಾಂಗ್ಲಾ ಹಿಂದುಗಳೇ, ಧೃತಿಗೆಡಬೇಡಿ, ನಿಮ್ಮೊಂದಿಗೆ ನಾವಿದ್ದೇವೆ, ಬಾಂಗ್ಲಾದೇಶದಿಂದ ಕೇಳುತ್ತಿರುವುದು ದೇವಸ್ಥಾನದ ಗಂಟೆಯಲ್ಲ, ಅದು ಹಿಂದೂಗಳಿಗೆ ಎಚ್ಚರಿಕೆ ಗಂಟೆ, ಸರಿಯಾಗಿ ಕೇಳಿಸಿಕೊಳ್ಳಿ, ಹಿಂದೂಗಳೇ ಎಚ್ಚರ, ಅಂದು ಪಾಕಿಸ್ತಾನದಲ್ಲಿ ಹಿಂದೂ ಹತ್ಯಾಕಾಂಡ, ಇಂದು ಬಾಂಗ್ಲಾದೇಶದಲ್ಲಿ, ನಾಳೆ, ಯೋಚಿಸಿ, ಸಿಎಎ ಯಾಕೆ ಬೇಕಿತ್ತು, ಈಗ ಅರ್ಥ ಆಯ್ತಾ, ಹಿಂದೂಗಳಿಗೆ ಇರುವುದೊಂದೆ ಭಾರತ, ಬಾಂಗ್ಲಾದೇಶದ ಹಿಂದೂಗಳಿಗೆ ಮಾನವ ಹಕ್ಕು ಇಲ್ಲವೆ ಎಂಬ ಘೋಷಣಾ ಫಲಕ ಹಿಡಿದು ಮೌನ ಪ್ರತಿಭಟನೆ ನಡೆಸಿದರು.

ರಾಜೇಂದ್ರ ನಗರ, ಶಿವಾಜಿ ಪಾರ್ಕ್, ಚಾಮುಂಡಿ ವಿಹಾರ ಸ್ಟೇಡಿಯಂ, ಚಾಮುಂಡಿಪುರಂ ಸರ್ಕಲ್, ಮೆಟ್ರೋಪೋಲ್ ಸರ್ಕಲ್, ಎಂ.ಜಿ.ರಸ್ತೆ ಮಾರುಕಟ್ಟೆ, ಚಿಕ್ಕಗಡಿಯಾರ, ಅಗ್ರಹಾರ ಸರ್ಕಲ್, ವಿಜಯನಗರ ಸೇರಿದಂತೆ ನಗರದ ಹಲವೆಡೆ ಮೌನ ಪ್ರತಿಭಟನೆ ನಡೆಸಿ, ಜಾಗೃತಿ ಮೂಡಿಸಿದರು.

ಹಿಂದೂ ಹಿತರಕ್ಷಣಾ ಸಮಿತಿ ಮುಖಂಡರಾದ ರಂಗಸ್ವಾಮಿ, ವಿಶ್ವನಾಥ್, ಭರತ್, ಪ್ರಜ್ವಲ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಬಾಂಗ್ಲಾದೇಶದಲ್ಲಿ ಹಿಂದೂ ಧರ್ಮಿಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಖಂಡಿಸಿ ಹಿಂದೂ ಹಿತರಕ್ಷಣಾ ಸಮಿತಿಯವರು ಮೈಸೂರಿನ ನಗರ ಬಸ್ ನಿಲ್ದಾಣದಲ್ಲಿ ಸೋಮವಾರ ಮೌನ ಪ್ರತಿಭಟನೆ ನಡೆಸಿದರು.

ಅರವಿಂದ್ ಕೇಜ್ರಿವಾಲ್‌ರಂತೆ ಜೈಲಿನಲ್ಲಿ ಕುಳಿತು ಸಿದ್ದರಾಮಯ್ಯ ಆಡಳಿತ ನಿರ್ವಹಣೆ

ಶಾಸಕ ಟಿ.ಎಸ್.ಶ್ರೀವತ್ಸ ಎಚ್ಚರಿಕೆ



ಮೈಸೂರು, ಆ.12(ಬಿಎಲ್‌ಯು)– ಮುಡಾ ನಿವೇಶನ ಹಂಚಿಕೆ ಹಗರಣದಲ್ಲಿ ಸಿಲುಕಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ದೆಹಲಿ ಸಿಎಂ ಅರವಿಂದ ಕೇಜ್ರಿವಾಲ್‌ರಂತೆ ಜೈಲಿನಲ್ಲಿ ಕುಳಿತು ಆಡಳಿತ ನಡೆಸುವ ಪರಿಸ್ಥಿತಿ ಬರುತ್ತದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಎಚ್ಚರಿಸಿದರು.

ಮುಡಾ ಹಗರಣದ ಆರೋಪ ಹೊತ್ತಿರುವ ಸಿದ್ದರಾಮಯ್ಯ ಈಗಾಗಲೇ ರಾಜೀನಾಮೆ ನೀಡಬೇಕಿತ್ತು. ಇಲ್ಲದಿದ್ದರೆ ರಾಜೀನಾಮೆಗೆ ಕಾಂಗ್ರೆಸ್ ಹೈಕಮಾಂಡ್ ಆದರೂ ಸೂಚನೆ ನೀಡಬೇಕಿತ್ತು. ಆದರೆ ಇದ್ಯಾವುದೂ ಆಗುತ್ತಿಲ್ಲ ಎಂದು ಕಿಡಿಕಾರಿದರು.

ಮುಡಾದಲ್ಲಿ ಸಾವಿರಾರು ಕೋಟಿ ಹಗರಣ ನಡೆದಿರುವ ಕಾರಣ ಇಡಿಯಿಂದ ತನಿಖೆ ನಡೆಸುವಂತೆ ರಾಷ್ಟ್ರಪತಿಗೆ ದೂರು ನೀಡುತ್ತೇವೆ ಎಂದು ಶ್ರೀವತ್ಸ ತಿಳಿಸಿದರು. ಚಾಮುಂಡಿಬೆಟ್ಟದ ಪ್ರಾಧಿಕಾರದಲ್ಲಿ ರಾಜಮನೆತನದ ಅಧಿಕಾರ ಮೊಟಕುಗೊಳಿಸಿರುವುದಕ್ಕೆ ಜನರು ಮಾತ್ರವಲ್ಲದೆ ನನ್ನ ವಿರೋಧ ಕೂಡ ಇದೆ. ಈ ವಿಚಾರದಲ್ಲಿ ನಾವು ರಾಜಮನೆತನದ ಪರ ಇದ್ದೇವೆ ಎಂದು ಸ್ಪಷ್ಟಪಡಿಸಿದರು.

ರಾಷ್ಟ್ರೀಯ ಅಂತರಿಕ್ಷ ದಿನದ ಅಂಗವಾಗಿ

ಕನ್ನಡದಲ್ಲಿ ವಿಜ್ಞಾನ ಕಥೆಗಳ ರಚನಾ ಸ್ಪರ್ಧೆ

ಮೈಸೂರು,ಆ.12– ರಾಷ್ಟ್ರೀಯ ಅಂತರಿಕ್ಷ ದಿನವನ್ನು 2023ರಲ್ಲಿ ಚಂದ್ರನ ದಕ್ಷಿಣ ಪ್ರದೇಶದಲ್ಲಿ ಚಂದ್ರಯಾನ–3ರ ಐತಿಹಾಸಿಕ ಯಶಸ್ವಿ ಲ್ಯಾಂಡಿಂಗ್ ಅನ್ನು ಸ್ಮರಿಸುತ್ತಾ ಭಾರತದಾದ್ಯಂತ ಆಗಸ್ಟ್ 23ರಂದು ಆಚರಿಸಲಾಗುತ್ತಿದೆ.

ರಾಷ್ಟ್ರೀಯ ಅಂತರಿಕ್ಷ ದಿನದ ಅಂಗವಾಗಿ ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆ (ಐಐಎ)ಯ ಕಾಸ್ಮಾಲಜಿ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ಕೇಂದ್ರ(ಕಾಸ್ಮೋಸ್) – ಮೈಸೂರು, ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಕನ್ನಡದಲ್ಲಿ ವಿಜ್ಞಾನ ಕಥೆಗಳ ರಚನಾ ಸ್ಪರ್ಧೆಯನ್ನು ಆ.16ರಂದು ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ ಆಯೋಜಿಸಲಾಗಿದೆ.

18–35 ವರ್ಷದೊಳಗಿನ ವಯೋಮಾನದ ಎಲ್ಲರೂ ಈ ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹರಾಗಿದ್ದು ಸ್ಪರ್ಧಿಗಳು ಸ್ವತಃ ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನಕ್ಕೆ ಬಂದು ಆ.16ರಂದು ಪಾಲ್ಗೊಳ್ಳಬೇಕು. ನಿಯಮಗಳು ಮತ್ತು ನಿಬಂಧನೆಗಳ ಜೊತೆಗೆ ಮೂರು ಸಂಭವನೀಯ ವಿಷಯಗಳನ್ನು ಉಲ್ಲೇಖಿಸಲಾಗಿದೆ.

ಸ್ಪರ್ಧೆಯಲ್ಲಿ ಭಾಗವಹಿಸುವವರು ಮಧ್ಯಾಹ್ನ 3 ಗಂಟೆಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಮತ್ತು ಅದರ ನಂತರ 3.30 ರಿಂದ 4.30 ರವರೆಗೆ ವಿಜ್ಞಾನ ಕಥೆಗಳನ್ನು ಬರೆಯಲು ಸಮಯವನ್ನು ನೀಡಲಾಗುತ್ತದೆ. ಸ್ಪರ್ಧಿಗಳು ನಾವು ವೆಬ್‌ಸೈಟ್‌ನಲ್ಲಿ ಪಟ್ಟಿ ಮಾಡಿರುವ ಮೂರು ವಿಷಯಗಳಲ್ಲಿ ಯಾವುದಾದರೂ ಒಂದು ಕಥೆಯನ್ನು ಬರೆಯಲು ಸಿದ್ಧವಾಗಿ ಬರಬಹುದು. ಕಥೆಗಳನ್ನು ನಮ್ಮ ಸಮಿತಿಯು ಮೌಲ್ಯ ಮಾಪನ ಮಾಡಲಿದ್ದು ವಿಜೇತರಿಗೆ ಆಗಸ್ಟ್ 23ರಂದು ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ನಡೆಯುವ ರಾಷ್ಟ್ರೀಯ ಅಂತರಿಕ್ಷ ದಿನದ ಕಾರ್ಯಕ್ರಮದಲ್ಲಿ ಬಹುಮಾನಗಳನ್ನು ನೀಡಲಾಗುತ್ತದೆ. ಈ ಸ್ಪರ್ಧೆಗೆ ಯಾವುದೇ ನೋಂದಣಿ ಶುಲ್ಕಗಳಿಲ್ಲ. ಹೆಚ್ಚಿನ ವಿವರಗಳಿಗಾಗಿ ಅಮೋಘವರ್ಷ ಎನ್, +91–6362159474 ಅಥವಾ ಇಮೇಲ್: cosmos.epoc@iiap.res.in ಸಂಪರ್ಕಿಸಬಹುದು.

ವಿವಿಧ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನ

ಮೈಸೂರು,ಆ.12– 2024–25 ನೇ ಸಾಲಿನ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಡಿಪ್ಲೊಮಾ ಪ್ರವೇಶಕ್ಕಾಗಿ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿಯನ್ನು ಪ್ರಾರಂಭ ಮಾಡಲಾಗಿದ್ದು, ಎಸ್‌ಎಸ್‌ಎಲ್‌ಸಿ ಪಾಸಾದ ಅರ್ಹ ಅಭ್ಯರ್ಥಿಗಳಿಂದ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಪಾಸಾದ ಅಭ್ಯರ್ಥಿಗಳಿಗೆ ಡಿಪ್ಲೊಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್, ಡಿಪ್ಲೊಮೋ ಇನ್ ಪ್ರಿಶಿಷನ್ ಮ್ಯಾನುಫ್ಯಾಕ್ಚರಿಂಗ್ ಹಾಗೂ ಡಿಪ್ಲೋಮಾ ಇನ್ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ಕೋರ್ಸ್‌ಗಳು ಲಭ್ಯವಿದ್ದು, 3 ವರ್ಷ ಹಾಗೂ ಕಡ್ಡಾಯ ಒಂದು ವರ್ಷದ ಇಂಟರ್ನ್‌ಷಿಪ್ ತರಬೇತಿಯನ್ನು ನೀಡಲಾಗುವುದು. ಅರ್ಜಿ ಸಲ್ಲಿಸಲು ಆಗಸ್ಟ್ 31 ಕೊನೆಯ ದಿನಾಂಕವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಬೆಳಗೊಳ ಕೈಗಾರಿಕಾ ಪ್ರದೇಶದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ದೂ.ಸಂ:821–2582750 ಹಾಗೂ ಸಹಾಯವಾಣಿ:155267, ಮೊ.ನಂ:9980557205, 8660139259, 9141630315, 9880068986 ಅಥವಾ ವೆಬ್‌ಸೈಟ್ https://gttc.karnataka.gov.in ಹಾಗೂ http://cetonline.karnataka.gov.in/kea ಅನ್ನು ಸಂಪರ್ಕಿಸಬಹುದು ಎಂದು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸಮಾವೇಶದಿಂದ ಮೈಸೂರು ಅಪವಿತ್ರ!!!

ಅರಮನೆ ಬಳಿ ಗೋಮೂತ್ರ ಸಿಂಪಡಿಸಿ ವಾಟಾಳ್ ನಾಗರಾಜ್ ವಿನೂತನ ಪ್ರತಿಭಟನೆ

ಮೈಸೂರು, ಆ.12(ಬಿಎಲ್‌ಯು)– ರಾಜಕೀಯ ಕಾರಣಕ್ಕೆ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸಮಾವೇಶ ನಡೆಸಿದ್ದರಿಂದ ಮೈಸೂರು ಭೂಮಿ ಅಪವಿತ್ರವಾಗಿದೆ ಎಂದು ಮಾಜಿ ಶಾಸಕ ವಾಟಾಳ್ ನಾಗರಾಜ್ ಮೈಸೂರು ಅರಮನೆ ಬಳಿ ಗೋಮೂತ್ರ ಸಿಂಪಡಿಸಿ ವಿನೂತನ ಪ್ರತಿಭಟನೆ ನಡೆಸಿದರು.

ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಸಾಂಕೇತಿಕವಾಗಿ ಗೋಮೂತ್ರ ಸಿಂಪಡಿಸಿ ಶುದ್ಧ ಮಾಡುವ ಮೂಲಕ ವಿನೂತನ ರೀತಿ ಖಂಡಿಸಿದರು.

ಮೂರು ಪಕ್ಷದ ಭ್ರಷ್ಟರು, ಸುಳ್ಳರು ಹಾಗೂ ಕಳ್ಳರ ಪಾದದ ಧೂಳು ಮೈಸೂರಿಗೆ ತಲುಪಿ ಈ ನೆಲ ಅಪವಿತ್ರವಾಗಿದೆ. ಆದ ಕಾರಣ ಗೋಮೂತ್ರ ಸಿಂಪಡಿಸಿ ಪವಿತ್ರಗೊಳಿಸಿದ್ದೇನೆ ಎಂದು ವಾಟಾಳ್ ನಾಗರಾಜ್ ಹೇಳಿದರು.

ರಾಜ್ಯದಲ್ಲಿರುವ ರಾಜಕಾರಣಿಗಳಲ್ಲಿ ಸಿದ್ದರಾಮಯ್ಯ ಉತ್ತಮರು. ಆದ ಕಾರಣ ಅವರ ಬಗ್ಗೆ ನನಗೆ ಗೌರವವಿದೆ. ಸಿದ್ದರಾಮಯ್ಯ ಪ್ರಾಮಾಣಿಕರು, ಆದರೆ ಅವರ ಪಕ್ಷದವರು ಭ್ರಷ್ಟರಾದ ಕಾರಣ ಗೋಮೂತ್ರ ಸಿಂಪಡಿಸಿದ್ದೇನೆ ಎಂದು ಹೇಳಿದರು.

ನನ್ನ ಈ ಹೇಳಿಕೆಯಿಂದ ಸಿದ್ದರಾಮಯ್ಯ ಬಗ್ಗೆ ಮೃದು ಧೋರಣೆ ಹೊಂದಿದ್ದೇನೆ ಎಂದು ಅರ್ಥವಲ್ಲ ಎಂದು ಸ್ಪಷ್ಟಪಡಿಸಿದ ವಾಟಾಳ್, ಬೇರೆ ರಾಜಕಾರಣಿಗಳಿಗೆ ಹೋಲಿಸಿದರೆ ಸಿದ್ದರಾಮಯ್ಯ ಪ್ರಾಮಾಣಿಕರು ಎಂದು ಅಭಿಪ್ರಾಯಪಟ್ಟರು.

ಸಿದ್ದರಾಮಯ್ಯ ವಿರುದ್ಧ ತನಿಖೆ ಮಾಡಲು ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದರೆ ಅದು ಅಸಂವಿಧಾನಿಕ. ಈ ಹಿನ್ನೆಲೆ ರಾಜ್ಯಪಾಲರು ಈ ತೀರ್ಮಾನ ಮಾಡಬಾರದು ಎಂದು ಆಗ್ರಹಿಸಿದರು.

ಸಿದ್ದರಾಮಯ್ಯ ರಾಜೀನಾಮೆಗೆ ಎಲ್ಲರೂ ಆಗ್ರಹಿಸುತ್ತಿದ್ದಾರೆ. ಆದರೆ ಸಿದ್ದರಾಮಯ್ಯ ನಂತರ ಮುಂದಿನ ಒಳ್ಳೆಯ ಮುಖ್ಯಮಂತ್ರಿ ಯಾರು ಎಂಬ ಪ್ರಶ್ನೆಗೆ ಯಾರಲ್ಲೂ ಉತ್ತರವಿಲ್ಲ. ಆದ ಕಾರಣ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರೆಯಲಿ ಎಂದು ವಾಟಾಳ್ ನಾಗರಾಜ್ ಒತ್ತಾಯಿಸಿದರು.



ಮೈಸೂರಿನಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸಮಾವೇಶ ನಡೆಸಿದ್ದರಿಂದ ಮೈಸೂರು ನೆಲ ಅಪವಿತ್ರವಾಗಿದೆ ಎಂದು ದೂರಿ, ಮಾಜಿ ಶಾಸಕ ವಾಟಾಳ್ ನಾಗರಾಜ್ ಮೈಸೂರು ಅರಮನೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಸೋಮವಾರ ಗೋಮೂತ್ರ ಸಿಂಪಡಿಸಿ, ಶುದ್ಧಗೊಳಿಸುವ ಮೂಲಕ ವಿನೂತನ ಪ್ರತಿಭಟನೆ ನಡೆಸಿದರು.

ಬೀದಿ ಬದಿ ವ್ಯಾಪಾರಿಗಳ ಕುಂದು–ಕೊರತೆ ಆಲಿಸಲು ಆರಂಭವಾಗಿದೆ ಕಚೇರಿ

ಮೈಸೂರು,ಆ.12(ಎಂಟಿವೈ)– ಮೈಸೂರು ನಗರಪಾಲಿಕೆಯು ಬೀದಿ ಬದಿ ವ್ಯಾಪಾರಿಗಳ ಕುಂದು ಕೊರತೆ ಆಲಿಸಲು ಇದೇ ಮೊದಲ ಬಾರಿಗೆ ಕಚೇರಿ ತೆರೆದಿದ್ದು, ಮುಂದಿನ ದಿನಗಳಲ್ಲಿ ರಸ್ತೆ ಬದಿ ವ್ಯಾಪಾರಿಗಳು ತಮ್ಮ ಸಮಸ್ಯೆಗಳ ಇತ್ಯರ್ಥಕ್ಕಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಸಿವೇಜ್ ಫಾರಂ ಆವರಣದಲ್ಲಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಪಟ್ಟಣ ವ್ಯಾಪಾರಿ ಸಮಿತಿ ಮತ್ತು ಕುಂದುಕೊರತೆ ನಿವಾರಣಾ ಸಮಿತಿ ಕಚೇರಿಯನ್ನು ಆರಂಭಿಸಿದ್ದು, ಸೋಮವಾರ ಬೆಳಿಗ್ಗೆ ನೂತನ ಕಚೇರಿಯನ್ನು ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಉದ್ಘಾಟಿಸಿ ಮಾತನಾಡಿ, ಬೀದಿ ಬದಿ ವ್ಯಾಪಾರಿಗಳ ಸಮಸ್ಯೆಗಳ ಪರಿಹಾರಕ್ಕೆ ಪಾಲಿಕೆ ಪ್ರಾಮಾಣಿಕವಾಗಿ ಕೆಲಸ ಮಾಡಲು ಬದ್ಧವಾಗಿದೆ. ಬೀದಿ ಬದಿ ವ್ಯಾಪಾರಿಗಳ ಹಿತಕಾಯುವ ನಿಟ್ಟಿನಲ್ಲಿ ನೂತನವಾಗಿ ಕಚೇರಿ ತೆರೆಯಲಾಗಿದೆ. ಈ ನೂತನ ಕಚೇರಿಯಲ್ಲಿ ಪಟ್ಟಣದ ಬೀದಿ ಬದಿ ವ್ಯಾಪಾರಿಗಳ ಸಮಸ್ಯೆಗಳ ನಿವಾರಣೆಯೊಂದಿಗೆ ವಿವಿಧ ಅಭಿವೃದ್ಧಿ ಆಧಾರಿತ ವಿಚಾರಗಳ ಚರ್ಚೆಗೆ ವ್ಯಾಪಾರಿಗಳಿಗೆ ವೇದಿಕೆಯನ್ನು ಕಲ್ಪಿಸಲಾಗಿದೆ ಸ್ಥಳೀಯ ಅಧಿಕಾರಿಗಳು ಈ ಕಚೇರಿಯಲ್ಲಿದ್ದು, ವ್ಯಾಪಾರಿಗಳ ಸಮಸ್ಯೆಗೆ ಸ್ಪಂದಿಸಲಿದ್ದಾರೆ. ವ್ಯಾಪಾರಿಗಳು ಈ ಕಚೇರಿಯ ಸದುಪಯೋಗ ಮಾಡಿಕೊಂಡು ತಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವಂತೆ ಸಲಹೆ ನೀಡಿದರು.

ಬೀದಿ ಬದಿ ವ್ಯಾಪಾರಿಗಳಿಗೆ ಅಗತ್ಯವಾದ ಸೌಲಭ್ಯ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವುದು. ವ್ಯಾಪಾರಿಗಳಿಗೆ ತೊಂದರೆಕೊಡದಂತೆ ಪಾಲಿಕೆ ವತಿಯಿಂದ ನಿಗಾವಹಿಸಲಾಗುವುದು. ಬೀದಿ ಬದಿ ವ್ಯಾಪಾರಿಗಳಿಗೆ ಪ್ರತ್ಯೇಕ ಸ್ಥಳ ನಿಗದಿ ಮಾಡಿ, ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವಂತಹ ಕೆಲಸ ಮಾಡಲಾಗುತ್ತದೆ. ಪ್ರತಿಯೊಬ್ಬ ಬೀದಿ ಬದಿ ವ್ಯಾಪಾರಿಗಳಿಗೂ ಗುರುತಿನ ಚೀಟಿ ಹಾಗೂ ಪ್ರಮಾಣ ಪತ್ರ ನೀಡಲಿದ್ದು, ಇದೇ ಪ್ರಥಮ ಬಾರಿಗೆ ಕಾನೂನಿನ ಚೌಕಟ್ಟಿನಲ್ಲಿ ಬೀದಿ ಬದಿ ವ್ಯಾಪಾರಿಗಳ ಹಿತಕ್ಕಾಗಿ ಇಂತಹ ಉತ್ತಮ ಕೆಲಸವನ್ನು ಮಾಡಿರುವುದು ನಮ್ಮ ನಗರಪಾಲಿಕೆಗೆ ಹೆಮ್ಮೆಯ ಸಂಗತಿ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ವಲಯ ಉಪ ಆಯುಕ್ತ ಮಂಜುನಾಥ್ ರೆಡ್ಡಿ, ಹೆಚ್ಚುವರಿ ಆಯುಕ್ತೆ ಕುಸುಮಕುಮಾರಿ, ಪಾಲಿಕೆ ಆರೋಗ್ಯಧಿಕಾರಿ ಡಾ.ಎನ್.ಪಿ.ವೆಂಕಟೇಶ್, ನಿವೃತ್ತ ನ್ಯಾಯಾಧೀಶರಾದ ವಸಂತ್ ಕುಮಾರ್, ಕರ್ನಾಟಕ ರಾಜ್ಯ ರಸ್ತೆ ಬೀದಿ ಬದಿ ವ್ಯಾಪಾರಿಗಳ ಮಹಾಮಂಡಳ ಅಧ್ಯಕ್ಷ ಭಾಸ್ಕರ್ ಶ್ರೀನಿವಾಸ್ ರಾಜೇ ಅರಸ್, ಸದಸ್ಯರಾದ ಬಿ.ಎಸ್.ರವಿ, ಆರ್.ಗುರುಸ್ವಾಮಿ, ವಿ.ವಡಿವೇಲು, ಪ್ರಭುಸ್ವಾಮಿ, ವಿ.ವಿಶ್ವನಾಥ್ ಬಸಪ್ಪ, ನಾಗರತ್ನಮ್ಮ ಭಾರತಿ, ಅನಿತಾ ಕುಮಾರಿ ಹಾಗೂ ನಾಮನಿರ್ದೇಶಿತ ಸದಸ್ಯರು ಉಪಸ್ಥಿತರಿದ್ದರು.



ಬೀದಿ ಬದಿ ವ್ಯಾಪಾರಿಗಳ ಕುಂದುಕೊರತೆ ನಿವಾರಣೆಗೆ ಕಚೇರಿ ಆರಂಭ

ದಸರಾ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಆಹ್ವಾನಕ್ಕೆ ಮುನ್ನವೇ ಸಾಕಷ್ಟು ಅರ್ಜಿ ಸಲ್ಲಿಕೆ

ಕನ್ನಡ ಸಂಸ್ಕೃತಿ ಇಲಾಖೆಗೆ ಈಗಾಗಲೇ ಬಂದಿವೆ 20ಕ್ಕೂ ಹೆಚ್ಚು ಅರ್ಜಿಗಳು

ಮೈಸೂರು, ಆ.12(ಜಿಎ)– ಪ್ರತಿವರ್ಷ ವಿಶ್ವವಿಖ್ಯಾತ ದಸರಾ ಮಹೋತ್ಸವದಲ್ಲಿ ಅರಮನೆ ಸೇರಿದಂತೆ ಎಂಟು ವೇದಿಕೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದ್ದು, ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಅರ್ಜಿ ಆಹ್ವಾನಕ್ಕೂ ಮುಂಚಿತವಾಗಿ 20ಕ್ಕೂ ಹೆಚ್ಚು ಅರ್ಜಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಬಂದಿವೆ.

ವಿಶ್ವವಿಖ್ಯಾತ ದಸರಾದ ಪ್ರಮುಖ ಆಕರ್ಷಣೆ ಎಂದರೆ ಜಂಬೂಸವಾರಿ ಮೆರವಣಿಗೆ ಹಾಗೂ 9 ದಿನ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮ. ಅರಮನೆಯ ಮುಖ್ಯ ವೇದಿಕೆ ಸೇರಿದಂತೆ ನಗರದ ಎಂಟು ಕಡೆ ಸಾಂಸ್ಕೃತಿಕ ಕಾರ್ಯಕ್ರಮ, ಸಂಗೀತ ಕಛೇರಿ ಹಾಗೂ ನಾಟಕ ಪ್ರದರ್ಶನ ನಡೆಯಲಿದೆ. ಈ ಹಿನ್ನೆಲೆಯಲ್ಲಿ ದೇಶ –ವಿದೇಶಗಳಿಂದ ಅನೇಕ ಕಲಾವಿದರು ಮೈಸೂರಿನ ಕಲಾಮಂದಿರದಲ್ಲಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಚೇರಿಗೆ ನೇರವಾಗಿ ಮತ್ತು ಅಂಚೆ ಮೂಲಕ ಅರ್ಜಿ ಸಲ್ಲಿಸುವುದು ವಾಡಿಕೆ. ಆದರೆ, ಈ ಬಾರಿ ಅರ್ಜಿ ಆಹ್ವಾನಕ್ಕೂ ಮುನ್ನವೇ ಅರ್ಜಿಗಳು ಬರಲಾರಂಭಿಸಿವೆ.



ಸಾಂದರ್ಭಿಕ ಚಿತ್ರ

ಮೈಸೂರು ಅರಮನೆ, ಹುಣಸೂರು ರಸ್ತೆಯ ಕಲಾಮಂದಿರ, ಜಗನ್ಮೋಹನ ಅರಮನೆ, ಗಾನಭಾರತಿ, ನಾದಬ್ರಹ್ಮ ಸಂಗೀತ ಸಭಾ, ಟೌನ್ ಹಾಲ್, ಕಿರುರಂಗಮಂದಿರ, ಚಿಕ್ಕಗಡಿಯಾರ, ನಟನಾ ಹಾಗೂ ಪ್ರಮುಖ ಪಾರ್ಕ್‌ನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಈ ವೇದಿಕೆಗಳಲ್ಲಿ ಶಾಸ್ತ್ರೀಯ ಸಂಗೀತ ಹಾಗೂ ವಿವಿಧ ಸಂಗೀತ ಕಲಾಪ್ರಕಾರಗಳಾದ ಸುಗಮ ಸಂಗೀತ, ಜಾನಪದ, ವಾದ್ಯಸಂಗೀತ, ಜಾನಪದ ನೃತ್ಯ ಕಲಾಪ್ರಕಾರಗಳು, ಹರಿಕಥೆ, ಗಮಕ, ಸಾಮಾಜಿಕ, ಪೌರಾಣಿಕ, ಹಾಸ್ಯ ನಾಟಕಗಳು, ಯಕ್ಷಗಾನ, ತಾಳಮದ್ದಳೆ, ಸೂತ್ರದ ಗೊಂಬೆ, ತೊಗಲು ಗೊಂಬೆ ಪ್ರದರ್ಶನ ನೀಡಲು ದೇಶ–ವಿದೇಶಗಳಿಂದ ಅನೇಕ ಕಲಾವಿದರು ಪೈಪೋಟಿ ನಡೆಸುತ್ತಾರೆ. ಈ ಹಿನ್ನೆಲೆಯಲ್ಲಿ ತಮಗೆ ಅವಕಾಶ ಸಿಗಲಿ ಎಂಬ ಕಾರಣಕ್ಕೆ ಅರ್ಜಿ ಆಹ್ವಾನಕ್ಕೂ ಮುನ್ನವೇ ಕಲಾವಿದರು ಅರ್ಜಿ ಸಲ್ಲಿಸುತ್ತಿದ್ದಾರೆ.

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ಕಥಕ್, ಒಡಿಸ್ಸಿ, ವಯೋಲಿನ್, ಸಿತಾರ್ ಪ್ರದರ್ಶನ ನೀಡಲು ಪಂಜಾಬ್, ಅಸ್ಸಾಂ, ಮಹಾರಾಷ್ಟ್ರ ಕೇರಳ, ತಮಿಳುನಾಡು ರಾಜ್ಯದ ಕಲಾವಿದರು ಪ್ರತಿ ವರ್ಷ ಅರ್ಜಿ ಸಲ್ಲಿಸುತ್ತಾರೆ. ಅಲ್ಲದೆ, ಕೆನಡಾ, ಅಮೆರಿಕಾ, ಬ್ರಿಟನ್‌ನಿಂದಲೂ ಕಲಾವಿದರು ದಸರಾ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಉತ್ಸುಕರಾಗಿದ್ದಾರೆ.

ಕಳೆದ ವರ್ಷ 2300ಕ್ಕೂ ಹೆಚ್ಚು ಅರ್ಜಿಗಳು ಬಂದಿದ್ದವು. ಈ ವರ್ಷ ಅರ್ಜಿ ಆಹ್ವಾನಿಸುವ ಮುನ್ನವೇ 20 ಅರ್ಜಿಗಳು ಬಂದಿವೆ. ಈ ಬಾರಿ ಹೆಚ್ಚಿನ ಅರ್ಜಿಗಳನ್ನು ನಿರೀಕ್ಷೆ ಮಾಡಿದ್ದೇವೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಇಂದು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಹೈ ಪವರ್ ಕಮಿಟಿ ಮೀಟಿಂಗ್ ನಡೆದಿದ್ದು, ಮುಂದಿನ ದಿನಗಳಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮೈಸೂರಲ್ಲಿ ವಿಶೇಷ ಸಭೆ ನಡೆಸಿ ವಿವಿಧ ದಸರಾ ಉಪ ಸಮಿತಿ ಮಾಡಲಾಗುತ್ತದೆ. ನಂತರ ಅನುದಾನ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿ, ದಸರಾ ಸಾಂಸ್ಕೃತಿಕ ಉಪ ಸಮಿತಿ ವತಿಯಿಂದ ಅರ್ಜಿ ಆಹ್ವಾನಿಸಲಾಗುತ್ತದೆ.

-ಡಾ.ಎಂ.ಡಿ. ಸುದರ್ಶನ್,
ಸಹಾಯಕ ನಿರ್ದೇಶಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ನಟನಾ ರಂಗಮಂದಿರದಲ್ಲೂ ಪ್ರದರ್ಶನ

ನಾಟಕ ನೋಡುವ ರಂಗಾಸಕ್ತರು ಮೈಸೂರಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಕಳೆದ ಬಾರಿ ರಾಮಕೃಷ್ಣನಗರದಲ್ಲಿರುವ ನಟನಾ ರಂಗ ಸಂಸ್ಥೆಯಲ್ಲೂ ನಾಟಕಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ಹಾಗೇ ಕರೋಕೆ ಗಾಯಕರ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆ ಒದಗಿಸಬೇಕೆಂಬ ಉದ್ದೇಶದಿಂದ ಮೊದಲ ಬಾರಿಗೆ ದಸರಾದಲ್ಲಿ ಕರೋಕೆ ಗಾಯನ ಆಯೋಜಿಸಲಾಗಿತ್ತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಪಾರ್ಕ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬ್ಯಾಡ್ ನ್ಯೂಸ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಬಂಧ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಫ್ಯಾಮಿಲಿ ಡ್ರಾಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ಅಂಧಗನ್ (ತ)	4 ಪ್ರದರ್ಶನಗಳು
ಸಂಗಂ	
ಭೀಮಾ (ಕ)	4 ಪ್ರದರ್ಶನಗಳು
ಲಿಡೋ	
ಜೀನಿಯಸ್ ಮುತ್ತ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕೇಸ್ ನಂ.15 (ತೆ)	4 ಪ್ರದರ್ಶನಗಳು
ಪ್ರಭಾ	
ಕಬಂಧ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.10.55ಕ್ಕೆ, ಮ.1.35ಕ್ಕೆ, ಸಂ.4.20ಕ್ಕೆ, ರಾ.7.10ಕ್ಕೆ, ಕಮಿಟಿ ಕುರ್ರೋಳು (ತೆ): ರಾ.9.55ಕ್ಕೆ.
ಸ್ಕ್ರೀನ್ 2	ಭೀಮಾ (ಕ): ಬೆ.10.05ಕ್ಕೆ, ಮಿನ್‌ಮಿನಿ (ತ): ಮ.1ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.50ಕ್ಕೆ, ರಾಯನ್ (ತ): ರಾ.7.15ಕ್ಕೆ, ಅಡಿಯೋಸ್ ಅಮಿಗೋ (ಮ): ಬೆ.10.05ಕ್ಕೆ
ಸ್ಕ್ರೀನ್ 3	ಕಬಂಧ (ಕ): ಬೆ.10.35ಕ್ಕೆ, ಜೀನಿಯಸ್ ಮುತ್ತ (ಕ): ಮ.1.20ಕ್ಕೆ, ಅಂಧಗನ್ ದಿ ಪೇನಿಸ್ಟ್ (ತ): ಸಂ.4ಕ್ಕೆ, ಇಟ್ ಎಂಡ್ಸ್ ವಿಥ್ ಅಸ್ (ಇಂ): ರಾ.7ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 4	ಭೀಮಾ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಅಂಧಗನ್ (ತ): ಮ.1.30ಕ್ಕೆ, ಸಂ.6.30ಕ್ಕೆ, ಪೇಚಿ (ತ): ಸಂ.4.15ಕ್ಕೆ, ಸೂಪರ್ ಜಿಂದಗಿ (ಮ): ರಾ.9.15ಕ್ಕೆ.
ಸ್ಕ್ರೀನ್ 2	ಭೀಮಾ (ಕ): ಬೆ.9.30ಕ್ಕೆ, ಮ.12.30ಕ್ಕೆ, ಮ.3.30ಕ್ಕೆ, ಸಂ.6.30ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಭೀಮಾ (ಕ): ಸಂ.4.45ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ರಾಯನ್ (ತ): ಮ.1.15ಕ್ಕೆ, ರಾ.9.30ಕ್ಕೆ

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಬೇಸಿಗೆ ರೇಸ್

6ನೇ ದಿನ, ಮಂಗಳವಾರ, 13–08–2024

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 1.45 ಗಂಟೆಗೆ

I. ರೆಡ್ ರೂಪಸ್ ಪ್ಲೇಟ್ ಡಿ2–1400 ಮೀ. ರೇಟೆಡ್ 00 ರಿಂದ 25. ಮಧ್ಯಾಹ್ನ 1.45ಕ್ಕೆ
1. ಡೀಮುಡ್ ಟು ಫೈರ್ 2. ಡಿ ಫೈಟರ್ 3. ನ್ಯಾಚುರಲ್ ಪ್ಲೈ

II. ರಿಪಬ್ಲಿಕನ್ ಪ್ಲೇಟ್ 2000 ಮೀ. ರೇಟೆಡ್ 20 ರಿಂದ 45. ಮ.2.15ಕ್ಕೆ
1. ಮಾಸ್ಟರಿ 2. ಹೀರೋ ಆಫ್ ದ ಈಸ್ಟ್ 3.

III. ರೆಡ್ ರೂಪಸ್ ಪ್ಲೇಟ್ ಡಿ1–1400 ಮೀ. ರೇಟೆಡ್ 00 ರಿಂದ 25. ಮ.2.45ಕ್ಕೆ
1. ವಂದನ್ 2. ಮಿಲೋಸ್ 3. ನ್ಯಾಚುರಲ್ ಗೋಲ್ಡ್

IV. ಕಿನ್ಸ್‌ಕಿ ಪ್ಲೇಟ್ ಡಿ1–1100 ಮೀ. ರೇಟೆಡ್ 00 ರಿಂದ 25. ಮ.3.15ಕ್ಕೆ
1. ಪೇಸ್ಟ್ ಆಫ್ ಲೈಫ್ 2. ಕ್ವೀನ್ ಸ್ಟಾರ್ 3. ಡಾಲ್‌ಹೌಸಿ

V. ಕೊಡ್ಲಿಪೇಟ್ ಪ್ಲೇಟ್ 1600 ಮೀ. ರೇಟೆಡ್ 40 ರಿಂದ 65.ಮ.3.45ಕ್ಕೆ
1. ನಿವೇದಾ ಗೋಲ್ಡ್ 2. ಸರ್‌ದಾರ್ 3. ಅತುಲ್ಯಾ

VI. ಮೈಸೂರು ಕೋಲ್ಟ್ಸ್ ಟ್ರೈಯಲ್ ಸ್ಟೇಕ್ಸ್ 1400 ಮೀ. 3 ವರ್ಷ (ಟರ್ಮ್ಸ್). ಸಂಜೆ.4.15ಕ್ಕೆ
1. ಮಸಟೊ 2. ರ್‍ಯಾನ್ ಕ್ವಿಲಿನೋ 3. ಅಭೂಷನ್

VII. ಹಿರಿಯೂರ್ ಪ್ಲೇಟ್–1600 ಮೀ. ರೇಟೆಡ್ 60 ಮತ್ತು ಮೇಲ್ಪಟ್ಟ. ಸಂ.4.45ಕ್ಕೆ
1. ರ್‍ಯಾವಿಶಿಂಗ್ ಫಾರ್ಮ 2. ಮಿಸ್ಟಿಕ್ ಡಿವೈನ್ 3. ಮೂನ್‌ಲೈಟ್ ಕ್ವೀನ್

VIII. ಕಿನ್ಸ್‌ಕಿ ಪ್ಲೇಟ್ ಡಿ2–1100 ಮೀ. ರೇಟೆಡ್ 00 ರಿಂದ 25. ಸಂ.5.15ಕ್ಕೆ
1. ರೀಪ್ ದಿ ಬೌಂಟಿ 2. ಮಿಸ್ಟಿಕಲ್ ಮರ್ಲಿನ್ 3. ಸ್ಕ್ವಂಟೋ

ದಿನದ ಅತ್ಯುತ್ತಮ	ಮಾಸ್ಟರಿ
ಡಬ್ಬಲ್	ಮಸಟೊ, ರ್‍ಯಾವಿಶಿಂಗ್ ಫಾರ್ಮ
ಜಾಕ್‌ಪಾಟ್	4, 5, 6, 7 ಮತ್ತು 8
ಮಿನಿ ಜಾಕ್‌ಪಾಟ್	5, 6, 7 ಮತ್ತು 8
I ಟ್ರಿಬಲ್	1, 2 ಮತ್ತು 3
II ಟ್ರಿಬಲ್	3, 4 ಮತ್ತು 5
III ಟ್ರಿಬಲ್	6, 7 ಮತ್ತು 8
ಎಕ್ಸ್‌ಆಕ್ಟ್	1 ರಿಂದ 8

ಟಿಪ್‌ಸ್ಟರ್ ಪಿಜಿಸಿ

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಆ.12– ರಾಮಕೃಷ್ಣನಗರ ಉಪವಿಭಾಗದಲ್ಲಿ ತುರ್ತು ನಿರ್ವಹಣಾ ಕೆಲಸದ ನಿಮಿತ್ತ ಆಗಸ್ಟ್ 14 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಗುರೂರು ಗ್ರಾಮ, ರಾಯನಕೆರೆ, ಕಳಲವಾಡಿ, ಕೋಟೆಹುಂಡಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಡಿಕೆಶಿ ಆದಾಯ ಮೀರಿದ ಆಸ್ತಿ ಗಳಿಕೆ ಪ್ರಕರಣ

ಸಿಬಿಐ ವಿಚಾರಣೆ ಆದೇಶ ಕಾಯ್ದಿರಿಸಿದ ಹೈಕೋರ್ಟ್



ಬೆಂಗಳೂರು: ಡಿಸಿಎಂ ಡಿ.ಕೆ. ಶಿವಕುಮಾರ್ ವಿರುದ್ಧದ ಆದಾಯ ಮೀರಿದ ಆಸ್ತಿ ಗಳಿಕೆ ಪ್ರಕರಣವನ್ನು ಸಿಬಿಐಗೆ ಅನುಮತಿಸಿದ್ದ ಆದೇಶವನ್ನು ಸರ್ಕಾರವು ಹಿಂಪಡೆದಿರುವುದರ ವಿರುದ್ಧ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ವಾದ–ಪ್ರತಿವಾದವನ್ನು ಆಲಿಸಿದ ನ್ಯಾಯಾಲಯ ಆದೇಶವನ್ನು ಕಾಯ್ದಿರಿಸಿದೆ.

ನ್ಯಾಯಾಲಯದಲ್ಲಿ ವಿಚಾರಣೆ ವೇಳೆ ಡಿ.ಕೆ ಶಿವಕುಮಾರ್ ಎಫ್‌ಐಆರ್ ರದ್ದಿಗೆ ಕೋರಿದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾ ಮಾಡಿದೆ ಎಂದು ಸಿಬಿಐ ಪರ ವಕೀಲ ಪ್ರಸನ್ನಕುಮಾರ್ ವಾದ ಮಂಡಿಸಿದರು.

ಸಿಬಿಐಗೆ ಅನುಮತಿಸಿದ್ದ ಆದೇಶವನ್ನು ಸರ್ಕಾರ ಹಿಂಪಡೆದಿರುವುದನ್ನು ಪ್ರಶ್ನಿಸಿ ಸಿಬಿಐ ಮತ್ತು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಡಿಕೆ ಶಿವಕುಮಾರ್ ವಿರುದ್ಧ 2020ರ ಅಕ್ಟೋಬರ್ 3 ರಂದು ಎಫ್‌ಐಆರ್ ದಾಖಲಾಗಿತ್ತು. ಡಿಕೆಶಿ ಆಸ್ತಿ 2013 ರಿಂದ 2018 ರವರೆಗೆ ತೀವ್ರ ಹೆಚ್ಚಾಗಿದೆ ಎಂದು ಸಿಬಿಐ ಆರೋಪಿಸಿದೆ. ಏಪ್ರಿಲ್ 2013 ರಲ್ಲಿ 33.92 ಕೋಟಿ ರೂ. ಮೌಲ್ಯದ ಚರ ಮತ್ತು ಸ್ಥಿರ ಆಸ್ತಿಯನ್ನು ಹೊಂದಿದ್ದ ಡಿ.ಕೆ. ಶಿವಕುಮಾರ್ 2018 ರ ವೇಳೆಗೆ 128.6 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಸಂಪಾದಿಸಿದ್ದಾರೆ. ಏಪ್ರಿಲ್ 30, 2018ರ ವೇಳೆಗೆ ಅವರ ಒಟ್ಟು ಆಸ್ತಿ ಮೌಲ್ಯ 162.53 ಕೋಟಿ ರೂ.ಗೆ ಏರಿಕೆಯಾಗಿದೆ ಎಂದು ಸಿಬಿಐ ಎಫ್‌ಐಆರ್‌ನಲ್ಲಿ ಉಲ್ಲೇಖಿಸಿದೆ.

2017ರಲ್ಲಿ ಆದಾಯ ತೆರಿಗೆ ಇಲಾಖೆ ಡಿಕೆ ಶಿವಕುಮಾರ್ ಮನೆ ಮೇಲೆ ದಾಳಿ ನಡೆಸಿತ್ತು. ಐಟಿ ಇಲಾಖೆ ನೀಡಿದ ಮಾಹಿತಿ ಆಧರಿಸಿ ಜಾರಿ ನಿರ್ದೇಶನಾಲಯ ಡಿಕೆಶಿ ವಿರುದ್ಧ ತನಿಖೆ ಆರಂಭಿಸಿತ್ತು. ಇಡಿ ತನಿಖೆಯನ್ನು ಆಧರಿಸಿ ಡಿಕೆಶಿ ವಿರುದ್ಧ ಎಫ್‌ಐಆರ್ ದಾಖಲಿಸಲು ಸಿಬಿಐ ರಾಜ್ಯ ಸರ್ಕಾರದಿಂದ ಅನುಮತಿ ಕೋರಿತ್ತು. ರಾಜ್ಯದಲ್ಲಿದ್ದ ಬಿಜೆಪಿ ಸರ್ಕಾರ 2019ರ ಸೆ.25ರಂದು ಅನುಮತಿ ನೀಡಿದ ಬೆನ್ನಲ್ಲೇ 2020ರ ಅಕ್ಟೋಬರ್ 3 ರಂದು ಡಿಕೆ ಶಿವಕುಮಾರ್ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಅಕ್ಟೋಬರ್ 2023 ರಲ್ಲಿ ಸಿಬಿಐ ತನಿಖೆಯನ್ನು ರದ್ದುಗೊಳಿಸುವಂತೆ ಶಿವಕುಮಾರ್ ಅವರ ಮನವಿಯನ್ನು ಕರ್ನಾಟಕ ಹೈಕೋರ್ಟ್ ವಜಾಗೊಳಿಸಿತ್ತು. ಇದೇ ವೇಳೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ನೇತೃತ್ವದ ಹೊಸ ಸರ್ಕಾರ ಡಿ.ಕೆ ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ಹಿಂದಿನ ಸರ್ಕಾರ ನೀಡಿದ್ದ ಅನುಮತಿಯನ್ನು ಹಿಂಪಡೆದಿತ್ತು.

ಕೆಸೆಟ್ ಪರೀಕ್ಷೆಯಲ್ಲಿ ಅರ್ಹತೆ ಪಡೆದವರಿಗೆ ಆ.17ರಂದು ದಾಖಲೆ ಪರಿಶೀಲನೆ

ಬೆಂಗಳೂರು: ಕೆಸೆಟ್ ಪರೀಕ್ಷೆಯಲ್ಲಿ ಅರ್ಹತೆ ಪಡೆದು, ವಿವಿಧ ಕಾರಣಗಳಿಂದ ಮೂಲ ದಾಖಲೆಗಳ ಪರಿಶೀಲನೆಗೆ ಒಳಪಡದವರ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA) ಸೋಮವಾರ ಪ್ರಕಟಿಸಿದೆ. ಅಂತಹವರು ಆ.17ರಂದು ಹಾಜರಾಗಿ ಕೆಸೆಟ್ ಪ್ರಮಾಣ ಪತ್ರ ಪಡೆಯಬಹುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ.

ಜು.11ರಿಂದ 22 ಹಾಗೂ 31ರಂದು ಅರ್ಹ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಪರಿಶೀಲನೆ ಮಾಡಿ, ಪ್ರಮಾಣ ಪತ್ರ ಕೂಡ ನೀಡಲಾಗಿದೆ. ಕೆಲವರು ಆ ಸಂದರ್ಭದಲ್ಲಿ ಹಾಜರಾಗಿದ್ದರೂ ಪ್ರಮಾಣ ಪತ್ರ ಕೊಟ್ಟಿರಲಿಲ್ಲ. ಅಂತಹವರು ನಂತರ ಮೂಲ ದಾಖಲೆಗಳನ್ನು ಕೊಟ್ಟು ಮನವಿ ಮಾಡಿದ್ದರ ಹಿನ್ನೆಲೆಯಲ್ಲಿ ತಜ್ಞರ ಸಮಿತಿ ಪರಿಶೀಲಿಸಿ, ಯಾರೆಲ್ಲ ಪ್ರಮಾಣ ಪತ್ರ ಪಡೆಯಲು ಅರ್ಹರು ಎಂಬುದನ್ನು ತೀರ್ಮಾನಿಸಿದೆ. ಅಂತಹವರ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎಂದು ಅವರು ಮಾಹಿತಿ ಹಂಚಿಕೊಂಡಿದ್ದಾರೆ.

ಆ.17ರಂದು ಬೆಳಿಗ್ಗೆ 10ಗಂಟೆಗೆ ಮೂಲ ದಾಖಲೆ ಸಮೇತ ಹಾಜರಾಗಿ ಪ್ರಮಾಣ ಪತ್ರ ಪಡೆಯಬಹುದು. ಅನಿವಾರ್ಯ ಕಾರಣಗಳಿಂದ ಪರಿಶೀಲನೆ ಸಂದರ್ಭದಲ್ಲಿ ಗೈರುಹಾಜರಾಗಿದ್ದವರೂ ಅಂದು ಬಂದು ಪ್ರಮಾಣ ಪತ್ರಗಳನ್ನು ಪಡೆಯಬಹುದು ಎಂದು ತಿಳಿಸಿದ್ದಾರೆ.

ಚನ್ನಪಟ್ಟಣ ಉಪ ಚುನಾವಣೆ: ಎನ್‌ಡಿಎ ಟಿಕೆಟ್ ಸಿಗದಿದ್ದರೆ ಪಕ್ಷೇತರನಾಗಿ ಸ್ಪರ್ಧೆ

ಬಿಜೆಪಿ ಎಂಎಲ್‌ಸಿ ಸಿ.ಪಿ. ಯೋಗೇಶ್ವರ್ ಎಚ್ಚರಿಕೆ



ಬೆಂಗಳೂರು: ಒಕ್ಕಲಿಗ ಪ್ರಬಲ ನಾಯಕರಿಬ್ಬರ ನಡುವಿನ ಪ್ರತಿಷ್ಠೆಯ ಕಣವಾಗಿರುವ ಚನ್ನಪಟ್ಟಣ ಉಪ ಚುನಾವಣೆಯ ಟಿಕೆಟ್ ವಿಚಾರ ಎನ್‌ಡಿಎ ಮಿತ್ರಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್‌ನಲ್ಲಿ ರಾಜಕೀಯ ಲೆಕ್ಕಾಚಾರ ಜೋರಾಗಿಯೇ ನಡೆಯುತ್ತಿದೆ.

ಎನ್‌ಡಿಎ ಅಭ್ಯರ್ಥಿಯಾಗಿಯೇ ನಾನು ಕಣಕ್ಕಿಳಿಯುತ್ತೇನೆ ಎಂದಿರುವ ಬಿಜೆಪಿ ಎಂಎಲ್‌ಸಿ ಸಿ.ಪಿ.ಯೋಗೇಶ್ವರ್, ಒಂದು ವೇಳೆ ಪಕ್ಷದ ಟಿಕೆಟ್ ಕೈತಪ್ಪಿದರೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡುತ್ತೇನೆ ಎಂದು ಎಚ್ಚರಿಕೆ ನೀಡಿದ್ದಾರೆ.

ಚನ್ನಪಟ್ಟಣದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿರುವ ಸಿಪಿ ಯೋಗೇಶ್ವರ್ ಅವರನ್ನು ಬಿಜೆಪಿ ಹೈಕಮಾಂಡ್ ಮಾತುಕತೆಗೆ ಬರುವಂತೆ ದೆಹಲಿಗೆ ಕರೆದಿದೆ.

ಇಂದು ದೆಹಲಿಗೆ ತೆರಳುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಚನ್ನಪಟ್ಟಣ ಕ್ಷೇತ್ರದ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ. ಎನ್‌ಡಿಎ ಅಭ್ಯರ್ಥಿಯಾಗಿ ಕಣಕ್ಕಿಳಿಯಬೇಕು ಎಂಬ ಆಸೆ ಇದೆ. ಒಂದು ವೇಳೆ ಅದು ಸಾಧ್ಯವಾಗಿಲ್ಲ ಅಂದರೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಲು ನಿರ್ಧರಿಸಿದ್ದೇನೆ ಎಂದು ಹೇಳಿದರು. ಈಗಾಗಲೇ ನಮ್ಮ ಕ್ಷೇತ್ರದ ಜನ ಹಲವು ಬಾರಿ ಸ್ವತಂತ್ರವಾಗಿ ನಿಂತರೂ ನನ್ನನ್ನು ಗೆಲ್ಲಿಸಿದ್ದಾರೆ. ಮೈತ್ರಿ ಅಭ್ಯರ್ಥಿಯಾಗಲು ಸಾಧ್ಯವಿಲ್ಲ ಎಂದಾದರೆ ಪಕ್ಷೇತರನಾಗಿ ಸ್ಪರ್ಧಿಸುತ್ತೇನೆ ಹೊರತು ಕಾಂಗ್ರೆಸ್ ಸೇರಲ್ಲ. ಇದುವರೆಗೆ ನನ್ನನ್ನು ಯಾವುದೇ ಕಾಂಗ್ರೆಸ್ ನಾಯಕರು ಸಂಪರ್ಕಿಸಿಲ್ಲ ಎಂದು ಯೋಗೇಶ್ವರ್ ಸ್ಪಷ್ಟಪಡಿಸಿದರು.

ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿ ಅವರ ರಾಜೀನಾಮೆಯಿಂದ ತೆರವಾಗಿರುವ ಚನ್ನಪಟ್ಟಣಕ್ಕೆ ಉಪ ಚುನಾವಣೆ ಎದುರಾಗಿದೆ. ಈ ಚುನಾವಣೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಎಚ್ ಡಿ ಕುಮಾರಸ್ವಾಮಿ ನಡುವಿನ ಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟಿದೆ.

ಹೆಚ್.ಎಸ್. ನಟರಾಜುಗೆ ಪಿಹೆಚ್‌ಡಿ



ಡಾ. ಜಿ.ಟಿ. ರಾಮಚಂದ್ರಪ್ಪ ಅವರ ಮಾರ್ಗದರ್ಶನದಲ್ಲಿ ಹೆಚ್.ಎಸ್. ನಟರಾಜು ಅವರು ರಾಜಕೀಯ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.